*Department of Public Instruction, Mysore.*

# A
# CHILD'S GEOGRAPHY
## IN KANNADA

**S. G. NARASIMHACHAR, B.A.**
**Late Kannada Translator**
**AND**
**B. SUBBA RAO, B.A.**
**Late Assistant Professor, Maharaja's College, Mysore.**

# ಬಾಲ ಭೂವಿವರಣೆ

ಮಾಜಿ ಕನ್ನಡ ಅನುವಾದಕ ಎಸ್. ಜಿ. ನರಸಿಂಹಾಚಾರ್ಯ
ಮತ್ತು
ಮಹಾರಾಜ ಕಾಲೇಜ್ ಮಾಜಿ ಅಸಿಸ್ಟೆಂಟ್ ಪ್ರೊಫೆಸರ್ ಬಿ. ಸುಬ್ಬರಾವ್
ಇವರಿಂದ ರಚಿತವಾದುದು


---

**FOURTEENTH EDITION, 25000 COPIES**

---

**MYSORE**
**PRINTED AT THE GOVERNMENT BRANCH PRESS**
**1927**

**Price 6 Annas**


ಮೈಸೂರು
ಧಾರವಾಡ
ಶಿವಮೊಗ್ಗ
ಚಿತ್ರದುರ್ಗ
ತುಮಕೂರು
ಕೋಲಾರ
ಕಡೂರು
ಹಾಸನ
ಬೆಂಗಳೂರು
ಕೊಯಮುತ್ತೂರು
ನೀಲಗಿರಿ
SCALE 20 10 0 20 40 MILES

The author is indebted to the following firms for the liberty he has taken in adapting some of the illustrations which appear in this book:—

*Messrs. George Bell & Sons.*—"A Child's Geography."—Illustration on pp. 15, 44, 45 and 46.

*Messrs. Blackie & Son, Ltd.*—"Century Geographical Reader No. II."—Illustration on pp. 28, 29 and 53.

*Messrs. Collins.*—"The Wide World Geography Reader, Book IX."—Illustration on p. 41.

These books are recommended for consultation by teachers and further study by pupils.

The author is also indebted to the Basel Mission, Mangalore, for adapting the illustration on p. 38, from their wall diagram, "ಪ್ರಕೃತ್ಯರ್ಥಕ ಭೂಮುಖರೂಪ ವಿಶೇಷಗಳು," which should be used in class teaching.

# ಪೀಠಿಕೆ.

ಭೂವಿವರವರಣೆಯ ಪಾಠವು ಬಹುದಿನದವರೆಗೆ ಬರಿಯ ಬಾಯಿಪಾಠವಾಗಿದ್ದಿತು. ‘ ಹೈದರಾಬಾದ್ ದೇಶಕ್ಕೆ ರಾಜಧಾನಿ ಯಾವುದು ? ಗಂಗಾನದಿಯ ಮೇಲಣ ಪಟ್ಟಣಗಳು ಯಾವುವು ? ಆಗ್ರಾ ಪಟ್ಟಣದ ಜನಸಂಖ್ಯೆ ಎಷ್ಟು ? ’ ಎಂಬಿವೇ ಮುಂತಾದ ಪ್ರಶ್ನೆಗಳಿಗೆ ಉತ್ತರಗಳನ್ನು ತಿಳಿದುಕೊಂಡಲ್ಲಿ ಭೂವಿವರಣೆಯು ಚೆನ್ನಾಗಿ ತಿಳಿದಂತಾಯಿತು ಎಂದು ಭಾವಿಸಿದ್ದರು. ಈಚೆಗೆ ಭೂವಿವರಣೆಯ ಪಾಠಕ್ರಮವೇ ಬೇರೆಯಾಗುತ್ತಿರುವುದು. ಈಗ ಭೂವಿವರಣೆಯ ಬೋಧಕರು ಅನೇಕ ವಿಷಯಗಳನ್ನು ತಿಳಿದಿರಬೇಕಾಗುವುದು. ಒಂದು ಪಟ್ಟಣದಲ್ಲಿ ಜನ ಬಾಹುಳ್ಯಕ್ಕೆ ಕಾರಣವೇನು ? ಇನ್ನೊಂದು ಪಟ್ಟಣದಲ್ಲಿ ಜನರು ದಿನೇ ದಿನೇ ಕಡಿಮೆಯಾಗುತ್ತ ಬರುವುದು ಏತಕ್ಕೆ ? ಒಂದು ದೇಶದಲ್ಲಿ ಜನರಿಗೆ ವ್ಯವಸಾಯದಿಂದಲೇ ಜೀವನ ; ಮತ್ತೊಂದರಲ್ಲಿ ಕೈಗಾರಿಕೆಯಿಂದಲೇ ಜೀವನವೇಕೆ ? ಒಂದೊಂದು ದೇಶದ ಉಡಿಗೆ, ತೊಡಿಗೆ, ಆಹಾರ, ವ್ಯವಹಾರ, ಒಂದೊಂದು ರೀತಿಯಾಗಿರುವುದಕ್ಕೆ ಕಾರಣಗಳೇನು ? ಒಂದು ಕಡೆ ಏಕೆ ಚಳಿ ಹೆಚ್ಚು ? ಮತ್ತೊಂದು ಕಡೆ ಬೇಸಿಗೆಯಲ್ಲಿ ಏಕೆ ಬೇಗೆ ಹೆಚ್ಚು ? ಒಂದೊಂದು ದೇಶದಲ್ಲಿ ಬೆಳೆಯುವ ಸಸ್ಯಾದಿಗಳೂ, ವಾಸವಾಗಿರುವ ಪಕ್ಷಿ, ಮೃಗಾದಿಗಳೂ, ಇನ್ನೊಂದು ದೇಶದಲ್ಲಿ ಇಲ್ಲದಿರಲು ಕಾರಣವೇನು ? ಈ ರೀತಿಯಲ್ಲಿ ಏಕೆ ? ಹೇಗೆ ?—ಎಂಬ ಇವೇ ಮೊದಲಾದ ಪ್ರಶ್ನೆಗಳಿಗೆ ಸಮಂಜಸವಾಗಿ ಉತ್ತರಗಳು ಬರುವಂತೆ, ಎಂದರೆ ಕಾರ್ಯ ಕಾರಣ ವಿಧಿಯೊಡನೆ ಭೂವಿವರಣೆಯನ್ನು ತಿಳಿಯಲೂ, ತಿಳಿಸಲೂ, ಯತ್ನಿಸುತ್ತಿರುವರು. ಬಾಲ್ಯದಿಂದಲೂ ಈ ತೆರನಾಗಿ ಭೂವಿವರಣೆಯನ್ನು ಕಲಿಸಿದರೆ ಪ್ರಯೋಜನಕಾರಿಯೆಂದು ವಿದ್ಯಾಭಿಮಾನಿಗಳು ಗ್ರಹಿಸಿ ಬಾಲಬೋಧೆಯನ್ನು ಮಾಡುತ್ತಿರುವರು.

ಈ ಕ್ರಮವರಿತು ಬೋಧಿಸಲು ತಕ್ಕ ಪುಸ್ತಕಗಳಿಲ್ಲವೆಂದು ಮೈಸೂರು ಸರ್ಕಾರದ ವಿದ್ಯಾ ಇಲಾಖೆಯವರು ಹಿಂದೆ ಟ್ರಾನ್ಸ್‌ಲೇಟರ್ ಆಗಿದ್ದು ಗತಿಸಿದ ಮ॥ರಾ॥ ಎಸ್. ಜಿ. ನರಸಿಂಹಾಚಾರ್ಯರವರಿಂದ ಬಾಲಭೂವಿವರಣೆಯೊಂದನ್ನು ಬರೆಯಿಸಲು ಏರ್ಪಾಡಿಸಿದರು. ಪುಸ್ತಕವು ಪೂರೈಸಿ ಮುದ್ರಣಕ್ಕೆ ಸಿದ್ಧವಾಗುವುದರೊಳಗಾಗಿ ಅವರು ಸ್ವರ್ಗಸ್ಥರಾದುದರಿಂದ, ಹಿಂದೆ ಇನ್ಸ್‌ಪೆಕ್ಟರ್ ಜನರಲ್‌ರವರಾಗಿದ್ದ ಮೆ॥ ಎಚ್. ಜೆ. ಭಾಭಾ ಸಾಹೇಬರು ನನ್ನಲ್ಲಿಗೆ ಆ ಕೈಬರಹದ ಮಾತೃಕೆಯನ್ನು ಕಳುಹಿಸಿಕೊಟ್ಟರು. ನನ್ನ ಮಿತ್ರರ ಸಹಾಯದಿಂದ ನಾನು ಅದನ್ನು ತಕ್ಕಮಟ್ಟಿಗೆ ಕ್ರಮಪಡಿಸಿರುವೆನು. ಈಗ ಇರುವ ರೀತಿಯಲ್ಲಿ ಲೋಪ, ದೋಷಗಳು ಇದ್ದಲ್ಲಿ ಅವು ನನ್ನದಾಗಿರುವುವು.

ಈ ಪುಸ್ತಕವನ್ನು ಬೋಧಿಸತಕ್ಕವರು ಭೂವಿವರಣೆಯ ಪಾಠದಲ್ಲಿ ಮಕ್ಕಳಿಗೆ ಅಭಿರುಚಿಯುಂಟಾಗುವಂತೆ, ಬಾಲಕರು ಓದುವ ಪಾಠಶಾಲೆ, ಇರುವ ಊರು, ತಾಲ್ಲೂಕು, ಡಿಸ್ಟ್ರಿಕ್ಟು, ದೇಶ—ಹೀಗೆ ಒಂದರಿಂದ ಮತ್ತೊಂದನ್ನು ಕ್ರಮವರಿತು ಬೋಧಿಸಬೇಕು. ಆ ಬಾಲಕರು ವಾಸಮಾಡುವ ಸ್ಥಳದಲ್ಲಿ ಕೆಲ ಕೆಲ ಪೈರುಗಳನ್ನು ಮಾಡುವರು ಏಕೆ ? ಇತರ ಪೈರುಗಳನ್ನು ಮಾಡುವುದಿಲ್ಲ ಏಕೆ ? ಅಲ್ಲಿ ಯಾವುದಾದರೂ ಕೈಗಾರಿಕೆ ಇದ್ದರೆ ಆ ಕೈಗಾರಿಕೆ ಅಲ್ಲಿರಲು ಕಾರಣವೇನು ? ಅಲ್ಲಿ ಸಂತೆ ಸೇರುವ ಸ್ಥಳವಾಗಿದ್ದರೆ ಅದಕ್ಕೆ ಕಾರಣವೇನಿರಬಹುದು ? ಅಲ್ಲಿ ರೈಲಿಲ್ಲದಿದ್ದರೆ ಅದು ಇಲ್ಲದಿರಲು ಕಾರಣವೇನು ?—ಇವೇ ಮುಂತಾದ ವಿಷಯಗಳಿಗೆ ಮಕ್ಕಳು ಗಮನಕೊಡುವಂತೆ ಮಾಡಬೇಕು. ಒಂದು ದೇಶದ ಭೂವಿವರಣೆಯನ್ನು ಬೋಧಿಸುವಾಗ ಆ ದೇಶದ ಜನರ ಉಡುಗೆ, ವೃತ್ತಿ, ಕಟ್ಟಡ, ಮುಂತಾದುವುಗಳ ಚಿತ್ರಪಠಗಳನ್ನು ತೋರಿಸಬೇಕು. ಮಕ್ಕಳು ನೋಡಿದ ವಿಚಾರವನ್ನು ಚಿತ್ರರೂಪವಾಗಿಯಾಗಲಿ, ನಕ್ಷೆಯ ರೂಪವಾಗಿಯಾಗಲಿ ಬರೆಯುವಂತೆ ಮಾಡಬೇಕು.

ಭೂಪಟವಿಲ್ಲದೆ ಭೂವಿವರಣೆಯನ್ನು ಎಂದಿಗೂ ಬೋಧಿಸಬಾರದು. ಭೂಪಟವಿಲ್ಲದ ಕಡೆಯಲ್ಲಿ ಉಪಾಧ್ಯಾಯರು ಕಪ್ಪುಹಲಗೆಯ ಮೇಲೆ

ಬರೆದಾಗಲಿ, ನೆಲದಮೇಲೆ ಆ ದೇಶದ ಆಕಾರವನ್ನು ಕೆತ್ತಿಯಾಗಲಿ, ಪಾಠ ಹೇಳಬೇಕು. ಆ ದೇಶದ ನಕ್ಷೆಯನ್ನು ಮಕ್ಕಳಿಂದ ಬರೆಯಿಸಬೇಕು ; ಅದರ ಆಕಾರವನ್ನು ಜೇಡಿಮಣ್ಣಿನಲ್ಲಿ ಅಥವಾ ರಟ್ಟುಕಾಗದದಲ್ಲಿ ಬಾಲಕರಿಂದ ಮಾಡಿಸಬೇಕು. ಒಂದು ನದಿಯು ಈಗ ಹರಿದು ಹೋಗುತ್ತಿರುವ ದಾರಿಯನ್ನು ಬಿಟ್ಟು ಇನ್ನೊಂದು ದಾರಿಯನ್ನು ಹಿಡಿದು ಹೋಗದು ಏಕೆ ? ಎಂಬುದನ್ನು ಬಾಲಕರಿಗೆ ತಿಳಿಸಬೇಕು. ದ್ವೀಪ, ಪರ್ಯಾಯದ್ವೀಪ, ಮುಂತಾದುವುಗಳ ವ್ಯಾಖ್ಯೆಯನ್ನು ತಿಳಿಸುವಾಗ ಅವುಗಳ ಆಕೃತಿಯನ್ನು ಮರಳು, ನೀರು, ಜೇಡಿಯಮಣ್ಣು. ಇವುಗಳಿಂದಾಗಲಿ, ನೆಲದಮೇಲೆ ಕೆತ್ತಿ, ಅಲ್ಲಿ ನೀರನ್ನು ಹೊಯ್ದಾಗಲಿ, ಸ್ಪಷ್ಟಗೊಳಿಸಬೇಕು. ದೊಡ್ಡಮಳೆಬಿದ್ದ ಮಾರನೆಯದಿನ ಮಕ್ಕಳಿಗೆ ಜಲಭಾಗ, ನೆಲದ ಭಾಗಗಳ ವ್ಯಾಖ್ಯೆಯನ್ನು ತಕ್ಕಮಟ್ಟಿಗೆ ವ್ಯಕ್ತಗೊಳಿಸಬಹುದು. ಮಕ್ಕಳು ನೋಡದಿರುವ ಧಾನ್ಯಗಳು ಒಂದು ಪ್ರದೇಶದಲ್ಲಿ ಬೆಳೆಯುವುವಾಗಿದ್ದರೆ, ಸಾಧ್ಯವಾದರೆ ಆ ಧಾನ್ಯಗಳನ್ನು ತರಿಸಿ ಮಕ್ಕಳಿಗೆ ತೋರಿಸಬೇಕು. ಮುಖ್ಯವಾಗಿ ಭೂವಿವರಣೆಯನ್ನು ಬಾಯಿಪಾಠಮಾಡಿಸುವ ಪದ್ಧತಿಯನ್ನು ಬಿಟ್ಟು ತಿಳಿವಳಿಕೆಯಿಂದ ಕಲಿಸುವ ಮಾರ್ಗವನ್ನು ಹಿಡಿದು, ಉಪಾಧ್ಯಾಯರು ಭೂಪಟವನ್ನಿಟ್ಟುಕೊಂಡು ಅದರ ಮೇಲೆ ಬೋಧಿಸುತ್ತ ಬಂದಲ್ಲಿ, ಮಕ್ಕಳಿಗೆ ಭೂವಿವರಣೆಯ ಪಾಠದಲ್ಲಿ ಅಭಿರುಚಿಯನ್ನು ಕಲ್ಪಿಸಿ, ಭೂಸ್ವಭಾವವನ್ನು ನೋಡಿ ತಿಳಿಯುವ ಮಾರ್ಗವನ್ನು ತೋರಿಸಿದಂತೆ ವಿದ್ಯಾಭಿಮಾನಿಗಳು ಭಾವಿಸುವರು.

ಈ ಪುಸ್ತಕದಲ್ಲಿ ಕೊಟ್ಟಿರುವ ಕೆಲವು ಚಿತ್ರಗಳನ್ನು ಈ ದೇಶದ ಪಾಠಶಾಲೆಗಳಲ್ಲಿ ಉಪಯೋಗಿಸುವ ದೊಡ್ಡದೊಡ್ಡ ಭೂಪಟಗಳಿಂದ ತೆಗೆದುಕೊಂಡಿದೆ. ಮತ್ತೆ ಕೆಲವನ್ನು ಪ್ರಸಿದ್ಧ ಗ್ರಂಥಕರ್ತರಿಂದ ಮಕ್ಕಳಿಗೋಸ್ಕರ ಮುದ್ರಣವಾದ ಭೂವಿವರಣೆಯ ಪುಸ್ತಕಗಳಿಂದ ತೆಗೆದುಕೊಂಡಿದೆ.

ಮೈಸೂರು
8-5-1911

ಬಾಪು ಸುಬ್ಬರಾವ್.

# ಮೂರನೆಯ ಮುದ್ರಣದ ಪೀಠಿಕೆ.

ಈ ಮುದ್ರಣದಲ್ಲಿ ಮಾಡಿರುವ ಕೆಲವು ಬದಲಾವಣೆಗಳೂ, ಸೇರಿಸಿರುವ ಹೊಸ ವಿಷಯಗಳೂ ಬೋಧಕರಿಗೆ ಸಹಕಾರಿಯಾಗಿರುವುವೆಂದು ನಂಬಿರುವೆನು.

ಮೈಸೂರು
11-5-1924

ಬಾಪು ಸುಬ್ಬರಾವ್.

# ವಿಷಯ ಸೂಚಿಕೆ.

## ಮೊದಲನೆಯ ಭಾಗ.


| ವಿಷಯ | | ಪುಟ |
|---|---|---|
| ೧. | ಭೂವಿವರಣೆ | 1 |
| ೨. | ದಿಕ್ಕುಗಳು | 3 |
| ೩. | ದಿಕ್ಕುಗಳು | 4 |
| ೪. | ದೂರ, ದಿಕ್ಕು | 6 |
| ೫. | ಅಳತೆ | 7 |
| ೬. | ಭೂಪಟ | 9 |
| ೭. | ಚಿತ್ರ, ನಕ್ಷೆ | 9 |
| ೮. | ದಿಕ್ಸೂಚಿ | 12 |
| ೯. | ಪ್ರಮಾಣರೇಖೆ | 12 |
| ೧೦. | ಹಳ್ಳಿಯ ನಕ್ಷೆ | 13 |
| ೧೧. | ಬೆಟ್ಟ, ಹೊಳೆ, ಮೊದಲಾದುವನ್ನು ಸೂಚಿಸುವ ಗುರುತುಗಳು | 15 |
| ೧೨. | ಮೈಸೂರು—ಭೂಪಟ, ಎಲ್ಲೆಗಳು | 16 |
| ೧೩. | ಮೈಸೂರು—ಬೆಟ್ಟಗಳೂ, ನದಿಗಳೂ | 18 |
| ೧೪. | ಮೈಸೂರು—ವಿಭಾಗಗಳು | 19 |
| ೧೫. | ಮೈಸೂರು ದೇಶದ ಡಿಸ್ಟ್ರಿಕ್ಟುಗಳು— | |
| | (೧) ಮೈಸೂರು ಡಿಸ್ಟ್ರಿಕ್ಟು | 20 |
| | (೨) ಬೆಂಗಳೂರು ಡಿಸ್ಟ್ರಿಕ್ಟು | 21 |
| | (೩) ಕೋಲಾರ ಡಿಸ್ಟ್ರಿಕ್ಟು | 22 |
| | (೪) ತುಮಕೂರು ಡಿಸ್ಟ್ರಿಕ್ಟು | 23 |
| | (೫) ಹಾಸನ ಡಿಸ್ಟ್ರಿಕ್ಟು | 23 |

| ವಿಷಯ | | ಪುಟ |
|---|---|---|
| | (೬) ಕಡೂರು ಡಿಸ್ಟ್ರಿಕ್ಟು | 24 |
| | (೭) ಶಿವಮೊಗ್ಗಾ ಡಿಸ್ಟ್ರಿಕ್ಟು | 24 |
| | (೮) ಚಿತ್ರದುರ್ಗ ಡಿಸ್ಟ್ರಿಕ್ಟು | 24 |
| ೧೬. | ಮೈಸೂರು ದೇಶದ ವಿಸ್ತೀರ್ಣ ಮತ್ತು ಆಡಳಿತ | 25 |


## ಎರಡನೆಯ ಭಾಗ.


| | | |
|---|---|---|
| ೧. | ಭೂಮಿಯ ಆಕಾರ | 27 |
| ೨. | ಭೂಮಿಯು ಗುಂಡಾಗಿದೆ ಎಂಬುದನ್ನು ತಿಳಿಯುವ ಬಗೆ ಹೇಗೆ ? | 27 |
| ೩. | ಭೂಚಲನೆ | 31 |
| ೪. | ಹಗಲು ರಾತ್ರಿಗಳು | 32 |
| ೫. | ಸಂವತ್ಸರ | 33 |
| ೬. | ಭೂಮಿಯ ಅಳತೆ | 34 |
| ೭. | ಭೂಪಟದ ಮೇಲಣ ಗೆರೆಗಳು | 35 |
| ೮. | ಪಂಚವಲಯಗಳು | 37 |
| ೯. | ಉಷ್ಣವಲಯ | 38 |
| ೧೦. | ಸಮಶೀತೋಷ್ಣವಲಯಗಳು | 39 |
| ೧೧. | ಶೀತವಲಯಗಳು | 40 |
| ೧೨. | ವಾಯುಗುಣ | 42 |
| ೧೩. | ಭೂಮಿಯ ಮೇಲೆ ವಾಸವಾಗಿರುವ ಜನ | 43 |
| [illegible] | [illegible] | 44 |
| [illegible] | [illegible] | 47 |
| [illegible] | [illegible] | 48 |
| [illegible] | ಸಮುದ್ರದಿಂದ ಆಗುವ ಪ್ರಯೋಜನಗಳು | 50 |
| [illegible] | [illegible] | 51 |

ವಿಷಯ ಪುಟ

೧೯. ಜಲವಿಭಾಗಗಳು .. .. .. 52

೨೦. ಭೂಗೋಳ .. .. .. .. 56

೨೧. ಭೂಗೋಳ .. .. .. .. 57

೨೨. ಮೈಸೂರು ಸೀಮೆ .. .. .. 58

೨೩. ಮೈಸೂರು ಸೀಮೆ .. .. .. 61

೨೪. ಮೈಸೂರು ಸೀಮೆ .. .. .. 63

೨೫. ಮೈಸೂರು ಸೀಮೆ .. .. .. 66

೨೬. ಡಿಸ್ಟ್ರಿಕ್ಟುಗಳು.—

(೧) ಮೈಸೂರು ಡಿಸ್ಟ್ರಿಕ್ಟು .. .. .. 70

(೨) ಹಾಸನ ಡಿಸ್ಟ್ರಿಕ್ಟು .. .. .. 73

(೩) ಕಡೂರು ಡಿಸ್ಟ್ರಿಕ್ಟು .. .. .. 76

(೪) ಶಿವಮೊಗ್ಗಾ ಡಿಸ್ಟ್ರಿಕ್ಟು .. .. .. 77

(೫) ಚಿತ್ರದುರ್ಗ ಡಿಸ್ಟ್ರಿಕ್ಟು .. .. .. 79

(೬) ತುಮಕೂರು ಡಿಸ್ಟ್ರಿಕ್ಟು .. .. .. 81

(೭) ಕೋಲಾರ ಡಿಸ್ಟ್ರಿಕ್ಟು .. .. .. 82

(೮) ಬೆಂಗಳೂರು ಡಿಸ್ಟ್ರಿಕ್ಟು .. .. .. 84

೨೭. ಮದ್ರಾಸು ಅಧಿಪತ್ಯ .. .. .. 86

೨೮. ಮದ್ರಾಸು ಅಧಿಪತ್ಯಕ್ಕೆ ಒಳಪಟ್ಟ ಆಶ್ರಿತ ಸಂಸ್ಥಾನಗಳು—

(೧) ತಿರುವಾಂಕೂರು .. .. .. 93

(೨) ಕೊಚ್ಚಿ .. .. .. .. 93

(೩) ಪುದುಕೋಟೆ .. .. .. 94

೨೯ ಕೊಡಗು .. .. .. .. 94

೩೦. ಹೈದರಾಬಾದು .. .. .. .. 95

# ಚಿತ್ರಸೂಚಿ.


| ಚಿತ್ರಗಳು | ಪುಟ |
|---|---|
| ಮೈಸೂರು ಭೂಪಟ .. .. .. | ಮುಖಪತ್ರ |
| ಸಪ್ತಋಷಿಮಂಡಲ—ಧ್ರುವನಕ್ಷತ್ರ .. .. .. | 5 |
| ನಾವಿಕರ ಉತ್ತರಮುಖಿ .. .. .. .. | 5 |
| ಅರ್ಧ ಅಡಿ ; ಅಂಗುಲಗಳು ವಿಭಾಗಗಳು ; ಟೇಪು .. .. | 8 |
| ಮನೆಯ ನಕ್ಷೆ .. .. .. .. | 10 |
| ಮನೆಯ ಚಿತ್ರ .. .. .. .. | 11 |
| ಹಳ್ಳಿಯ ಚಿತ್ರ .. .. .. .. | 14 |
| ಬೆಟ್ಟ, ಹೊಳೆ .. .. .. .. | 15 |
| ಬೆಟ್ಟ, ನದಿ, ರೈಲುರಸ್ತೆ, ಎಲ್ಲೆ .. .. .. | 16 |
| ಮೈಸೂರು ಭೂಪಟ, ಎಲ್ಲೆಗಳು .. .. .. | 17 |
| ಮೈಸೂರು ದೊಡ್ಡಪೇಟೆ .. .. .. | 20 |
| ಬೆಂಗಳೂರು ಅಠಾರಾ ಕಚೇರಿ .. .. .. | 21 |
| ಉರಿಗಾಂ ಬಂಗಾರದ ಗಣಿ .. .. .. | 22 |
| ಬೇಲೂರು ದೇವಸ್ಥಾನ .. .. .. .. | 23 |
| ಚಿತ್ರದುರ್ಗದ ಕೋಟೆ .. .. .. .. | 24 |
| ಶ್ರೀಮನ್ಮಹಾರಾಜ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್, ಜಿ.ಸಿ.ಎಸ್.ಐ., ಜಿ.ಬಿ.ಇ., ಯವರು .. .. .. | 26 |
| ಸಮುದ್ರದಲ್ಲಿ ಸಂಚರಿಸುವ ಹಡಗುಗಳು .. .. .. | 28 |
| ಚೆಂಡೂ ಅದರ ನೆರಳು, ತಟ್ಟೆಯೂ ಅದರ ನೆರಳು .. .. | 29 |
| ಏಣಿನ ಮುಖವಾಗಿ ಹಿಡಿದ ತಟ್ಟೆ ಮತ್ತು ಅದರ ನೆರಳು .. .. | 29 |
| ಗ್ರಹಣಗಳು .. .. .. .. | 30 |

| ಚಿತ್ರಗಳು | ಪುಟ |
|---|---|
| ಭೂಪಥ, ಚಂದ್ರಪಥ .. .. .. .. | 32 |
| ಹಗಲು, ರಾತ್ರಿ .. .. .. .. | 33 |
| ಭೂಪಟದಮೇಲಣ ಗುರುತುಗಳು .. .. .. | 35 |
| ವಲಯಗಳಲ್ಲಿಯ ಸಸ್ಯಗಳು .. .. .. | 38 |
| ಶೀತವಲಯದವರು .. .. .. .. | 41 |
| ಮಾನವ ವರ್ಗಗಳು .. .. .. .. | 44 |
| ಭೂಜಲ ವಿಭಾಗಗಳು .. .. .. .. | 45 |
| ಜ್ವಾಲಾಮುಖಿ .. .. .. .. | 46 |
| ನದೀಪಾತ್ರ .. .. .. .. | 53 |
| ಶಿವನಸಮುದ್ರ—ಭರಚುಕ್ಕಿ ಜಲಪಾತ .. .. .. | 54 |
| ಭೂಗೋಳಗಳು .. .. .. .. | 56 |
| ಏಷ್ಯಾ ಖಂಡದ ಭೂಪಟ .. .. .. .. | 59 |
| ಮಾರೀಕಣಿವೆಯ ಕೆರೆ .. .. .. .. | 61 |
| ಸರಾಸರಿ ಮಳೆ .. .. .. .. | 64 |
| ಮೈಸೂರು ಹೊಸ ಅರಮನೆ .. .. .. | 70 |
| ಶ್ರೀರಂಗಪಟ್ಟಣ—ದಿಡ್ಡೀಬಾಗಿಲು .. .. .. | 71 |
| ಗೋಮಟೇಶ್ವರ .. .. .. .. | 74 |
| ಶ್ರವಣಬೆಳಗೊಳ—ಚಂದ್ರಬೆಟ್ಟ .. .. .. | 75 |
| ಹಳೆಯಬೀಡು ದೇವಸ್ಥಾನ .. .. .. | 75 |
| ಗೇರುಸೊಪ್ಪೆ ಜಲಪಾತ .. .. .. .. | 78 |
| ಬೆಂಗಳೂರು ದೊಡ್ಡಪೇಟೆ .. .. .. | 84 |
| ಬೆಂಗಳೂರು ಅವೆನ್ಯೂ ರೋಡ್ .. .. .. | 85 |
| ಮದ್ರಾಸು ಅಧಿಪತ್ಯ .. .. .. .. | 87 |
| ಮದ್ರಾಸು ಬಂದರು .. .. .. .. | 88 |
| ತೋಡರು .. .. .. .. | 90 |

| ಚಿತ್ರಗಳು | ಪುಟ |
|---|---|
| ಶ್ರೀರಂಗದಲ್ಲಿ ಕುದುರೆ ಕಂಬಸಾಲಿನ ಮಂಟಪ .. .. | 92 |
| ತಿರುಚಿನಾಪಲ್ಲಿ—ಮಾತೃಭೂತೇಶ್ವರ ದೇವಸ್ಥಾನ .. .. | 92 |


---

ಇಲ್ಲಿ ಕೊಟ್ಟಿರುವ ಭೂಪಟಗಳು ವಿದ್ಯಾಭ್ಯಾಸದ ಇಲಾಖೆಯ ಮೈಸೂರು ಸರ್ಕಾರ್ ಓವರ್ಸಿಯರಾಗಿರುವ ಮ॥ ರಾ॥ ಬಿ. ಮಾಧವರಾಯರಿಂದ ವಿಶೇಷ ವಿಚಕ್ಷಣೆಯಿಂದ ಬರೆಯಲ್ಪಟ್ಟುವು.

# ಬಾಲಭೂವಿವರಣೆ
## ಮೊದಲನೆಯ ಭಾಗ

### ೧. ಭೂವಿವರಣೆ.

ನಮ್ಮ ಮಠದ ಬಾಗಿಲಲ್ಲಿ ನಿಂತುಕೊಂಡು ನೋಡಿದರೆ ಎದುರಿಗೆ ಮನೆಗಳು ಕಾಣಿಸುವುದಿಲ್ಲವೆ? ಅವುಗಳಿಗೂ ನಮ್ಮ ಮಠಕ್ಕೂ ನಡುವೆ ಬಿಟ್ಟಿರುವ ಸ್ಥಳಕ್ಕೆ ಬೀದಿ ಎಂದು ಹೆಸರು. ಬೀದಿಗಳ ಎರಡು ಪಕ್ಕಗಳಲ್ಲಿಯೂ ಮನೆಗಳಿರುತ್ತವೆ. ಬೀದಿಗಳು ಜನರಿಗೂ, ದನಕರುಗಳಿಗೂ, ಬಂಡಿಗಳಿಗೂ, ತಿರುಗಾಡುವುದಕ್ಕೆ ಅನುಕೂಲವಾಗಿರುತ್ತವೆ.

ಹಳ್ಳಿಗಳಲ್ಲಿಯೂ, ಸಣ್ಣ ಊರುಗಳಲ್ಲಿಯೂ ಎರಡೋ ಮೂರೋ ಬೀದಿಗಳಿರುತ್ತವೆ. ಆ ಬೀದಿಗಳು ಚೊಕ್ಕವಾಗಿರುವುದಿಲ್ಲ; ನೆಟ್ಟಗೂ ಇರುವುದಿಲ್ಲ; ಹಳ್ಳ ತಿಟ್ಟಾಗಿ ಸೊಟ್ಟಸೊಟ್ಟಗೆ ತಿರುಗಿಕೊಂಡಿರುತ್ತವೆ. ಹಳ್ಳಿಗಳಲ್ಲಿ ಹುಲ್ಲಿನ ಮನೆಗಳೇ ಹೆಚ್ಚು; ಹೆಂಚಿನ ಮನೆಗಳು ಕೆಲಕೆಲವಿರುತ್ತವೆ; ಇಟ್ಟಿಗೆ ಗಾರೆಯ ಮನೆಗಳು ಪ್ರಾಯಶಃ ಇರುವುದಿಲ್ಲ; ಜನರೂ ಹೆಚ್ಚಾಗಿರುವುದಿಲ್ಲ. ಇರುವವರಲ್ಲಿಯೂ ಮುಕ್ಕಾಲುಪಾಲು ಜನರು ಹೊಲಗಳನ್ನೋ, ತೋಟಗಳನ್ನೋ, ಮಾಡಿಕೊಂಡಿರುತ್ತಾರೆ. ಆ ಹೊಲಗದ್ದೆಗಳೂ, ತೋಟಗಳೂ, ಊರಿಗೆ ಸಮೀಪದಲ್ಲೇ ಇರುತ್ತವೆ. ಅವುಗಳಿಗೆ ಅಲ್ಲಿಯ ಕೆರೆಯ ನೀರೋ ಅಥವಾ ಕಾಲುವೆಯ ನೀರೋ ಮುಖ್ಯವಾದ ಆಧಾರವಾಗಿರುತ್ತದೆ. ಕೆಲವುಕಡೆ ಕಪಿಲೆಗಳ ಮೂಲಕ ನೀರು ಹಾಯಿಸುವುದೂ ಉಂಟು.

ಆದರೆ ದೊಡ್ಡ ಪಟ್ಟಣಗಳಲ್ಲಿ ಹೀಗೆ ಇರುವುದಿಲ್ಲ; ಅವುಗಳ ರೀತಿಯೇ ಬೇರೆ. ಮೈಸೂರು, ಬೆಂಗಳೂರಿನಂತಹ ದೊಡ್ಡ ಪಟ್ಟಣಗಳಲ್ಲಿ ಹಲವು ದೊಡ್ಡ ಬೀದಿಗಳಿರುತ್ತವೆ. ಅವುಗಳು ಅಗಲವಾಗಿಯೂ, ನೇರವಾಗಿಯೂ, ಇರುತ್ತವೆ. ಅವುಗಳಿಗೆ ಜಲ್ಲಿಯನ್ನೂ, ಮಣ್ಣನ್ನೂ ಹಾಕಿ ಗಟ್ಟಿಸುತ್ತಾರೆ. ಮಳೆಯ ನೀರು ಹರಿದುಹೋಗುವಂತೆ ಬೀದಿಗಳ

ಎರಡು ಕಡೆಗಳಲ್ಲಿಯೂ ಚರಂಡಿಗಳನ್ನು ಕಟ್ಟಿರುತ್ತಾರೆ. ಬೀದಿಗಳ ಎರಡು ಪಕ್ಕಗಳಲ್ಲಿಯೂ ಮನೆಗಳು ಸಾಲಾಗಿರುತ್ತವೆ. ಪಟ್ಟಣಗಳಲ್ಲಿ ಹುಲ್ಲಿನ ಮನೆಗಳು ಹೆಚ್ಚಾಗಿರುವುದಿಲ್ಲ ; ಹೆಂಚಿನ ಮನೆ, ಮಾಳಿಗೆಯ ಮನೆಗಳೇ ಬಹಳ ಹೆಚ್ಚು ; ಇಟ್ಟಿಗೆ, ಗಾರೆಗಳಿಂದ ಕಟ್ಟಿದ ಹಲವು ದೊಡ್ಡ ಮನೆಗಳೂ, ಉಪ್ಪರಿಗೆ ಮನೆಗಳೂ, ಬಂಗಲೆಗಳೂ, ಇರುತ್ತವೆ. ಇವುಗಳಲ್ಲಿ ಹಣಗಾರರೇ ವಾಸಮಾಡತಕ್ಕವರು. ಇವಲ್ಲದೆ ದೊಡ್ಡದೊಡ್ಡ ಸ್ಕೂಲುಗಳೂ ಕಚೇರಿಗಳೂ, ಕಾರ್ಖಾನೆಗಳೂ, ಇರುತ್ತವೆ. ಅಂಗಡಿಯ ಬೀದಿಯಲ್ಲಿ ವರ್ತಕರು ಅಂಗಡಿಗಳನ್ನಿಟ್ಟುಕೊಂಡು ಅಕ್ಕಿ, ರಾಗಿ, ಮೊದಲಾದ ದವಸಗಳನ್ನೂ ; ಸೀರೆ, ಧೋತ್ರ ಮುಂತಾದ ಜವಳಿಗಳನ್ನೂ ; ಹಿತ್ತಾಳೆ, ತಾಮ್ರ, ಕಬ್ಬಿಣ, ಕಂಚು, ಸೀಸ, ಇವುಗಳಿಂದ ಮಾಡಿದ ಪಾತ್ರೆಗಳನ್ನೂ, ಮಾರುತ್ತಾರೆ. ಪಟ್ಟಣಗಳಲ್ಲಿ ವಾಸಮಾಡುವ ಹಣಗಾರರಲ್ಲಿ ಕೆಲವರು ಕುದುರೆಗಾಡಿಗಳಲ್ಲಿ ಸವಾರಿಮಾಡುತ್ತಾರೆ ; ಕೆಲವರು ಬೈಸಿಕಲ್ ಎಂಬ ಗಾಡಿಗಳನ್ನು ಉಪಯೋಗಿಸುತ್ತಾರೆ; ಕೆಲವರು ಮೋಟಾರ್ ಗಾಡಿಗಳಲ್ಲಿ ಸಂಚಾರ ಮಾಡುತ್ತಾರೆ.

ನಮ್ಮ ಊರಿನಿಂದ ಮುಂದಣ ಊರಿಗೆ ಹೋಗುವ ಹಾದಿಯಲ್ಲಿ ಏನೇನಿದೆ? ಸ್ವಲ್ಪದೂರ ಹೊಲ, ಗದ್ದೆ, ಮೊದಲಾದುವಿವೆ. ಆಮೇಲೆ ಬರಿಯ ನೆಲವಿರುತ್ತದೆ. ಒಂದೊಂದುಕಡೆ ಕೊರಕಲುಗಳಿವೆ. ಕೆಲವುವೇಳೆ ಆ ಕೊರಕಲುಗಳಲ್ಲಿ ನೀರು ಹರಿಯುತ್ತಿರುವುದುಂಟು. ಯಾವಾಗಲೂ ನೀರು ಹರಿಯುತ್ತಿದ್ದರೆ ಅದನ್ನು ಹೊಳೆ ಎನ್ನುತ್ತಾರೆ. ಅವುಗಳಮೇಲೆ ಬಂಡಿಗಳು ಹೋಗುವುದಕ್ಕೆ ಸೇತುವೆಗಳನ್ನು ಕಟ್ಟಿರುತ್ತಾರೆ. ಒಂದೊಂದುಕಡೆ ದಿಣ್ಣೆಗಳಿರುತ್ತವೆ. ಬಲು ಎತ್ತರವಾದ ಅಂತಹ ದಿಣ್ಣೆಗೆ ಗುಡ್ಡವೆಂದು ಹೆಸರು. ಆ ಗುಡ್ಡವು ಬಲು ಎತ್ತರವಾಗಿ ದೊಡ್ಡ ದೊಡ್ಡ ಗುಂಡುಗಳಿಂದಲೂ, ಬಂಡೆಗಳಿಂದಲೂ, ಕೂಡಿದ್ದರೆ ಬೆಟ್ಟವೆನ್ನುವರು. ಅವುಗಳನ್ನೆಲ್ಲಾ ದಾಟಿ ಮುಂದಿನ ಊರಿಗೆ ಹೋದರೆ ಅಲ್ಲಿಯೂ ಹೀಗೆಯೇ ಮನೆ, ಬೀದಿ, ಹೊಲ, ಗದ್ದೆ, ತೋಟ, ಮುಂತಾದುವು ಇರುತ್ತವೆ.

ಹೀಗೆ ನಾವು ಯಾವಕಡೆ ಹೋದರೂ ಊರು, ಹೊಳೆ, ಬೆಟ್ಟ, ಮೊದಲಾದುವು ಸಿಕ್ಕುತ್ತವೆ. ಇವುಗಳನ್ನೆಲ್ಲಾ ಗುರುತಿಟ್ಟುಕೊಳ್ಳುವುದು ಹೇಗೆ? ನಮ್ಮ ಮಠದಲ್ಲಿರುವ ಹುಡುಗರ ಗುರುತು ತಿಳಿಯುವುದಕ್ಕಾಗಿ ರಂಗ, ಸಿಂಗ, ಎಂಬುದಾಗಿ ಒಬ್ಬೊಬ್ಬರಿಗೂ ಒಂದೊಂದು ಹೆಸರಿಟ್ಟಿಲ್ಲವೆ? ಹಾಗೆಯೇ ಊರು, ಹೊಳೆ, ಮೊದಲಾದುವುಗಳಿಗೂ

ಮೈಸೂರು, ಕಾವೇರಿ, ಇವೇ ಮೊದಲಾದ ಒಂದೊಂದು ಹೆಸರಿಟ್ಟಿರುತ್ತಾರೆ. ಇಷ್ಟೇ ಅಲ್ಲ ; ಯಾವ ಊರು ಎಲ್ಲಿದೆ ? ಯಾವ ಹೊಳೆ ಎಲ್ಲಿ ಹರಿಯುತ್ತದೆ ? ಎಂಬುದನ್ನೆಲ್ಲಾ ನಾವು ಸುಲಭವಾಗಿ ತಿಳಿದುಕೊಳ್ಳುವಹಾಗೆ ಬಲ್ಲವರು ಎಲ್ಲವನ್ನೂ ಬರೆದಿಟ್ಟಿದ್ದಾರೆ.

ನಾವು ವಾಸಮಾಡುವ ಭೂಮಿಯ ವಿಚಾರವನ್ನೆಲ್ಲಾ ಹೀಗೆ ವಿವರಿಸುವ ಪುಸ್ತಕಕ್ಕೆ ಭೂವಿವರಣೆ ಎಂದು ಹೆಸರು. 'ಭೂ' ಎಂದರೆ ನೆಲ, 'ವಿವರಣೆ' ಎಂದರೆ ಚೆನ್ನಾಗಿ ತಿಳಿಸುವುದು ; ಆದುದರಿಂದ ಭೂವಿವರಣೆ ಎಂದರೆ ನೆಲದ ವಿಚಾರವಾದ ತಿಳುವಳಿಕೆ.

### ಪ್ರಶ್ನೆಗಳು.

ಹಳ್ಳಿಯಲ್ಲಿ ಮನೆಗಳೂ, ಬೀದಿಗಳೂ ಹೇಗೆ ಇರುವುವು ? ನೀನು ನೋಡಿರುವ ಅಥವಾ ಕೇಳಿರುವ ಒಂದು ಪಟ್ಟಣದ ಹೆಸರನ್ನು ಹೇಳು ; ಅಲ್ಲಿ ಏನೇನು ನೋಡಿದೆ ? ಹೇಳು. ಹಳ್ಳಿಗಳಿಗೂ, ಪಟ್ಟಣಗಳಿಗೂ ಏನು ವ್ಯತ್ಯಾಸ ? ಭೂವಿವರಣೆ ಎಂದರೇನು ? ಅದಕ್ಕೆ ಆ ಹೆಸರು ಬರಲು ಕಾರಣವೇನು ? ನಮ್ಮ ಮಠದ ಹತ್ತಿರ ಏನೇನಿವೆ ? ಹೇಳು.

---

## ೨. ದಿಕ್ಕುಗಳು.

ನಮ್ಮ ಊರಿನಿಂದ ಆಚೆಗೆ ಹೋಗಬೇಕಾದರೆ ನಾಲ್ಕಾರು ಹಾದಿಗಳಿರುತ್ತವೆಯಲ್ಲವೆ ? ಹೀಗಿರುವಲ್ಲಿ ಒಬ್ಬನು ನಮ್ಮೂರಿನಿಂದ ಹೊರಕ್ಕೆ ಹೋದನು ಎಂದರೆ ಅವನು ಇಂತಹ ಕಡೆಗೆ ಹೋದನು ಎಂದು ತಿಳಿಯುತ್ತದೆಯೋ ? ಇಲ್ಲ. ಆದುದರಿಂದ ಅವನು ಇಂತಹ ಕಡೆಗೆ ಹೋದನು ಎಂದು ತಿಳಿಸಬೇಕಾದರೆ ಏನು ಮಾಡಬೇಕು ? ನಮಗೆ ಬಲಗಡೆ, ಎಡಗಡೆ, ಮುಂದುಗಡೆ, ಹಿಂದುಗಡೆ, ಎಂಬುದಾಗಿ ನಾಲ್ಕು ಕಡೆಗಳುಂಟಷ್ಟೆ ; ಅವನು ಬಲಗಡೆ ಹೋದನು ಎಂದು ಹೇಳಿದರೆ ಇಂತಹ ಕಡೆಗೆ ಹೋದನು ಎಂದು ಗೊತ್ತುಮಾಡಬಹುದೊ ಇಲ್ಲವೊ ? ಒಂದೊಂದುವೇಳೆ ಗೊತ್ತುಮಾಡಬಹುದು ; ಆದರೆ ಯಾವಾಗಲೂ ಸರಿಯಾಗಿ ಗೊತ್ತುಮಾಡಲಾಗುವುದಿಲ್ಲ ; ಅದನ್ನು ತೋರಿಸುತ್ತೇನೆ, ನೋಡು. ನಮ್ಮ ಮಠದ ಬಾಗಿಲು ನಿನಗೆ ಯಾವಕಡೆ ಇದೆ ಹೇಳು. ಬಲಗಡೆ ಇದೆಯಲ್ಲವೆ ? ಅದು ಬಲಗಡೆ ಇದೆ ಎಂದರೆ ಎಲ್ಲರಿಗೂ ಸರಿಯಾಗಿ ತಿಳಿಯುತ್ತದೆಯೋ ? ನಿನ್ನ ಎದುರಿಗಿರುವ ಹುಡುಗನನ್ನು ಕೇಳಿನೋಡು, ಅದು ಅವನಿಗೆ ಎಡಗಡೆ ಇದೆ.

ಒಬ್ಬನಿಗೆ ಬಲಗಡೆಯಾದುದು ಇನ್ನೊಬ್ಬನಿಗೆ ಎಡಗಡೆಯಾಗಬಹುದು. ಹಾಗೆಯೇ ಒಬ್ಬನಿಗೆ ಹಿಂದುಗಡೆಯಾದುದು ಬೇರೊಬ್ಬನಿಗೆ ಮುಂದುಗಡೆಯಾಗಬಹುದು. ಅದುದರಿಂದ ಸುಮ್ಮನೆ ಬಲಗಡೆ, ಎಡಗಡೆ ಎಂದರೆ ಗೊತ್ತಾಗುವುದಿಲ್ಲ. ಅದಕಾರಣ ಎಲ್ಲರಿಗೂ ಗೊತ್ತಾಗಿ ತಿಳಿಯುವ ಹಾಗೆ ಒಂದು ಕಡೆಯನ್ನು ಗೊತ್ತುಮಾಡಿಕೊಳ್ಳಬೇಕಾಯಿತು. ಅದಕ್ಕೋಸ್ಕರವೇ ಸೂರ್ಯನು ಹುಟ್ಟುವ ಕಡೆಯನ್ನು ಗೊತ್ತಾಗಿಟ್ಟುಕೊಂಡಿದ್ದಾರೆ. ಏಕೆಂದರೆ—ಸೂರ್ಯನು ನಿತ್ಯವೂ ಒಂದೇ ದಿಕ್ಕಿನಲ್ಲಿ ಹುಟ್ಟುತ್ತಿರುವನು. ಒಬ್ಬ ಹುಡುಗನು ಬೆಳಗಾಗುತಲೆ ಸೂರ್ಯನು ಹುಟ್ಟುವ ಕಡೆಗೆ ಎದುರಾಗಿ ನಿಂತುಕೊಂಡರೆ ಅವನ ಮುಂದುಗಡೆಗೆ ಪೂರ್ವ (ಮೂಡಲು); ಅವನ ಹಿಂದುಗಡೆಗೆ ಪಶ್ಚಿಮ (ಪಡುವಲು); ಬಲಗಡೆಗೆ ದಕ್ಷಿಣ (ತೆಂಕಲು); ಎಡಗಡೆಗೆ ಉತ್ತರ (ಬಡಗಲು) ಎಂದು ಹೆಸರು. ಇವುಗಳಿಗೆಲ್ಲಾ ದಿಕ್ಕುಗಳು ಎಂದೂ ಹೆಸರುಂಟು. ಅದುದರಿಂದಲೇ ಇವುಗಳನ್ನು ಪೂರ್ವದಿಕ್ಕು, ಪಶ್ಚಿಮದಿಕ್ಕು, ಉತ್ತರದಿಕ್ಕು, ದಕ್ಷಿಣದಿಕ್ಕು, ಎಂದು ಹೇಳುವರು. ಯಾವುದಾದರೂ ಒಂದು ದಿಕ್ಕು ತಿಳಿದರೆ ಮಿಕ್ಕ ದಿಕ್ಕುಗಳನ್ನು ಗೊತ್ತುಮಾಡಿಕೊಳ್ಳಬಹುದು.

ಸೂಚನೆ.—ಉಪಾಧ್ಯಾಯರು ಬಾಲಕರನ್ನು ನಿಲ್ಲಿಸಿ ಮೇಲೆ ಹೇಳಿರುವ ರೀತಿಯಲ್ಲಿ ದಿಕ್ಕುಗಳನ್ನು ಸ್ಪಷ್ಟವಾಗಿ ತಿಳಿಸಬೇಕು.

### ಪ್ರಶ್ನೆಗಳು.


ಪಶ್ಚಿಮದಿಕ್ಕು ಯಾವುದು? ಪೂರ್ವದಿಕ್ಕಿಗೆ ಗುರುತೇನು? ನೀನು ಪಶ್ಚಿಮದ ಕಡೆಗೆ ತಿರುಗಿ ನಿಂತುಕೊಂಡರೆ ನಿನ್ನ ಬಲಗಡೆ ಎಡಗಡೆಗಳಲ್ಲಿ ಯಾವ ದಿಕ್ಕುಗಳಿವೆ? ನಿಮ್ಮ ಪಾಠಶಾಲೆಯ ಬಾಗಿಲು ಯಾವ ದಿಕ್ಕಿಗೆ ಎದುರಾಗಿದೆ? ನಿಮ್ಮ ಊರಿಗೆ ಯಾವ ಕಡೆ ಪಾಠಶಾಲೆ ಇದೆ? ಕೆರೆಗೆ ಹೋಗುವ ಹಾದಿ ಯಾವ ಮುಖವಾಗಿ ಹೋಗುತ್ತದೆ? ಈ ಗೋಡೆ ಪಶ್ಚಿಮದಲ್ಲಿದ್ದರೆ ಉಳಿದ ಗೋಡೆಗಳ ದಿಕ್ಕುಗಳನ್ನು ಹೇಳು.

---

## ೩. ದಿಕ್ಕುಗಳು.

ಬೆಳಗಾಗುತಲೆ ಸೂರ್ಯನು ಹುಟ್ಟುವಾಗ ದಿಕ್ಕುಗಳನ್ನು ಕಂಡುಹಿಡಿಯುವ ಹಾಗೆಯೇ ಸಂಜೆಯಲ್ಲಿ ಸೂರ್ಯನು ಮುಳುಗುವಾಗಲೂ ದಿಕ್ಕುಗಳನ್ನು ಕಂಡುಹಿಡಿಯ


ಬಹುದಷ್ಟೆ? ಆದರೆ ಸೂರ್ಯನು ಮುಳುಗಿಹೋಗಿ ರಾತ್ರಿಯಾಗಿದ್ದರೆ ದಿಕ್ಕುಗಳನ್ನು ಹೇಗೆ ಕಂಡು ಹಿಡಿಯಬಹುದು? ರಾತ್ರಿಯಲ್ಲಿ ಕಂಡುಹಿಡಿಯುವುದಕ್ಕೆ ಒಂದು ಉಪಾಯವಿದೆ, ರಾತ್ರಿಯಲ್ಲಿ ಆಕಾಶದಲ್ಲಿ ಥಳಥಳಿಸುತ್ತಿರುವ ನಕ್ಷತ್ರಗಳನ್ನು ನೋಡಿದ್ದೀರೋ ಇಲ್ಲವೋ? ಮೋಡವಿಲ್ಲದ ರಾತ್ರಿಯಲ್ಲಿ ಬೀದಿಯಲ್ಲಿ ನಿಂತುಕೊಂಡು ಆಕಾಶವನ್ನೆಲ್ಲಾ ಚೆನ್ನಾಗಿ ನೋಡಿರಿ. ಒಂದು ಕಡೆಯಲ್ಲಿ ಇಲ್ಲಿ ತೋರಿಸಿರುವ ರೀತಿಯಲ್ಲಿ ಏಳು ನಕ್ಷತ್ರಗಳು ಕಾಣುತ್ತವೆ. ಅವುಗಳನ್ನು ಗುರುತಿಟ್ಟುಕೊಳ್ಳಿರಿ. ಅವುಗಳಿಗೆ ಸಪ್ತಋಷಿ ಮಂಡಲವೆಂದು ಹೆಸರು. 'ಸಪ್ತಋಷಿಮಂಡಲ' ಎಂದರೆ ಏಳು ಋಷಿಗಳ ಗುಂಪು ಎಂದು ಅರ್ಥ. ಅವುಗಳ ಮೇಲೆ ಗೆರೆ ಎಳೆದರೆ, ದೊಡ್ಡ (ಽ) 'ಸ' ಒತ್ತಿನಂತೆ ಆಗುತ್ತದೆ ನೋಡಿರಿ. ಆ 'ಸ'



ಸಪ್ತಋಷಿಮಂಡಲ–ಧ್ರುವನಕ್ಷತ್ರ.

ಒತ್ತನ್ನು ತಲೆಕಟ್ಟಿನ ಕಡೆಗೆ ನೆಟ್ಟಗೆ ಉದ್ದವಾಗಿ ಎಳೆದರೆ ಅಲ್ಲಿ ಮಿನುಗುಟ್ಟುವ ಒಂದು ನಕ್ಷತ್ರ ಕಾಣಿಸುತ್ತದೆ. ಅದನ್ನು ಚೆನ್ನಾಗಿ ಗುರುತಿಟ್ಟುಕೊಳ್ಳಿರಿ. ಅದಕ್ಕೆ ಧ್ರುವ ನಕ್ಷತ್ರ ವೆಂದು ಹೆಸರು. 'ಧ್ರುವ' ಎಂದರೆ ನೆರೆಯಾಗಿ ಒಂದೇ ಕಡೆ ನಿಂತಿರುವುದು ಎಂದು ಅರ್ಥ. ಅದು ಅಲ್ಲಿಯೇ ನೆರೆಯಾಗಿರುವುದರಿಂದ ಅದಕ್ಕೆ ಈ ಹೆಸರು ಬಂದಿದೆ. ಅದು ಉತ್ತರದಿಕ್ಕಿನಲ್ಲಿದೆ. ಆದಕಾರಣ ರಾತ್ರಿಯಲ್ಲಿ ಅದನ್ನು ನೋಡಿ ಉತ್ತರದಿಕ್ಕನ್ನು ಗೊತ್ತು ಮಾಡಬಹುದು. ಬಳಿಕ ಉಳಿದ ದಿಕ್ಕುಗಳನ್ನು ಸುಲಭವಾಗಿ ಕಂಡುಹಿಡಿಯಬಹುದು.

ದಿಕ್ಕುಗಳನ್ನು ಕಂಡುಹಿಡಿಯುವುದಕ್ಕೆ ಇನ್ನೊಂದು ಸಾಧನವುಂಟು; ಇದು ಒಂದು ಸೋಜಿಗದ ಸೂಜಿ. ಈ ಸೂಜಿಗೆ ಉತ್ತರಮುಖಿ ಎಂದು ಹೆಸರು. ಇದರ ತುದಿಯು ಯಾವಾಗಲೂ ಉತ್ತರದ ಕಡೆಗೇ ತಿರುಗಿಕೊಂಡಿರುವುದರಿಂದ ಇದಕ್ಕೆ ಈ ಹೆಸರು ಬಂದಿತು. ಇದರ ಮೂಲಕ



ವಾಗಿ ಯಾವಾಗ ಬೇಕಾದರೂ ದಿಕ್ಕುಗಳನ್ನು ಕಂಡುಹಿಡಿಯಬಹುದು. ಹಡಗು ನಡೆಯಿಸುವವರು ಇದರ ಸಹಾಯದಿಂದಲೇ ದಿಕ್ಕುಗಳನ್ನು ಗೊತ್ತುಮಾಡಿಕೊಳ್ಳುತ್ತಾರೆ.

## ಪ್ರಶ್ನೆಗಳು.

ರಾತ್ರಿಯಲ್ಲಿ ದಿಕ್ಕುಗಳನ್ನು ಹೇಗೆ ಗೊತ್ತುಮಾಡಬಹುದು? ಸಪ್ತಋಷಿ ಮಂಡಲವೆಂದರೇನು? ಅದರಲ್ಲಿ ಎಷ್ಟು ನಕ್ಷತ್ರಗಳಿವೆ? ಅವುಗಳಮೇಲೆ ಗೆರೆ ಎಳೆದರೆ ಹೇಗೆ ಕಾಣುತ್ತದೆ? ಧ್ರುವನಕ್ಷತ್ರವೆಲ್ಲದೆ? ಅದಕ್ಕೆ ಆ ಹೆಸರು ಬರಲು ಕಾರಣವೇನು? ಧ್ರುವೋಪಾಖ್ಯಾನವನ್ನು ಕೇಳಬಲ್ಲಿರಾ? ಧ್ರುವನು ಯಾರು? ಅವನ ಕಥೆ ಏನು? ಸೋಜಿಗದ ಸೂಜಿ ಯಾವುದು? ಅದರಿಂದ ಪ್ರಯೋಜನವೇನು? ಅದಕ್ಕೆ ಹೆಸರೇನು? ನೀವು ಉತ್ತರಮುಖವಾಗಿ ನಿಂತುಕೊಂಡರೆ ನಿಮ್ಮ ಯಾವಕಡೆ ಪೂರ್ವ, ದಕ್ಷಿಣ, ಪಶ್ಚಿಮಗಳಿರುತ್ತವೆ?

---

# ೪. ದೂರ, ದಿಕ್ಕು.

ಒಂದು ವಸ್ತುವು ಮತ್ತೊಂದು ವಸ್ತುವಿಗೆ ಇಂತಹ ದಿಕ್ಕಿನಲ್ಲಿದೆ ಎಂದರೆ ಏನು ತಿಳಿದ ಹಾಗಾಯಿತೋ ನೋಡೋಣ. ಈಗ ನನ್ನ ಮೇಜಿನಮೇಲೆ ಮಸಿಯ ಕುಡಿಕೆ, ಪುಸ್ತಕ, ಲೇಖನಿ, ಸೀಮೆಯಸುಣ್ಣ, ಇವೆಲ್ಲಾ ಇವೆಯಷ್ಟೆ. ಇವುಗಳಲ್ಲಿ ಉಳಿದುವೆಲ್ಲಾ ಮಸಿಯ ಕುಡಿಕೆಗೆ ಯಾವಕಡೆ ಇವೆ ಹೇಳಿರಿ. ಪೂರ್ವದಿಕ್ಕಿನಲ್ಲಿವೆ. ಸರಿ. ಈಗ ಇವು ಹಿಂದೆ ಇದ್ದಂತೆ ಇವೆಯೋ? ಇಲ್ಲ; ಆದರೂ ಮಸಿಯ ಕುಡಿಕೆಗೆ ಪೂರ್ವದಿಕ್ಕಿನಲ್ಲಿವೆಯೋ? ಇಲ್ಲವೋ? ಪೂರ್ವದಿಕ್ಕಿನಲ್ಲಿಯೇ ಇವೆ. ಈಗ ನೋಡಿದಿರೋ? ಮಸಿಯ ಕುಡಿಕೆಗೆ ಇಂತಹ ದಿಕ್ಕಿನಲ್ಲಿವೆ ಎಂದಮಾತ್ರಕ್ಕೆ ಸಾಲುವುದಿಲ್ಲ. ಏಕೆ? ಇವು ಆ ದಿಕ್ಕಿನಲ್ಲಿದ್ದರೂ ಒಂದರ ಹತ್ತಿರ ಒಂದಿದೆಯೋ, ಒಂದೊಂದಕ್ಕೆ ದೂರವಾಗಿದೆಯೋ ಗೊತ್ತಾಗುವುದಿಲ್ಲ. ಇವು ಇಂತಹ ದಿಕ್ಕಿನಲ್ಲಿದೆ ಎಂದು ತಿಳಿಯುವುದೇ ಹೊರತು ಇಂತಹ ಸ್ಥಳದಲ್ಲಿವೆ ಎಂದು ತಿಳಿಯುವುದಿಲ್ಲ. ಇವಿರುವ ಸ್ಥಳ ಗೊತ್ತಾಗಬೇಕಾದರೆ, ಇವು ಅದಕ್ಕೆ ಎಷ್ಟು ದೂರದಲ್ಲಿವೆ ಎಂದು ತಿಳಿಯಬೇಕು. ದೂರ ತಿಳಿಯಬೇಕಾದರೆ ಅಳತೆ ಮಾಡಬೇಕು. ಹಾಗೆಯೇ ನೆಲವನ್ನೆಲ್ಲಾ ಅಳತೆಮಾಡಿ ಇಲ್ಲಿಂದ ಇಲ್ಲಿಗೆ ಇಷ್ಟಿಷ್ಟು ದೂರವಿದೆ ಎಂದು ಗೊತ್ತುಮಾಡಿ ಬರೆದಿಟ್ಟಿದಾರೆ. ಇದರಿಂದ ಯಾವಯಾವುದು ಯಾವ ಯಾವ ದಿಕ್ಕಿನಲ್ಲಿ ಎಷ್ಟೆಷ್ಟು ದೂರದಲ್ಲಿದೆ ಎಂದು ಸುಲಭವಾಗಿ ತಿಳಿದುಕೊಳ್ಳಬಹುದು.

ಸೂಚನೆ.—ಉಪಾಧ್ಯಾಯರು ಇಲ್ಲಿ ಸೂಚಿಸಿರುವಂತೆ ಬಳಕೆಯಾದ ವಸ್ತುಗಳನ್ನು ಇಟ್ಟು ಕೊಂಡೇ ಈ ಪಾಠವನ್ನು ಬೋಧಿಸಬೇಕು.

## ಪ್ರಶ್ನೆಗಳು.

ಒಂದು ಊರಿರುವ ಸ್ಥಳವು ಗೊತ್ತಾಗಬೇಕಾದರೆ ಏನೇನು ತಿಳಿಯಬೇಕು? ಅದು ಇರುವ ದಿಕ್ಕನ್ನು ಮಾತ್ರ ಹೇಳಿದರೆ ಏಕೆ ಸಾಲದು? ಮೈಸೂರಿಗೆ ಹತ್ತು ಮೈಲಿಗಳ ದೂರದಲ್ಲಿ ಶ್ರೀರಂಗಪಟ್ಟಣವಿದೆ ಎಂದರೆ ಅದರ ಸ್ಥಳ ಗೊತ್ತಾಗುವುದಿಲ್ಲ ವಷ್ಟೆ! ಅದಕ್ಕೆ ಇನ್ನೇನು ತಿಳಿಯಬೇಕು?


---

# ೫. ಅಳತೆ.

ನಮ್ಮ ಮಠದ ಈ ಗೋಡೆ ಎಷ್ಟು ದೂರವಿದೆ? ಅದರ ಉದ್ದಕ್ಕೂ ಹೆಜ್ಜೆಯಿಟ್ಟು ಹೇಳಿರಿ. ಈಗ ನಾನು ಹೆಜ್ಜೆ ಇಡುತ್ತೇನೆ ನೋಡಿರಿ. ಈಗ ಬೇರೆ ಅಳತೆ ಬಂದಿತು. ಹೀಗೆ ಒಂದು ವಸ್ತುವನ್ನೇ ಒಬ್ಬೊಬ್ಬರು ಅಳೆದರೆ ಒಂದೊಂದು ಅಳತೆಯಾಗುತ್ತದೆ; ಸರಿಯಾದ ಅಳತೆಯೇ ಗೊತ್ತಾಗುವುದಿಲ್ಲ. ಆದಕಾರಣ ಎಲ್ಲರಿಗೂ ಗೊತ್ತಾಗಿ ತಿಳಿಯುವಂತೆ ಗಜಕಡ್ಡಿ ಎಂಬ ಒಂದು ಅಳತೆಯಕಡ್ಡಿಯನ್ನು ಗೊತ್ತುಮಾಡಿಕೊಂಡಿದ್ದಾರೆ. ಈ ಕಡ್ಡಿಯಿಂದಲೇ ದರ್ಜಿಗಳು ಬಟ್ಟೆಯನ್ನು ಅಳೆಯುತ್ತಾರೆ. ಈಕಡ್ಡಿಗಿಂತಲೂ ಉದ್ದದಲ್ಲಿ ಕಡಿಮೆಯಾದ ವಸ್ತುಗಳನ್ನು ಅಳತೆ ಮಾಡುವುದಕ್ಕಾಗಿ ಅದನ್ನು ಮೂರಾಗಿ ಸಮವಿಭಾಗ ಮಾಡಿ ಒಂದೊಂದು ಭಾಗಕ್ಕೆ "ಅಡಿ" ಎಂದು ಹೆಸರಿಟ್ಟಿದ್ದಾರೆ. ಇನ್ನೂ ಚಿಕ್ಕವಾದುವನ್ನು ಅಳೆಯಲು ಒಂದು ಅಡಿಯನ್ನು ೧೨ ಸಮಭಾಗಮಾಡಿ ಒಂದೊಂದಕ್ಕೂ "ಅಂಗುಲ" ವೆಂದು ಹೆಸರಿಟ್ಟಿದ್ದಾರೆ. ಈ ಗಜಕಡ್ಡಿಗಿಂತಲೂ ಉದ್ದವಾದುವುಗಳನ್ನು ಅಳತೆ ಮಾಡುವುದಕ್ಕಾಗಿ ನವಾರದಲ್ಲಿ ಅಳತೆಯನ್ನು ಗುರುತುಮಾಡಿ, ಅಂಕೆಗಳನ್ನು ಬರೆದು ಸುರುಳಿ ಸುತ್ತಿ ಇಟ್ಟುಕೊಂಡಿರುತ್ತಾರೆ. ಇದನ್ನು ಅಳತೆಯ "ಟೇಪು" ಎನ್ನುತ್ತಾರೆ. ಇದರ ಸಹಾಯದಿಂದ ಉದ್ದ, ಅಗಲಗಳನ್ನೂ, ಎತ್ತರವನ್ನೂ ಸಹ ಅಳತೆ ಮಾಡಬಹುದು. ಒಂದೊಂದುವೇಳೆ ಉದ್ದ, ಅಗಲಗಳನ್ನು ಅಳೆಯುವುದಕ್ಕೆ ಸರಪಣಿಯನ್ನೂ ಉಪಯೋಗಿಸುವರು.

## ಪ್ರಶ್ನೆಗಳು.


ಗಜಕಡ್ಡಿ ಎಂದರೇನು? ಅದರ ಉಪಯೋಗವೇನು? ದರ್ಜಿಯವರು ಬಟ್ಟೆಯನ್ನು ಏತರಿಂದ ಅಳೆಯುತ್ತಾರೆ? ಒಂದು ಮಾರುದ್ದ ಎಂದರೆ ಅಳತೆ




ಅರ್ಧ ಅಡಿ ಅಥವಾ ಆರು ಅಂಗುಲ.



ಅಂಗುಲಗಳು, ಅಂಗುಲದ ವಿಭಾಗಗಳು.




ಅಳತೆಯ ಟೇಪು.

ಏಕೆ ಸರಿಯಾಗಿ ಗೊತ್ತಾಗುವುದಿಲ್ಲ? ಈ ಮೇಜಿನ ಎತ್ತರವೆಷ್ಟು? ಮೇಜು ಎತ್ತರವಾಗಿದೆಯೋ, ಕುರ್ಚಿ ಎತ್ತರವಾಗಿದೆಯೋ?

---

## ೬. ಭೂಪಟ.

ಊರು, ಬೆಟ್ಟ, ಹೊಳೆ, ಮೊದಲಾದುವುಗಳಲ್ಲಿ ಯಾವಯಾವುದು ಯಾವ ಯಾವ ದಿಕ್ಕಿನಲ್ಲಿ ಎಷ್ಟೆಷ್ಟು ದೂರದಲ್ಲಿ ಇದೆ ಎಂದು ಗೊತ್ತಾದರೂ ಅವುಗಳ ದಿಕ್ಕನ್ನೂ, ದೂರವನ್ನೂ, ನೆನಪಿನಲ್ಲಿಟ್ಟುಕೊಳ್ಳಲಾಗುತ್ತದೆಯೇ? ಇವೆಲ್ಲವನ್ನೂ ಬರೆದಿಟ್ಟುಕೊಂಡರೂ ಕೂಡಾ ಮನಸ್ಸಿನಲ್ಲಿ ನಿಲ್ಲುವುದಿಲ್ಲ. ನಾಲ್ಕಾರು ಸಂಗತಿಗಳನ್ನು ನೆನಪಿನಲ್ಲಿಡುವುದೇ ಕಷ್ಟವಾಗುತ್ತದೆ; ಹೀಗಿರುವಲ್ಲಿ ಭೂಮಿಯಲ್ಲಿರುವ ಸಾವಿರಾರು ಊರು, ಬೆಟ್ಟ—ಇವೇ ಮುಂತಾದುವುಗಳ ದೂರ, ದಿಕ್ಕುಗಳನ್ನು ನೆನಪಿನಲ್ಲಿಡಲಾಗುವುದೇ? ಎಂತಹರಿಗೂ ಆಗುವುದಿಲ್ಲ. ಆದುದರಿಂದ ಇವೆಲ್ಲವನ್ನೂ ಸುಲಭವಾಗಿ ತಿಳಿದುಕೊಳ್ಳುವಂತೆ ವಿದ್ವಾಂಸರು ಒಂದು ಉಪಾಯವನ್ನು ಮಾಡಿದ್ದಾರೆ. ಅದೇನೆಂದರೆ, ಇವೆಲ್ಲವನ್ನೂ ತಿಳಿಸುವ ಒಂದು ವಿಧವಾದ ಚಿತ್ರಪಟವನ್ನು ಬರೆದಿಟ್ಟಿರುತ್ತಾರೆ. ಆ ಚಿತ್ರಪಟವನ್ನು ನೋಡಿದರೆ ಯಾವುದರ ದಿಕ್ಕು, ದೂರಗಳನ್ನು ಬೇಕಾದರೂ ಸುಲಭವಾಗಿ ತಿಳಿದುಕೊಳ್ಳಬಹುದು. ಇಂತಹ ಚಿತ್ರಪಟಗಳಿಗೆ 'ನಕ್ಷೆ' ಎಂದೂ 'ಭೂಪಟ'ವೆಂದೂ ಹೆಸರು.


### ಪ್ರಶ್ನೆಗಳು.

ಊರು, ಬೆಟ್ಟ, ಮೊದಲಾದುವುಗಳ ದಿಕ್ಕು, ದೂರಗಳನ್ನು ತಿಳಿದುಕೊಂಡರೆ ಸಾಕೋ? ಅದರಿಂದ ಯಾವ ತೊಂದರೆ ಉಂಟಾಗುತ್ತದೆ? ಈ ಗಲಿಬಿಲಿಯನ್ನು ಹೇಗೆ ತಪ್ಪಿಸಬಹುದು? ಇದಕ್ಕೆ ವಿದ್ವಾಂಸರು ಯಾವ ಉಪಾಯವನ್ನು ಮಾಡಿದ್ದಾರೆ? ಈ ಚಿತ್ರಪಟಗಳಿಗೆ ಹೆಸರೇನು? ಭೂಪಟವೆಂದರೇನು?

---


## ೭. ಚಿತ್ರ, ನಕ್ಷೆ.

ಇದೊಂದು ಮನೆಯ ಚಿತ್ರ, ಅದೇ ಆ ಮನೆಯ ನಕ್ಷೆ; ಇವೆರಡಕ್ಕೂ ಎಷ್ಟು ಹೆಚ್ಚು ಕಡಿಮೆ ಇದೆ ನೋಡಿರಿ. ಚಿತ್ರದಲ್ಲಿ ಮನೆಯ ಅಂದವೆಲ್ಲಾ ಕಾಣುತ್ತದೆ. ಅದರ ಹೆಬ್ಬಾ




ಮನೆಯ ನಕ್ಷೆ

ಗಿಲು, ಪಡಸಾಲೆ, ಕಂಬಗಳು, ಕೊಟ್ಟಡಿಗಳು, ಕಿಟಿಕಿಗಳು, ಮೇಲುಚಾವಣಿ, ಮೊದಲಾದುವೆಲ್ಲಾ ಎದುರಿಗೆ ಇದ್ದಹಾಗೆ ಕಾಣುತ್ತವೆ. ಆದರೆ ಈ ಚಿತ್ರದಲ್ಲಿ ಮನೆಯ ಉದ್ದವೆಷ್ಟು? ಅಗಲವೆಷ್ಟು? ಮನೆ ಯಾವ ದಿಕ್ಕಿಗೆ ತಿರುಗಿಕೊಂಡಿದೆ?—ಇವೇ ಮೊದಲಾದುವು ತಿಳಿಯುತ್ತವೆಯೊ? ಇಲ್ಲ.



ಮನೆಯ ಚಿತ್ರ.

ಈಗ ಮನೆಯ ನಕ್ಷೆಯನ್ನು ನೋಡಿರಿ; ಇದರಿಂದ ಮನೆಯ ಅಂದವೇನೂ ತಿಳಿಯುವುದಿಲ್ಲ. ತಳಹದಿಯನ್ನು ಮಾತ್ರ ಹಾಕಿದರೆ ಮನೆ ಹೇಗೆ ಕಾಣಿಸುವುದೋ ಹಾಗೆ ಕಾಣುತ್ತದೆ. ಆದರೂ ಇದರಲ್ಲಿ ಒಂದು ವಿಶೇಷವಿದೆ. ಮನೆಯ ಆಕಾರವೇನು? ಉದ್ದವೆಷ್ಟು? ಅಗಲವೆಷ್ಟು? ಅದು ಯಾವ ದಿಕ್ಕಿಗೆ ತಿರುಗಿದೆ? ಒಂದಕ್ಕೊಂದಕ್ಕೆ ಎಷ್ಟು ದೂರವಿದೆ?—ಇವೆಲ್ಲಾ ಇದರಲ್ಲಿ ಗೊತ್ತಾಗುತ್ತವೆ.

ಸೂಚನೆ.—ಉಪಾಧ್ಯಾಯರು ಚಿತ್ರಕ್ಕೂ, ನಕ್ಷೆಗೂ, ಇರುವ ವ್ಯತ್ಯಾಸವನ್ನು ಚೆನ್ನಾಗಿ ತಿಳಿಸಬೇಕು.

## ಪ್ರಶ್ನೆಗಳು.

ಚಿತ್ರವೆಂದರೇನು? ಅದರಲ್ಲಿ ಏನೇನು ತಿಳಿಯುತ್ತದೆ? ಚಿತ್ರಕ್ಕೂ, ನಕ್ಷೆಗೂ ಭೇದವೇನು? ನಕ್ಷೆಯಲ್ಲಿ ಏನೇನು ಗೊತ್ತಾಗುತ್ತದೆ? ಭೂಪಟವು ಚಿತ್ರವೋ? ನಕ್ಷೆಯೋ? ಅದು ಹೇಗೆ?

## ೮. ದಿಕ್ಸೂಚಿ.

ಭೂಪಟದಲ್ಲಿ ದಿಕ್ಕುಗಳನ್ನು ಗೊತ್ತು ಮಾಡುವುದಕ್ಕಾಗಿ ಅದರ ನಾಲ್ಕು ಕಡೆಗಳಲ್ಲಿಯೂ ಪೂರ್ವ, ದಕ್ಷಿಣ, ಪಶ್ಚಿಮ, ಉತ್ತರ, ಎಂದು ಆಯಾ ದಿಕ್ಕುಗಳ ಹೆಸರನ್ನು ಮೊದಲೇ ಬರೆದಿಡಬಹುದು. ಆದರೂ ಹಾಗೆ ಮಾಡುವ ಪದ್ಧತಿಯಿಲ್ಲ. ಅದಕ್ಕೆ ಪ್ರತಿಯಾಗಿ ಒಂದುಕಡೆ ಸೂಜಿಯಂತಿರುವ ಒಂದು ಗೆರೆಯನ್ನು ಬರೆದಿರುತ್ತಾರೆ ; ಅದಕ್ಕೆ ದಿಕ್ಸೂಚಿಯೆಂದು ಹೆಸರು ಇಡಬಹುದು. 'ದಿಕ್ಸೂಚಿ' ಎಂದರೆ ದಿಕ್ಕನ್ನು ತೋರಿಸುವುದು ಎಂದರ್ಥ. ಅದರ ಮೊನೆಯು ಯಾವಾಗಲೂ ಉತ್ತರಕ್ಕೇ ತಿರುಗಿಕೊಂಡಿರುತ್ತದೆ. ಉತ್ತರದಿಕ್ಕೊಂದು ಗೊತ್ತಾದರೆ ಉಳಿದ ದಿಕ್ಕುಗಳನ್ನು ಸುಲಭವಾಗಿ ಕಂಡುಹಿಡಿಯಬಹುದಲ್ಲವೆ ? ಸೂಜಿಯ ತುದಿ ಉತ್ತರವಾದರೆ ಅದರ ತಳದ ಕಡೆಯೇ ದಕ್ಷಿಣ, ಅದರ ಬಲಗಡೆ ಪೂರ್ವ, ಎಡಗಡೆ ಪಶ್ಚಿಮ.

ಸೂಚನೆ.—೧೨ನೆಯ ಪುಟದ ಭೂಪಟದಲ್ಲಿರುವ ದಿಕ್ಸೂಚಿಯನ್ನು ತೋರಿಸಬಹುದು.

### ಪ್ರಶ್ನೆಗಳು.

ಭೂಪಟದಲ್ಲಿ ದಿಕ್ಕುಗಳನ್ನು ತಿಳಿಯಲು ಹೇಗೆ ಬರೆದಿದ್ದರೆ ತುಂಬಾ ಸುಲಭವಾಗುತ್ತಿದ್ದಿತು ? ದಿಕ್ಕುಗಳ ಹೆಸರುಗಳನ್ನು ಬರೆಯುವುದಕ್ಕೆ ಪ್ರತಿಯಾಗಿ ಇನ್ನೇನು ಮಾಡುತ್ತಾರೆ ? ದಿಕ್ಸೂಚಿ ಎಂದರೇನು ? ಅದು ಹೇಗಿದೆ ? ಅದರಿಂದ ದಿಕ್ಕನ್ನು ಹೇಗೆ ಗೊತ್ತುಮಾಡಬಹುದು ? ದಿಕ್ಸೂಚಿಯ ಮೊನೆಯು ಮೇಲುಗಡೆಗಿರುವಂತೆ ಒಂದು ಭೂಪಟವನ್ನು ತೂಗುಹಾಕಿದ್ದರೆ ಅದರ ಉತ್ತರ ಯಾವುದು ? ದಕ್ಷಿಣ ಯಾವುದು ? ಅದರ ಪೂರ್ವವನ್ನು ತೋರಿಸಿರಿ. ಪಶ್ಚಿಮವೆಲ್ಲಿದೆ ?

---

## ೯ ಪ್ರಮಾಣರೇಖೆ.

ಭೂಪಟವನ್ನು ಬರೆಯುವಾಗ ಆಕಾರ, ಪ್ರಮಾಣಗಳನ್ನೆಲ್ಲಾ ತಿಳಿಸುವಂತೆ ಬರೆದಿದ್ದಾರೆ. ನಾವು ಅದರ ಅಳತೆಯನ್ನು ಸುಲಭವಾಗಿ ಕಂಡುಕೊಳ್ಳುವುದಕ್ಕಾಗಿ ಒಂದು ಕಡೆಯಲ್ಲಿ ಒಂದು ಗೆರೆಯೆಳೆದು ಅದರಲ್ಲಿ ಇಷ್ಟಿಷ್ಟು ಉದ್ದಕ್ಕೆ ಇಷ್ಟಿಷ್ಟು ಮೈಲಿ ಎಂದು ಗುರುತುಮಾಡಿ ಬರೆದಿರುತ್ತಾರೆ. ಈ ಗೆರೆಗೆ 'ಪ್ರಮಾಣರೇಖೆ' ಎಂದು ಹೆಸರು. 'ಪ್ರಮಾಣರೇಖೆ' ಎಂದರೆ ಅಳತೆ ತೋರಿಸುವ ಗೆರೆ ಎಂದರ್ಥ ; ಈ ಗೆರೆಯ ಸಹಾಯ

ದಿಂದ ಭೂಪಟದಲ್ಲಿ ಯಾವುದರ ದೂರವನ್ನು ಬೇಕಾದರೂ ಅಳತೆಮಾಡಿ ತಿಳಿದುಕೊಳ್ಳಬಹುದು. ಒಂದು ತುಂಡು ದಾರವನ್ನು ತೆಗೆದುಕೊಂಡು ಈ ಭೂಪಟದಲ್ಲಿ ಪೂರ್ವದಿಂದ ಪಶ್ಚಿಮದವರೆಗೆ ಅಳೆದು ದಾರದಲ್ಲಿ ಗುರುತುಮಾಡಿಕೊಳ್ಳಿರಿ; ಆ ದಾರವನ್ನೇ ಅಳತೆಯ ಗೆರೆಯಮೇಲಿಟ್ಟು ಅಳತೆ ಮಾಡಿರಿ; ಅದು ಅಳತೆಯ ಗೆರೆಗೆ ೫ರಷ್ಟು ಇದೆ ಎಂದು ಇಟ್ಟುಕೊಳ್ಳೋಣ. ಅಳತೆಯ ಗೆರೆಯ ತುದಿಯಲ್ಲಿ ೧೦ ಮೈಲಿ ಎಂದು ಬರೆದಿದ್ದರೆ, ಆ ದಾರವು ೫ ಸಲ ೧೦ ಮೈಲಿಯಷ್ಟು ಎಂದರೆ ೫೦ ಮೈಲಿಯಷ್ಟು ದೂರವನ್ನು ತೋರಿಸಿದಂತಾಯಿತು. ಅದಕಾರಣ ನಾವು ಅಳತೆಮಾಡಿದ ಭಾಗವು ಪೂರ್ವದಿಂದ ಪಶ್ಚಿಮಕ್ಕೆ ೫೦ ಮೈಲಿಯಷ್ಟಿದೆ ಎಂದು ಗೊತ್ತಾಗುತ್ತದೆ. ಹೀಗೆಯೇ ಬೇಕಾದುದನ್ನು ಅಳತೆಮಾಡಬಹುದು.

ಸೂಚನೆ.—ಮೈಸೂರು ಸಂಸ್ಥಾನದ ಭೂಪಟವನ್ನು ಇಟ್ಟುಕೊಂಡು ಬೋಧಿಸುವುದು.

### ಪ್ರಶ್ನೆಗಳು.

ಪ್ರಮಾಣರೇಖೆ ಎಂದರೇನು? ಅದರಲ್ಲಿ ಏನು ಗುರುತು ಮಾಡಿದ್ದಾರೆ? ಅದರಿಂದ ಏನು ಗೊತ್ತಾಗುತ್ತದೆ? ಈ ಭೂಪಟದಲ್ಲಿ ಅಳತೆಯ ಗೆರೆಯುದ್ದದಷ್ಟು ಸ್ಥಳವು ನೆಲದಲ್ಲಿ ಎಷ್ಟು ಸ್ಥಳವನ್ನು ತೋರಿಸುತ್ತದೆ? ಭೂಪಟದಲ್ಲಿ ಒಂದು ಸ್ಥಳಕ್ಕೂ ಮತ್ತೊಂದು ಸ್ಥಳಕ್ಕೂ ಇರುವ ದೂರವನ್ನು ಹೇಗೆ ಅಳತೆಮಾಡಬಹುದು? ಇಗೋ ನೋಡಿರಿ. ಇದು ಮೈಸೂರು, ಇದು ಬೆಂಗಳೂರು; ಇವೆರಡಕ್ಕೂ ಇರುವ ದೂರವನ್ನು ಕಂಡುಹಿಡಿಯಿರಿ.

---

## ೧೦. ಹಳ್ಳಿಯ ನಕ್ಷೆ.

ಒಂದು ಮನೆಯ ನಕ್ಷೆಯನ್ನು ಬರೆಯುವ ಹಾಗೆ ಒಂದು ಊರಿನ ನಕ್ಷೆಯನ್ನೂ ಬರೆಯಬಹುದು. ಮನೆಯ ನಕ್ಷೆಯಂತೆಯೇ ಇದರಲ್ಲಿಯೂ ಊರಿನ ಉದ್ದದ ಮತ್ತು ಅಗಲದ ಅಳತೆಯನ್ನೂ, ಅದರ ಮುಖ್ಯವಾದ ಬೀದಿಗಳು, ಕೆರೆ, ದೇವಸ್ಥಾನ, ಪಾಠಶಾಲೆ, ಮೊದಲಾದುವುಗಳು ಇರುವ ಸ್ಥಳಗಳನ್ನೂ, ತೋರಿಸುತ್ತಾರೆ. ಆದರೆ ಇಷ್ಟು ದೊಡ್ಡ ಊರಿನ ನಕ್ಷೆಯಲ್ಲಿ ದೇವಸ್ಥಾನ, ಪಾಠಶಾಲೆ, ಮೊದಲಾದ ಸಣ್ಣ ಕಟ್ಟಡಗಳ ಅಳತೆಯನ್ನು ತೋರಿಸಲಾಗುವುದಿಲ್ಲ ಆದುದರಿಂದ ಅವುಗಳು ಇರುವ ಸ್ಥಳವನ್ನು ಮಾತ್ರ ತೋರಿಸುತ್ತಾರೆ. ಇಗೋ ನೋಡಿರಿ, ಇದು ಒಂದು ಹಳ್ಳಿಯ ಚಿತ್ರ.

ಇಲ್ಲಿ ನೋಡಿರಿ! ನಮ್ಮ ಊರಿನ ನಕ್ಷೆಯು ಇಲ್ಲಿ ಇದೆ. ಇದರಲ್ಲಿ ನಮ್ಮ ಹೊಲ, ಗದ್ದೆ, ಇರುವ ಎಡೆಯನ್ನು ಕಂಡುಹಿಡಿಯಬಹುದು.

ಸೂಚನೆ.—ಸರ್ಕಾರದವರು ನಮ್ಮ ಸೀಮೆಯ ಹಳ್ಳಿಗಳಲ್ಲಿರುವ ಹೊಲ, ಗದ್ದೆ, ತೋಟ, ಮೊದಲಾದುವುಗಳ ನಕ್ಷೆಗಳನ್ನೆಲ್ಲಾ ಬರೆಸಿದ್ದಾರೆ; ಆ ನಕ್ಷೆಗಳಿಂದ ಹೊಲ, ಗದ್ದೆ, ಮೊದಲಾದುವುಗಳ ಉದ್ದ, ಅಗಲ, ನೆಲ, ಮೊದಲಾದುವನ್ನು ತಿಳಿದುಕೊಳ್ಳಬಹುದು. ಉಪಾಧ್ಯಾಯರು ಆಯಾ ಹಳ್ಳಿಯ ನಕ್ಷೆಗಳನ್ನು ತರಿಸಿ ತೋರಿಸಬಹುದು.



ಹಳ್ಳಿಯ ಚಿತ್ರ.

ಒಂದು ಹಳ್ಳಿಯ ನಕ್ಷೆಯನ್ನು ಬರೆಯುವ ಹಾಗೆಯೇ ನಮ್ಮ ಮೈಸೂರು ಸೀಮೆಯಂತಹ ಒಂದು ದೊಡ್ಡ ದೇಶದ ನಕ್ಷೆಯನ್ನೂ ಬರೆಯಬಹುದು. ಇಂತಹವುಗಳಿಗೆಲ್ಲಾ ಭೂಪಟವೆಂದು ಹೆಸರು. ಇವುಗಳಲ್ಲಿ ಎಲ್ಲವನ್ನೂ ತೋರಿಸಬೇಕಾದರೆ ಅವು ಬಲು ಸಣ್ಣವಾಗಿರುವುದರಿಂದ ದೊಡ್ಡ ಊರುಗಳ ನಕ್ಷೆಯನ್ನೂ ಕೂಡ ವಿವರವಾಗಿ ತೋರಿಸಲಾಗುವುದಿಲ್ಲ. ಆದುದರಿಂದ ಅವುಗಳಿರುವ ನೆಲೆಯನ್ನು ಮಾತ್ರ ತೋರಿಸುತ್ತಾರೆ. ಸಣ್ಣ ಸಣ್ಣ ಹಳ್ಳಿ ಮೊದಲಾದುವನ್ನು ಬಿಟ್ಟೇಬಿಡಬೇಕಾಗುತ್ತದೆ.

## ಪ್ರಶ್ನೆಗಳು.

ಒಂದು ಮನೆಯ ನಕ್ಷೆಯಲ್ಲಿ ಏನೇನು ಗೊತ್ತಾಗುತ್ತದೆ? ಒಂದು ಊರಿನ ನಕ್ಷೆಯಲ್ಲಿ ಮನೆಗಳ ಉದ್ದ, ಅಗಲ, ಮೊದಲಾದುವು ಏಕೆ ಗೊತ್ತಾಗುವುದಿಲ್ಲ?

ನಮ್ಮ ಸರ್ಕಾರದವರು ಊರುಗಳ ಸ್ವರೂಪವನ್ನು ತೋರಿಸಲು ಏನನ್ನು ಬರೆಯು ಸಿದ್ದಾರೆ? ಅವುಗಳಿಂದ ಏನು ತಿಳಿಯುತ್ತದೆ? ಈ ನಕ್ಷೆಯಲ್ಲಿ ೨೦ನೆಯ ನಂಬರು ಹೊಲದ ಅಗಲವೆಷ್ಟು? ೫೦ನೆಯದರ ಉದ್ದವೆಷ್ಟು? ದೊಡ್ಡ ದೇಶಗಳ ನಕ್ಷೆ ಯನ್ನು ಹೀಗೆ ಬರೆಯಬಹುದೋ? ಅಂತಹ ನಕ್ಷೆಗಳಿಗೆ ಹೆಸರೇನು? ಅಂತಹ ಭೂಪಟಗಳಲ್ಲಿ ಊರುಗಳ ಉದ್ದ, ಅಗಲಗಳನ್ನೂ ಏಕೆ ತಿಳಿಸಲು ಆಗುವುದಿಲ್ಲ?

---

## ೧೧. ಬೆಟ್ಟ, ಹೊಳೆ, ಮೊದಲಾದುವನ್ನು ಸೂಚಿಸುವ ಗುರುತುಗಳು.


ಇಲ್ಲಿ ಒಂದು ಚಿತ್ರವಿದೆ, ನೋಡಿರಿ. ಇದರಲ್ಲಿ ಬೆಟ್ಟ, ಹೊಳೆ, ಮೊದಲಾದುವುಗಳು ಎಷ್ಟು ಚೆನ್ನಾಗಿ ಗೊತ್ತಾಗುತ್ತವೆ! ಭೂಪಟದಲ್ಲಿ ಅವುಗಳನ್ನು ಹೀಗೆ ಬರೆಯುವುದಿಲ್ಲ. ಅವುಗಳನ್ನು ತೋರಿಸುವುದಕ್ಕೆ ಕೆಲವು ಗುರುತಿಟ್ಟುಕೊಂಡಿದ್ದಾರೆ. ಮುಂದಣ ಪಟ



ಬೆಟ್ಟ, ಹೊಳೆ.

ವನ್ನು ನೋಡಿರಿ. ಅದರಲ್ಲಿ ಕಂಬಳಿಯ ಹುಳುವಿನಂತೆ ಗೆರೆಬರೆಯಾಗಿರುವ ಚಿತ್ರವು ಆ ಸ್ಥಳದಲ್ಲಿ ಬೆಟ್ಟವಿದೆ ಎಂದು ಸೂಚಿಸುತ್ತದೆ. ಮೊದಲು ಸಣ್ಣನಾಗಿ ಮುಂದೆ ಹಾವಿನ ಹಾಗೆ ಡೊಂಕು ಡೊಂಕಾಗಿ, ಹೋಗುತ ಹೋಗುತ ದಪ್ಪನಾಗುವ ಇಂತಹ ಗೆರೆಗಳು ಹೊಳೆಗಳಿರುವ ಸ್ಥಳವನ್ನು ತೋರಿಸುತ್ತವೆ. ಹೀಗೆ ಅಡ್ಡಗೆರೆಗಳಿಂದ ತುಂಬಿ ಡೊಂಕಾಗಿರುವ ಗೆರೆಗಳು ರೈಲುಹಾದಿಯನ್ನು ತೋರಿಸುತ್ತವೆ. ಹೀಗೆಯೇ ಒಂದು ದೇಶದ ಎಲ್ಲೆಯನ್ನು ತೋರಿಸುವುದಕ್ಕೆ ಅದರ ಸುತ್ತಲೂ ಸಣ್ಣ ಚುಕ್ಕಿಗಳಿರುತ್ತವೆ. ಎಲ್ಲೆಯನ್ನು

'ಮೋರೆ' ಎಂದೂ ಕೆಲವರು ಕರೆಯುವರು. ಇಂತಹ ಗುಂಡಾದ ಮಸಿಯ ಚುಕ್ಕಿಗಳು ಊರಿರುವ ಸ್ಥಳವನ್ನು ತೋರಿಸುತ್ತವೆ. ಆಯಾ ಬೆಟ್ಟ, ಹೊಳೆ, ಊರು, ಮೊದಲಾದುವುಗಳ ಹೆಸರನ್ನು ಅದರದರ ಪಕ್ಕದಲ್ಲಿ ಬರೆದಿರುತ್ತಾರೆ.




ಸೂಚನೆ—ಈಗ ಬೇರೆಬೇರೆ ಬಣ್ಣಗಳಿಂದಲೂ, ತೆಳ್ಳಗಾಗಲಿ, ಮಂದವಾಗಿಯಾಗಲಿ, ಹಾಕುವ ಬಣ್ಣದಿಂದಲೂ, ಭೂಮಿಯ ಎತ್ತರ, ತಗ್ಗುಗಳನ್ನೂ, ನೀರಿನ ಆಳವನ್ನೂ. ತೋರಿಸುವರು.

## ಪ್ರಶ್ನೆಗಳು.


ಈ ಭೂಪಟದಲ್ಲಿ ನೆಲವು ಯಾವುದು, ನೀರು ಯಾವುದು, ಎಂಬುದನ್ನು ಹೇಗೆ ತೋರಿಸಿದ್ದಾರೆ ? ಭೂಪಟದಲ್ಲಿ ಬೆಟ್ಟಗಳನ್ನು ಹೇಗೆ ತಿಳಿಸುತ್ತಾರೆ ? ನದಿಗಳನ್ನು ಹೇಗೆ ತಿಳಿಯಬಹುದು ? ಈ ಪಟದಲ್ಲಿ ಊರುಗಳನ್ನು ತೋರಿಸಿ ; ಅವುಗಳ ಹೆಸರನ್ನು ಓದಿ ಹೇಳಿರಿ. ಇಲ್ಲಿ ರೈಲ್ ಹಾದಿಯನ್ನು ತೋರಿಸಿರಿ. ಈ ದೇಶದ ಎಲ್ಲೆ ಯಾವುದು ?

---

## ೧೨. ಮೈಸೂರು—ಭೂಪಟ, ಎಲ್ಲೆಗಳು.

ಇಲ್ಲಿ ಒಂದು ಭೂಪಟವಿದೆ ನೋಡಿರಿ. ಇದು ಯಾವ ದೇಶದ ಭೂಪಟ ? ಮೈಸೂರು ದೇಶವೆಂದು ಇಲ್ಲಿ ಬರೆದಿದೆ ನೋಡಿರಿ. ಹೀಗೆಯೇ ಆಯಾ ದೇಶದ ಭೂಪಟದ ಹೆಸರನ್ನು ಒಂದು ಕಡೆ ದೊಡ್ಡ ಅಕ್ಷರಗಳಲ್ಲಿ ಬರೆದಿರುತ್ತಾರೆ. ಈಭೂಪಟದಲ್ಲಿ ದಿಕ್ಕುಗಳನ್ನು ಹೇಗೆ ಕಂಡುಹಿಡಿಯಬಹುದು ? ಇಗೋ ಇಲ್ಲಿ ದಿಕ್ಸೂಚಿ ಇದೆ ನೋಡಿರಿ. ಈ ಸೂಚಿಯ ಮೊನೆ ಉತ್ತರದಿಕ್ಕನ್ನು ಸೂಚಿಸುತ್ತದೆ. ಈಗ ಇದರ ತುದಿಯನ್ನು ಉತ್ತರಕ್ಕೆ ಸರಿಯಾಗಿ

ತಿರುಗಿಸಿಡುತ್ತೇನೆ. ಈಗ ಭೂಪಟದ ಪೂರ್ವ, ದಕ್ಷಿಣ, ಪಶ್ಚಿಮಗಳು, ಕ್ರಮವಾಗಿ ಆಯಾ ದಿಕ್ಕುಗಳಿಗೆ ತಿರುಗಿವೆ ನೋಡಿರಿ. ಆದರೆ ಭೂಪಟಗಳನ್ನೆಲ್ಲಾ ಉತ್ತರದಿಕ್ಕು ಮೇಲಾಗುವಂತೆ ತೂಗುಹಾಕುತ್ತಾರೆ. ಆದುದರಿಂದ ನಾವು ಅವುಗಳನ್ನು ನೋಡುವಾಗ ನಮ್ಮ ತಲೆಯಕಡೆ ಉತ್ತರ, ಕಾಲುಕಡೆ ದಕ್ಷಿಣ, ಬಲಗಡೆ ಪೂರ್ವ, ಎಡಗಡೆ ಪಶ್ಚಿಮವಾಗುತ್ತದೆ. ಹೀಗೆಯೇ ಎಲ್ಲಾ ಭೂಪಟಗಳ ದಿಕ್ಕನ್ನೂ ಕಂಡುಹಿಡಿಯಬಹುದು. ಈ




ಪಟದಲ್ಲಿ ಎಲ್ಲೆಯೊಳಗಿರುವ ಭಾಗವು ಮೈಸೂರು ದೇಶವನ್ನು ತೋರಿಸುತ್ತದೆ. ಎಲ್ಲೆಯ ಹೊರಗಿರುವ ಭಾಗಗಳು ಬೇರೆ ಸೀಮೆಗಳ ಭಾಗಗಳನ್ನು ತೋರಿಸುತ್ತವೆ. ಈಗ ಮೈಸೂರು ದೇಶದ ಸುತ್ತಲೂ ಯಾವ ಯಾವ ಸೀಮೆಗಳಿವೆ ? ಕ್ರಮವಾಗಿ ನೋಡೋಣ. ಮೊದಲು ಉತ್ತರದಲ್ಲಿ ಏನೇನಿವೆ ? ಬೊಂಬಾಯಿ ಸೀಮೆ [ಧಾರ್ವಾಡ], ಮದ್ರಾಸ್ ಸೀಮೆ [ಬಳ್ಳಾರಿ, ಅನಂತಪುರ]; ಪೂರ್ವದಲ್ಲಿ ಏನೇನಿವೆ ? ಮದ್ರಾಸ್ ಸೀಮೆ

[ಕಡಪ, ಉತ್ತರ ಆರ್ಕಾಟು, ಶಾಲ್ಯ]; ದಕ್ಷಿಣದಲ್ಲಿ ಏನೇನಿವೆ? ಮದ್ರಾಸ್ ಸೀಮೆ [ಕೊಯಮುತ್ತೂರು, ನೀಲಗಿರಿ, ಮಲಬಾರ್]; ಪಶ್ಚಿಮದಲ್ಲಿ ಏನೇನಿವೆ? ಕೊಡಗು, ಮದ್ರಾಸ್ ಸೀಮೆ [ದಕ್ಷಿಣ ಕನರ, ಉತ್ತರ ಕನರ]. ಈ ದೇಶಗಳು ಆಯಾ ದಿಕ್ಕಿನಲ್ಲಿ ಮೈಸೂರು ದೇಶದ ಎಲ್ಲೆಯನ್ನು ತೋರಿಸುವುದರಿಂದ ಇವುಗಳಿಗೆ ಎಲ್ಲೆಗಳು ಅಥವಾ ಮೇರೆಗಳು ಎಂದು ಹೆಸರು.

ಸೂಚನೆ.—ಉಪಾಧ್ಯಾಯರು ನಕ್ಷೆಯನ್ನು ನೆಲದಮೇಲೆ ಹಾಕಿ ತೋರಿಸುವುದು ಮೇಲು. 2. ಮೈಸೂರಿನ ಮೇರೆಗಳಾಗಿ ಬೊಂಬಾಯಿಸೀಮೆ, ಮದ್ರಾಸ್ ಸೀಮೆ ಇವೆ ಎಂಬುದನ್ನು ಬಾಲಕರು ತಿಳಿದುಕೊಂಡರೆ ಸಾಕು. ಡಿಸ್ಟ್ರಿಕ್ಟುಗಳ ಹೆಸರುಗಳನ್ನು ಮೊದಲಲ್ಲಿ ತಿಳಿಯಲು ಅವಶ್ಯಕವಿಲ್ಲ.

### ಪ್ರಶ್ನೆಗಳು.

ಮೇರೆಗಳು ಅಥವಾ ಎಲ್ಲೆಗಳು ಎಂದರೇನು? ನಿಮ್ಮ ಪಾಠಶಾಲೆಯ ಮೇರೆಗಳನ್ನು ಹೇಳಿರಿ. ಮೈಸೂರು ದೇಶದ ಉತ್ತರ ದಿಕ್ಕಿನ ಮೇರೆಗಳು ಯಾವುವು? ದಕ್ಷಿಣದಲ್ಲಿ ಯಾವುದು ಮೇರೆಯಾಗಿದೆ? ಪೂರ್ವದ ಮತ್ತು ಪಶ್ಚಿಮದ ಮೇರೆಗಳು ಯಾವುವು?

---

## ೧೩. ಮೈಸೂರು—ಬೆಟ್ಟಗಳೂ, ನದಿಗಳೂ.

ಈ ಭೂಪಟದಲ್ಲಿ ಮುಖ್ಯವಾದ ಬೆಟ್ಟಗಳು ಯಾವುವು? ಕ್ರಮವಾಗಿ ನೋಡೋಣ. ಉತ್ತರದಲ್ಲಿ ಕೊಡಚಾದ್ರಿ, ಚಿತ್ರದುರ್ಗ; ಪೂರ್ವದಲ್ಲಿ ಮಧ್ದಗಿರಿ, ನಂದೀದುರ್ಗ, ಶಿವಗಂಗೆ; ದಕ್ಷಿಣದಲ್ಲಿ ಬಿಳಿಗಿರಿರಂಗನಬೆಟ್ಟ, ಚಾಮುಂಡೀಬೆಟ್ಟ; ಪಶ್ಚಿಮದಲ್ಲಿ ಬಾಬಾಬುಡರ್ಬೆಟ್ಟ, ಕುದುರೇಮುಖ.

ಈ ಭೂಪಟದಲ್ಲಿ ಮುಖ್ಯವಾದ ನದಿಗಳು ಯಾವುವು ಇವೆಯೋ ಕ್ರಮವಾಗಿ ನೋಡೋಣ. ಉತ್ತರದಲ್ಲಿ ತುಂಗಭದ್ರ, ವೇದಾವತಿ; ಪೂರ್ವದಲ್ಲಿ ಉತ್ತರಪಿನಾಕಿನಿ, ದಕ್ಷಿಣಪಿನಾಕಿನಿ, ಪಾಲಾರ್; ದಕ್ಷಿಣದಲ್ಲಿ ಕಾವೇರಿ; ಪಶ್ಚಿಮದಲ್ಲಿ ಶರಾವತಿ. ಇವುಗಳ ಲ್ಲೆಲ್ಲಾ ಕಾವೇರಿಯೇ ಮುಖ್ಯವಾದುದು.

### ಪ್ರಶ್ನೆಗಳು.

ಚಾಮುಂಡೀಬೆಟ್ಟವೆಲ್ಲಿದೆ? ಪಶ್ಚಿಮದಲ್ಲಿ ಯಾವ ಬೆಟ್ಟವಿದೆ? ಶಿವಗಂಗೆ

ಇರುವುದೆಲ್ಲಿ? ನಂದೀದುರ್ಗವಿರುವುದು ಯಾವ ದಿಕ್ಕಿನಲ್ಲಿ? ಬಾಬಾಬುಡರ್ ಬೆಟ್ಟವೆಲ್ಲದೆ? ಇಲ್ಲಿಯ ಮುಖ್ಯವಾದ ನದಿ ಯಾವುದು? ಪೂರ್ವಕ್ಕೆ ಹರಿಯುವ ನದಿಗಳು ಯಾವುವು? ತುಂಗಭದ್ರ ಯಾವಕಡೆ ಹರಿಯುತ್ತದೆ?

---

## ೧೪. ಮೈಸೂರು—ವಿಭಾಗಗಳು.

ಈ ದೇಶಕ್ಕೆ ಸೇರಿದ ಬೆಟ್ಟ, ಗುಡ್ಡ, ಗಿಡಗಾಡುಗಳಲ್ಲಿ ಆನೆ, ಕಾಡೆಮ್ಮೆ, ಜಿಂಕೆ, ಚಿರತೆ, ಹುಲಿ, ಕರಡಿ, ಇಂತಾದ ಮೃಗಗಳಿವೆ. ಕೆಲಕೆಲ ಕಾಡುಗಳಲ್ಲಿ ಕಾಡುಜನರೂ ವಾಸವಾಗಿರುವರು. ಈ ದೇಶದ ಎಲ್ಲಾ ಭಾಗಗಳಲ್ಲಿಯೂ ನಾಗರಿಕರಾದ ಜನರು ವಾಸವಾಗಿರುವರು. ಇವೆಲ್ಲವನ್ನೂ ಒಳಗೊಂಡಿರುವ ಮೈಸೂರು ರಾಜ್ಯದ ಆದಳಿತವನ್ನು ಸುಲಭವಾಗಿ ನಡೆಯಿಸುವುದಕ್ಕಾಗಿ ಈ ಸೀಮೆಯನ್ನು ಸರ್ಕಾರದವರು ಎಂಟು ಭಾಗವಾಗಿ ವಿಂಗಡಿಸಿದ್ದಾರೆ. ಈ ವಿಭಾಗಗಳಿಗೆ 'ಡಿಸ್ಟ್ರಿಕ್ಟುಗಳು' ಎಂದು ಹೆಸರು. ಈ ವಿಭಾಗಗಳನ್ನು ಈ ಭೂಪಟದಲ್ಲಿ ಬೇರೆಬೇರೆ ತಿಳಿಸಿದೆ. ಅವುಗಳ ಹೆಸರನ್ನು ಉತ್ತರದಿಕ್ಕಿನಿಂದ ಕ್ರಮವಾಗಿ ನೋಡೋಣ. ಉತ್ತರದಲ್ಲಿ ಶಿವಮೊಗ್ಗೆ, ಚಿತ್ರದುರ್ಗ, ತುಮಕೂರು; ಪೂರ್ವದಲ್ಲಿ ಕೋಲಾರ, ಬೆಂಗಳೂರು; ದಕ್ಷಿಣದಲ್ಲಿ ಮೈಸೂರು; ಪಶ್ಚಿಮದಲ್ಲಿ ಹಾಸನ, ಕಡೂರು.

### ಪ್ರಶ್ನೆಗಳು.

ಕಾಡುಜನರು ಯಾರು? ನಾಗರಿಕರಾದ ಜನರು ಯಾರು? ಸರ್ಕಾರದವರು ಈ ದೇಶವನ್ನು ಎಷ್ಟು ವಿಭಾಗ ಮಾಡಿದ್ದಾರೆ? ಏಕೆ ವಿಭಾಗ ಮಾಡಿದ್ದಾರೆ? ಉತ್ತರದಲ್ಲಿ ಯಾವ ಡಿಸ್ಟ್ರಿಕ್ಟುಗಳಿವೆ? ಮೈಸೂರು ಡಿಸ್ಟ್ರಿಕ್ಟು ಯಾವ ಕಡೆ ಇದೆ? ಶಿವಮೊಗ್ಗೆಗೆ ಪೂರ್ವದಲ್ಲಿರುವ ಡಿಸ್ಟ್ರಿಕ್ಟು ಯಾವುದು? ಕೋಲಾರ ಡಿಸ್ಟ್ರಿಕ್ಟಿನಿಂದ ನೆಟ್ಟಗೆ ಪಶ್ಚಿಮಕ್ಕೆ ಹೋದರೆ ಯಾವ ಯಾವ ಡಿಸ್ಟ್ರಿಕ್ಟುಗಳು ಸಿಕ್ಕುತ್ತವೆ? ಬೆಂಗಳೂರು ಡಿಸ್ಟ್ರಿಕ್ಟನ್ನು ತೋರಿಸಿ. ಹಾಸನ ಡಿಸ್ಟ್ರಿಕ್ಟು ಯಾವುದು?

---

# ೧೫. ಮೈಸೂರು ದೇಶದ ಡಿಸ್ಟ್ರಿಕ್ಟುಗಳು.

## ೧. ಮೈಸೂರು ಡಿಸ್ಟ್ರಿಕ್ಟು.

೧೭ನೆಯ ಪುಟದಲ್ಲಿರುವ ಭೂಪಟದಲ್ಲಿ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಈಗ ಎಲ್ಲಿ ರೈಲು ಮೊದಲಾಗುತ್ತದೆ? ನೋಡಿ ಹೇಳಿ. ನಂಜನಗೂಡಿನಲ್ಲಿ ಒಂದು ದೊಡ್ಡ ದೇವಸ್ಥಾನವಿದೆ. ಇಲ್ಲಿಗೆ ಜನರು ಯಾತ್ರೆಗಾಗಿ ಬರುತ್ತಾರೆ. ಇಲ್ಲಿಂದ ನಾವು ರೈಲು ಹತ್ತಿ ಹೊರಟರೆ, ಮುಂದೆ ದೊಡ್ಡದಾದ ಯಾವ ಸ್ಟೇಷನ್ ಸಿಕ್ಕುತ್ತದೆ? ಮೈಸೂರು. ಇದೇ ನಮ್ಮ ಸೀಮೆಗೆ ರಾಜಧಾನಿ. ಇಲ್ಲಿ ನಮ್ಮ ಶ್ರೀಮನ್ಮಹಾರಾಜರವರು ವಾಸಮಾಡುತ್ತಾರೆ.



ಮೈಸೂರು ದೊಡ್ಡಪೇಟೆ.

ಇಲ್ಲಿ ಅರಮನೆಯೂ, ಹೆಸರುವಾಸಿಯಾದ ದೇವಸ್ಥಾನಗಳೂ ಇವೆ. ಮತ್ತು ನಮ್ಮ ಸೀಮೆಯು ಸರ್ವೋನ್ನತಸ್ಥಿತಿಗೆ ಬರಲು ಸಾಧಕಗಳಾದ ನಾನಾ ವಿದ್ಯೆಗಳನ್ನು ಕಲಿಸುವುದಕ್ಕಾಗಿ ಈಚೆಗೆ ಇಲ್ಲಿ ಒಂದು ವಿಶ್ವವಿದ್ಯಾಲಯವು (ಯೂನಿವರ್ಸಿಟಿ) ಏರ್ಪಾಡಾಗಿರುವುದು. ಮೈಸೂರಿನಿಂದ ಮುಂದೆ ಹೋದರೆ ಯಾವ ಊರು ಸಿಕ್ಕುತ್ತವೆ? ಶ್ರೀರಂಗಪಟ್ಟಣ. ಇಲ್ಲಿ ಕಾವೇರಿಯು ಎರಡಾಗಿ ಕವಲೊಡೆದು ಈ ಊರನ್ನು ಸುತ್ತಿಕೊಂಡಿದೆ. ಈ ಊರ ಸುತ್ತಲೂ ದೊಡ್ಡ ಕೋಟೆ ಇದೆ. ಇಲ್ಲಿ ಹಿಂದೆ ಹೈದರಲ್ಲಿಯೂ, ಅವನ ಮಗ

ಟೀಪುಸುಲ್ತಾನನೂ ಆಳುತ್ತಿದ್ದರು. ಇಲ್ಲಿಂದ ಪಶ್ಚಿಮಕ್ಕೆ ಸುಮಾರು ಏಳು ಮೈಲಿ ದೂರದಲ್ಲಿ ಕನ್ನಂಬಾಡಿ ಎಂಬ ಒಂದು ಗ್ರಾಮವಿರುವುದು. ಇಲ್ಲಿ ಕಾವೇರಿಯನ್ನು ಅಡ್ಡ ಕಟ್ಟಿ 'ಕೃಷ್ಣರಾಜಸಾಗರ' ಎಂಬ ಹೆಸರಿನಿಂದ ಒಂದು ದೊಡ್ಡ ಕೆರೆಯು ಕಟ್ಟಲ್ಪಡುತ್ತಿರುವುದು. ಮಾರಿಕಣಿವೆಯನ್ನು ಬಿಟ್ಟರೆ ಇದಕ್ಕಿಂತಲೂ ದೊಡ್ಡದಾದ ಕೆರೆಯು ಈ ಸೀಮೆಯಲ್ಲಿ ಮತ್ತೊಂದಿಲ್ಲ. ಇದರಿಂದ ರಾಜ್ಯದ ಉತ್ಪತ್ತಿಯು ಹೆಚ್ಚುವುದು. ಈ ಡಿಸ್ಟ್ರಿಕ್ಟಿನಲ್ಲಿ ಬತ್ತವನ್ನು ಹೆಚ್ಚಾಗಿ ಬೆಳೆಯುವರು.

## ೨. ಬೆಂಗಳೂರು ಡಿಸ್ಟ್ರಿಕ್ಟು.

ರೈಲು ಮುಂದಕ್ಕೆ ಹೊರಟು ಬೆಂಗಳೂರು ಡಿಸ್ಟ್ರಿಕ್ಟಿಗೆ ಹೋದಕೂಡಲೆ ಮೊದಲು ಸಿಕ್ಕುವ ಊರು ಯಾವುದು ಹೇಳು. ಚನ್ನಪಟ್ಟಣ. ಇಲ್ಲಿ ಸೊಗಸಾದ ಬಚ್ಚಣಿ (ಬಣ್ಣದ)




ಬೆಂಗಳೂರು ಅಠಾರಾ ಕಚೇರಿ.

ಸಾಮಾನುಗಳನ್ನೂ, ವೀಣೆಯ ತಂತಿಯನ್ನೂ, ರೇಷ್ಮೆಯನ್ನೂ, ತಯಾರ್ಮಾಡುತ್ತಾರೆ. ಇಲ್ಲಿಂದ ಮುಂದೆ ಹೋದರೆ ಬೆಂಗಳೂರಿಗೆ ಹೋಗಿ ಸೇರುತ್ತೇವೆ. ಬೆಂಗಳೂರು ನಮ್ಮ ಸೀಮೆಯಲ್ಲೆಲ್ಲಾ ದೊಡ್ಡ ಪಟ್ಟಣ. ಇಲ್ಲಿ 'ಮ್ಯೂಸಿಯಂ' ಎಂಬ ತಮಾಷೆ ಬಂಗಲೆಯೂ,

' ಲಾಲ್‌ಬಾಗ್ ' ಎಂಬ ಸೊಗಸಾದ ತೋಟವೂ ಇವೆ. ಇವಲ್ಲದೆ ಇಲ್ಲಿ ಮಹಾರಾಜರವರ ಅರಮನೆಯೂ, ಅಠಾರಾ ಕಚೇರಿಯೂ, ದೊಡ್ಡ ಆಸ್ಪತ್ರೆಯೂ ಇವೆ. ಈ ಊರಿನಲ್ಲಿ ರತ್ನಗಂಬಳಿಗಳನ್ನೂ, ರೇಷ್ಮೆಯ ಸೀರೆಗಳನ್ನೂ ಮಾಡುತ್ತಾರೆ. ಬಗೆಬಗೆಯಾದ ಹಣ್ಣುಗಳನ್ನೂ ಕಾಯಿಪಲ್ಯಗಳನ್ನೂ, ಬೆಳೆಯುತ್ತಾರೆ. ಇದರ ಹತ್ತಿರ ಇರುವ ದಂಡಿನಲ್ಲಿ ಒಂದು ಇಂಗ್ಲಿಷ್ ಸೈನ್ಯವಿದೆ. ಬೆಂಗಳೂರು ಆರೋಗ್ಯವಾದ ಸ್ಥಳ ಈ ಡಿಸ್ಟ್ರಿಕ್ಟಿನಲ್ಲಿ ರಾಗಿಯನ್ನು ಹೆಚ್ಚಾಗಿ ಬೆಳೆಯುತ್ತಾರೆ.

## ೩. ಕೋಲಾರ ಡಿಸ್ಟ್ರಿಕ್ಟು.

ಬೆಂಗಳೂರಿಂದ ರೈಲುಹತ್ತಿ ಕೋಲಾರದ ಡಿಸ್ಟ್ರಿಕ್ಟಿಗೆ ಹೋಗೋಣ. ಹೋಗುವ ದಾರಿಯಲ್ಲಿ ಬೌರಿಂಗ್‌ಪೇಟೆ ಸಿಕ್ಕುತ್ತದೆ. ಅಲ್ಲಿ ಇಳಿದು ಅಲ್ಲಿಂದ ಡಿಸ್ಟ್ರಿಕ್ಟಿನ ಮುಖ್ಯ



ಊರಿಗಾಂ ಬಂಗಾರದ ಗಣಿ.

ಪಟ್ಟಣವಾದ ಕೋಲಾರಕ್ಕೆ ಬೇರೆ ರೈಲ್ ಹತ್ತಿ ಹೋಗಬಹುದು. ಕೋಲಾರದಲ್ಲಿ ಒಳ್ಳೆಯ ಕಂಬಳಿಗಳು ತಯಾರಾಗುತ್ತವೆ. ಈ ಡಿಸ್ಟ್ರಿಕ್ಟಿನಲ್ಲಿ ಚಿನ್ನದ ಗಣಿಗಳು ಇರುವುವು. ಊರಿಗಾಂ ಎಂಬುದು ಒಂದು ದೊಡ್ಡ ಗಣಿ. ಈ ಗಣಿಗಳಿಂದ ಚಿನ್ನದ ಅದಿರನ್ನು ಅಗೆದು ಎತ್ತುತ್ತಾರೆ. ಕಬ್ಬಿನ ಬೆಳೆಯು ಈ ಡಿಸ್ಟ್ರಿಕ್ಟಿನಲ್ಲಿ ಬಲು ಹೆಚ್ಚು.

## ೪. ತುಮಕೂರು ಡಿಸ್ಟ್ರಿಕ್ಟು.


ಪುನಃ ನಾವು ಬೆಂಗಳೂರಿಗೆ ಬಂದು ರೈಲು ಹತ್ತಿ, ತುಮಕೂರು ಡಿಸ್ಟ್ರಿಕ್ಟಿಗೆ ಹೋದರೆ ಅಲ್ಲಿ ತುಮಕೂರು ಸಿಕ್ಕುತ್ತದೆ. ಇದೇ ಇಲ್ಲಿಗೆ ಮುಖ್ಯಪಟ್ಟಣ. ತಿಪಟೂರು ವ್ಯಾಪಾರಸ್ಥಳ. ಈ ಡಿಸ್ಟ್ರಿಕ್ಟಿನಲ್ಲಿ ತೆಂಗಿನ ಬೆಳೆ ಬಹಳ

### ಪ್ರಶ್ನೆಗಳು.

ನಮ್ಮ ಶ್ರೀಮನ್ಮಹಾರಾಜರವರ ರಾಜಧಾನಿ ಯಾವುದು? ನಂಜನಗೂಡಿನಲ್ಲಿ ಏನಿದೆ? ಹೈದರಲ್ಲಿಯು ಯಾವ ಊರಿನಲ್ಲಿ ಆಳುತ್ತಿದ್ದನು? ಆ ಊರನ್ನು ತೋರಿಸು. ಅಲ್ಲಿ ಯಾವ ಹೊಳೆ ಇದೆ? ಬೆಂಗಳೂರು ಯಾವ ಡಿಸ್ಟ್ರಿಕ್ಟಿನಲ್ಲಿದೆ? ಚನ್ನಪಟ್ಟಣವನ್ನು ತೋರಿಸು. ಅಲ್ಲಿ ಏನು ಸಿಕ್ಕುತ್ತದೆ? ಚಿನ್ನದ ಗಣಿಗಳು ಯಾವ ಡಿಸ್ಟ್ರಿಕ್ಟಿನಲ್ಲಿವೆ? ತುಮಕೂರು ಡಿಸ್ಟ್ರಿಕ್ಟಿನ ಮುಖ್ಯಪಟ್ಟಣ ಯಾವುದು? ಅದನ್ನು ತೋರಿಸು.

## ೫. ಹಾಸನ ಡಿಸ್ಟ್ರಿಕ್ಟು.

ತಿಪಟೂರಿನಿಂದ ರೈಲಿನಲ್ಲಿ ಮುಂದೆ ಹೋದರೆ ಅರಸೀಕೆರೆ ಸಿಕ್ಕುವುದು. ಇದು




ಬೇಲೂರು ದೇವಸ್ಥಾನ.

ಹಾಸನದ ಡಿಸ್ಟ್ರಿಕ್ಟಿಗೆ ಸೇರಿದುದು; ಈ ಡಿಸ್ಟ್ರಿಕ್ಟಿನ ಮುಖ್ಯಪಟ್ಟಣ ಹಾಸನವು. ಈ ಡಿಸ್ಟ್ರಿಕ್ಟು ಕಾಫಿಯ ಬೆಳೆಗೆ ಪ್ರಸಿದ್ಧವಾಗಿದೆ. ಬೇಲೂರು ದೇವಾಲಯದಿಂದ ಹೆಸರುಗೊಂಡಿದೆ.

## ೬. ಕಡೂರು ಡಿಸ್ಟ್ರಿಕ್ಟು.

ಹಾಸನ ಡಿಸ್ಟ್ರಿಕ್ಟಿನ ಅರಶೀಕೆರೆಯಿಂದ ರೈಲ್ಲಿನಲ್ಲಿ ಮುಂದೆ ಹೋದರೆ ಕಡೂರು ಡಿಸ್ಟ್ರಿಕ್ಟಿಗೆ ಹೋಗುತ್ತೇವೆ. ಈ ಡಿಸ್ಟ್ರಿಕ್ಟಿಗೆ ಮುಖ್ಯಪಟ್ಟಣ ಚಿಕ್ಕಮಗಳೂರು. ಇದು ರೈಲುದಾರಿಯಲ್ಲಿಲ್ಲ ; ದೂರವಾಗಿದೆ. ಈ ಡಿಸ್ಟ್ರಿಕ್ಟಿನಲ್ಲಿ ಒಳ್ಳೆಯ ಅಡಕೆಯನ್ನೂ, ಕಾಫಿಯನ್ನೂ, ಬೆಳೆಯುತ್ತಾರೆ. ಶೃಂಗೇರಿ ಎಂಬ ಊರಿನಲ್ಲಿ ಶ್ರೀ ಶೃಂಗೇರಿ ಸ್ವಾಮಿಗಳವರ ಮಠವಿದೆ.

## ೭. ಶಿವಮೊಗ್ಗಾ ಡಿಸ್ಟ್ರಿಕ್ಟು.

ಕಡೂರು ಡಿಸ್ಟ್ರಿಕ್ಟಿನ ಬೀರೂರಿನಿಂದ ಪಶ್ಚಿಮಕ್ಕೆ ಹೋದರೆ ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ ಹೋಗುತ್ತೇವೆ ಶಿವಮೊಗ್ಗೆಯೇ ಇಲ್ಲಿಗೆ ಮುಖ್ಯಪಟ್ಟಣ. ಈ ಡಿಸ್ಟ್ರಿಕ್ಟಿಗೆ ಸೇರಿದ ಸೊರಬ ಎಂಬ ಊರಿನಲ್ಲಿ ಗುಡಿಗಾರರೆಂಬ ವವರು ಗಂಧದಮರದಲ್ಲಿ ಚಿತ್ರ ಕೊರೆದು ವಿಚಿತ್ರವಾದ ಸಾಮಾನುಗಳನ್ನು ಮಾಡುತ್ತಾರೆ. ಈ ಡಿಸ್ಟ್ರಿಕ್ಟಿನಲ್ಲಿಯೂ ಅಡಕೆಯ ಬೆಳೆ ಹೆಚ್ಚು.

## ೮. ಚಿತ್ರದುರ್ಗ ಡಿಸ್ಟ್ರಿಕ್ಟು.



ಚಿತ್ರದುರ್ಗದ ಕೋಟೆ.

ಡಿಸ್ಟ್ರಿಕ್ಟಿಗೆ ಬಂದು ಅಲ್ಲಿಂದ ರೈಲುಮಾರ್ಗವಾಗಿ ಉತ್ತರಕ್ಕೆ ಹೊರಟರೆ, ಚಿತ್ರದುರ್ಗದ

ಡಿಸ್ಟ್ರಿಕ್ಟಿಗೆ ಹೋಗುತ್ತೇವೆ. ಈ ಡಿಸ್ಟ್ರಿಕ್ಟಿನ ಮುಖ್ಯಪಟ್ಟಣವಾದ ಚಿತ್ರದುರ್ಗಕ್ಕೆ ಚಿಕ್ಕಜಾಜೂರು ಸ್ಟೇಷನ್ನಿನಲ್ಲಿ ಇಳಿದು ಮೈಸೂರು ರೈಲುಗಾಡಿಯಲ್ಲಿ ಹೋಗಬೇಕು ಆ ಊರಿನಲ್ಲಿ ಏಳುಸುತ್ತಿನ ಕೋಟೆ ಇದೆ. ಮೊಳಕಾಲ್ಮೂರು ಎಂಬಲ್ಲಿ ಸೊಗಸಾದ ರೇಷ್ಮೆಯ ಬಟ್ಟೆಗಳನ್ನು ನೇಯುತ್ತಾರೆ. ಈ ಡಿಸ್ಟ್ರಿಕ್ಟಿನಲ್ಲಿ ಹತ್ತಿಯನ್ನು ಬಹುವಾಗಿ ಬೆಳೆಯುತ್ತಾರೆ.

ಸೂಚನೆ.—ಉಪಾಧ್ಯಾಯರು ಕಪ್ಪುಹಲಗೆಯಮೇಲೆ ಮೈಸೂರು ದೇಶದ ಪಟವನ್ನು ಬರೆದು ಡಿಸ್ಟ್ರಿಕ್ಟುಗಳ ಮೇರೆಗಳನ್ನು ವಿಭಾಗಿಸಿ, ಅಡಕೆಯ ಮರ, ಸೇಬಿನ ಹಣ್ಣು, ಕಾಫಿಯ ಗಿಡ, ಹಿಪ್ಪಲನೇರಳೆ ರೇಷ್ಮೆಹುಳ, ಮುಂತಾದುವುಗಳೂ ಅವು ದೊರೆಯುವ ಆಯಾ ಡಿಸ್ಟ್ರಿಕ್ಟುಗಳಲ್ಲಿ ಬರೆದು ತೋರಿಸಬೇಕು.

### ಪ್ರಶ್ನೆಗಳು.

ಬೇಲೂರು ಎಲ್ಲಿದೆ? ತೋರಿಸು. ಅದು ಏತಕ್ಕೆ ಪ್ರಸಿದ್ಧವಾಗಿದೆ? ಕಡೂರು ಡಿಸ್ಟ್ರಿಕ್ಟಿನ ಮುಖ್ಯಪಟ್ಟಣ ಯಾವುದು? ಅಲ್ಲಿ ಏನು ಬೆಳೆಯುತ್ತಾರೆ? ಸೊರಬವು ಯಾವ ಡಿಸ್ಟ್ರಿಕ್ಟಿಗೆ ಸೇರಿದೆ? ಅದು ಏತಕ್ಕೆ ಪ್ರಸಿದ್ಧವಾಗಿದೆ? ಮೊಳಕಾಲ್ಮೂರು ಎಲ್ಲಿದೆ? ತೋರಿಸು. ಅಲ್ಲಿ ಯಾವ ಪದಾರ್ಥವಾಗುತ್ತದೆ? ನಿನ್ನ ತಂಗಿಯು ನವರಾತ್ರಿಯಲ್ಲಿ ಗೊಂಬೆ ಇಡಬೇಕಾದರೆ ಅವಳಿಗೆ ಬೇಕಾದ ಬಣ್ಣದ ಬೊಂಬೆಗಳು, ಅವುಗಳಿಗೆ ಉಡಿಸುವುದಕ್ಕೆ ರೇಷ್ಮೆಬಟ್ಟೆಗಳು, ನೆಲದಮೇಲೆ ಹಾಸುವುದಕ್ಕೆ ರತ್ನಗಂಬಳಿಗಳು, ಅವಳ ಜತೆಗಾತಿಯರಿಗೆ ವೀಳೆಯದೆಲೆಯೊಡನೆ ಕೊಡುವುದಕ್ಕೆ ಒಳ್ಳೆಯ ಅಡಕೆ—ಇವನ್ನೆಲ್ಲಾ ಮೈಸೂರು ದೇಶದ ಯಾವ ಯಾವ ಊರುಗಳಿಂದ ತರಿಸಿಕೊಡಬಹುದು?

---

## ೧೬. ಮೈಸೂರು ದೇಶದ ವಿಸ್ತೀರ್ಣ ಮತ್ತು ಆಡಳಿತ.

ಈಗ ನಾವು ಮೈಸೂರು ದೇಶದ ಎಲ್ಲಾ ಡಿಸ್ಟ್ರಿಕ್ಟುಗಳಿಗೂ ಹೋಗಿದ್ದಹಾಗಾಯಿತು. ಈ ಸೀಮೆಯ ಉದ್ದ, ಹೆಚ್ಚಾಗಿರುವಕಡೆ ೨೩೦ ಮೈಲಿ; ಅಗಲ ಹೆಚ್ಚಾಗಿರುವ ಸ್ಥಳದಲ್ಲಿ ೨೩೦ ಮೈಲಿ. ಇದರ ಚದರಳತೆ, ೨೯,೪೭೫ ಚದರಮೈಲಿ. ಇಲ್ಲಿ ಸುಮಾರು ೫೮ ಲಕ್ಷದ ಮೇಲೆ ಜನರು ವಾಸವಾಗಿದ್ದಾರೆ. ಇವರು ಕನ್ನಡ ಮಾತನ್ನು ಆಡುತ್ತಾರೆ. ಇಲ್ಲಿಯ ಜನರು ಬತ್ತ, ರಾಗಿ, ಅಡಕೆ ಮೊದಲಾದುವನ್ನು ಬೆಳೆಯುತ್ತಾರೆ. ಮೈಸೂರು ದೇಶದ ಪ್ರಜೆಗಳಾದ ನಮ್ಮನ್ನೆಲ್ಲಾ ನಮ್ಮ ಮಹಾರಾಜರವರಾದ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್ ಜಿ.ಸಿ.ಎಸ್.ಐ., ಜಿ.ಬಿ.ಇ., ಯವರು ಪರಿಪಾಲಿಸುತ್ತಾರೆ.

---



ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್,
ಜಿ.ಸಿ.ಎಸ್.ಐ., ಜಿ.ಬಿ.ಇ., ಯವರು.

# ಎರಡನೆಯ ಭಾಗ

## ೧. ಭೂಮಿಯ ಆಕಾರ.

ನಾವು ವಾಸಮಾಡುವ ಭೂಮಿಯು ಕೇರ ನೆಲವಾಗಿಯೂ ಇಲ್ಲ ; ಕೇರ ಜಲವಾಗಿಯೂ ಇಲ್ಲ. ಇದು, ಸಮುದ್ರ, ಊರು, ಕಾಡು, ಬಯಲು ಇವುಗಳಿಂದ ತುಂಬಿದೆ. ಇದು ನೋಡುವುದಕ್ಕೆ ಹೇಗೆ ಕಾಣುತ್ತದೆ ? ರತ್ನಗಂಬಳಿಯನ್ನು ಹಾಸಿದ ಹಾಗೆ ಚಪ್ಪಟೆಯಾಗಿರುವಂತೆ ಕಾಣುವುದಿಲ್ಲವೆ ? ಆದರೂ ಇದು ನಿಜವಾಗಿ ಚಪ್ಪಟೆಯಾಗಿಲ್ಲ ; ಗಾಲಿಯಂತೆ ಗುಂಡಾಗಿಯೂ ಇಲ್ಲ. ಈ ಭೂಮಿಯು ನೆಲಜಲಸಹಿತವಾಗಿ ಕಿತ್ತಳೆಯ ಹಣ್ಣಿನಂತೆ ಗುಂಡಾಗಿದೆ.


---

## ೨. ಭೂಮಿಯು ಗುಂಡಾಗಿದೆ ಎಂಬುದನ್ನು ತಿಳಿಯುವ ಬಗೆ ಹೇಗೆ ?

ಕೆಳಗಣ ಮೂರು ಕಾರಣಗಳಿಂದ ತಿಳಿಯಬಹುದು.

೧. ನಾವು ಒಂದು ಕಿತ್ತಳೆ ಹಣ್ಣಿಗೆ ದಾರವನ್ನು ಕಟ್ಟಿ ತೂಗಹಾಕಿ, ಇದರಮೇಲೆ ಒಂದು ಇರುವೆಯನ್ನು ಬಿಟ್ಟರೆ, ಆ ಇರುವೆಯು ನಿಂತಲ್ಲಿ ನಿಲ್ಲದೆ ಆ ಹಣ್ಣಿನ ಸುತ್ತಲೂ ತಿರುಗುತ್ತಲೇ ಇರಬಹುದು. ಅದು ಇದ್ದ ಕಡೆಯಿಂದ ಬಲಕ್ಕಾಗಲಿ ಎಡಕ್ಕಾಗಲಿ ಹೊರಟು ಒಂದೇ ಮುಖವಾಗಿ ಹೋಗುತ್ತಿದ್ದರೆ ಅದು ತಾನು ಹೊರಟ ಸ್ಥಳಕ್ಕೇ ಮತ್ತೆ ಮತ್ತೆ ಬರುತ್ತಿರುವುದು ಇರುವೆಗೆ ಕಿತ್ತಳೆಹಣ್ಣು ಹೇಗೋ ನಮಗೆ ಭೂಮಿಯೂ ಹಾಗೆಯೇ. ನಾವು ಒಂದು ಊರಿಂದ ಹೊರಟು ನೆಟ್ಟಗೆ ಒಂದೇ ದಿಕ್ಕನ್ನು ಹಿಡಿದು ಹೋಗುತ್ತಾ ಅಡ್ಡಲಾಗಿ ಸಿಕ್ಕುವ ಬೆಟ್ಟಗಳನ್ನೂ, ನದಿಗಳನ್ನೂ, ಸಮುದ್ರಗಳನ್ನೂ ದಾಟಿಕೊಂಡು ಬಂದರೆ, ಕಡೆಗೆ ನಾವು ಮೊದಲು ಹೊರಟ ಸ್ಥಳಕ್ಕೇ ಬಂದು ಸೇರುವೆವು. ಇದುವರೆಗೆ ಅನೇಕರು ಹೀಗೆ ಭೂಮಿಯನ್ನು ಸುತ್ತಿ ಬಂದಿರುವರು. ಇದರಿಂದ ಭೂಮಿ ಗುಂಡಾಗಿದೆಯೆಂದು ತಿಳಿಯಬಹುದು.

೨. ಈ ಮೇಜಿನಮೇಲೆ ಈ ಬರವಣಿಗೆಯ ಕಡ್ಡಿಯನ್ನು ನಿಲ್ಲಿಸುತ್ತೇನೆ. ಮೇಜಿನ ಮಟ್ಟಕ್ಕೆ ಸರಿಯಾಗಿ ಕಣ್ಣಿಟ್ಟುಕೊಂಡು ಇದನ್ನು ನೋಡಿ. ಈಗ ಇದು ತಳದಿಂದ ತುದಿಯವರೆಗೂ ಕಾಣುತ್ತದೆಯಷ್ಟೆ. ಇದನ್ನು ಮೇಜಿನ ಎದುರಾಗಡೆಯವರೆಗೂ ಎಳೆಯುತ್ತೇನೆ. ಈಗಲೂ ಸರಿಯಾಗಿ ಕಾಣಿಸಿತೋ ಇಲ್ಲವೋ ? ಈ ಮೇಜಿನಮೇಲೆ ಇಳಿಜಾರಾಗಿ ಮರಳು ಸುರಿಯುತ್ತೇನೆ. ಈ ಕಡ್ಡಿಯನ್ನು ಪುನಃ ಮರಳ ಉಬ್ಬಿನ ಮೇಲಿನಿಂದ ಆ ಕಡೆಗೆ ಎಳೆದುಕೊಂಡು ಹೋಗುತ್ತೇನೆ. ಕಡ್ಡಿಯು ಹೇಗೆ ಮರೆಯಾಗುತ್ತಾ ಬರುವುದು ? ನೋಡಿ ಹೇಳಿರಿ. ಮೊದಲು ಕಡ್ಡಿಯೆಲ್ಲಾ ಕಾಣುತ್ತಿರುತ್ತದೆ. ಅದು ಮರಳಿನ ಆಚೆಕಡೆ ಇಳಿದ ಬಳಿಕ ಸ್ವಲ್ಪಸ್ವಲ್ಪವಾಗಿ ಅದರ ತಳವು ಮರೆಯಾಗುತ್ತಾ ಬಂದು ಅದರ ತುದಿಮಾತ್ರ ಕಾಣಿಸುತ್ತಿರುತ್ತದೆ. ಹೀಗೆ ಒಂದು ಪದಾರ್ಥವು ಮೊದಲು ಸಂಪೂರ್ಣವಾಗಿ ಕಾಣುತ್ತಿದ್ದು ಬಳಿಕ ಅದು ದೂರಕ್ಕೆ ಹೋದಹಾಗೆಲ್ಲಾ ಅದರ ತಳವು ಮರೆಯಾಗಿ ಹೋದರೆ ನಮಗೂ ಅದಕ್ಕೂ ನಡುವೆ ಯಾವುದೋ ಉಬ್ಬಾಗಿದೆಯೆಂದು ಗೊತ್ತಾಗುತ್ತದೆಯಲ್ಲವೆ ?




ಸಮುದ್ರದಲ್ಲಿ ಸಂಚರಿಸುವ ಹಡಗುಗಳು.


ಈಗ ನಾವು ಸಮುದ್ರದ ತೀರದಲ್ಲಿ ನಿಂತು ಹಡಗು ಅಲ್ಲಿಂದ ಹೊರಕ್ಕೆ ಹೋಗುವಾಗ ನೋಡಿದರೆ, ಅದು ಸ್ವಲ್ಪದೂರ ಹೋದಬಳಿಕ, ಮೊದಲು ದೊಡ್ಡದಾಗಿರುವ ಅದರ ತಳವೇ ಕಣ್ಮರೆಯಾಗುತ್ತದೆ. ಆಮೇಲೆ ಮಧ್ಯಭಾಗವು ಕಾಣಿಸದೆ ಹೋಗುವುದು; ಕೊನೆಗೆ ಹಡಗೇ ಮರೆಯಾಗುವುದು. ಹೀಗಾಗುವುದನ್ನು ಕಂಡು, ಹಡಗು ಬಹುದೂರ ಹೋದುದರಿಂದ ಕಣ್ಣಿಗೆ ಕಾಣದೆ ಹೋಯಿತೆಂದು ತಿಳಿಯಲಾಗದು. ತಟ್ಟೆಯಂತೆ ಒಂದೇ ಮಟ್ಟವಾಗಿರುವ ನೀರಿನ ಮೇಲ್ಗಡೆ ಹಡಗು ಚಲಿಸುತ್ತಿದ್ದ ಪಕ್ಷದಲ್ಲಿ, ಎಷ್ಟೇ ದೂರ ಹೋದರೂ, ಎಷ್ಟೇ ಸಣ್ಣನಾಗಿರುವಂತೆ ಕಾಣಬಂದರೂ ಹಡಗೆಲ್ಲಾ ಸಂಪೂರ್ಣ

ವಾಗಿ ಕಾಣುತ್ತಿದ್ದಿತು ; ಅಥವಾ ಪೂರ್ಣವಾಗಿ ಮರೆಯಾಗುತ್ತಿದ್ದಿತು ಹಾಗೆ ಒಟ್ಟಿಗೆ ಕಾಣದೆಯೂ, ಒಟ್ಟಿಗೆ ಮರೆಯಾಗದೆಯೂ ಇರುವುದರಿಂದ ನಮಗೂ ಹಡಗಿಗೂ ನಡುವೆ ಯಾವುದೋ ಉಬ್ಬಾಗಿರುವ ಭಾಗವಿದೆಯೆಂದು ತಿಳಿಯಬೇಡವೇ ? ಇಲ್ಲಿ ನೀರಲ್ಲದೆ ಬೇರೆ ಯಾವುದೂ ಇಲ್ಲ. ಆದುದರಿಂದ ಅಲ್ಲಿ ನೀರು ಉಬ್ಬಾಗಿರಬೇಕಲ್ಲವೇ ? ಹಾಗೆ ಸಮುದ್ರದ ಮೇಲೆ ಯಾವ ಕಡೆ ಹೋಗಿ ನೋಡಿದರೂ ನೀರು ಉಬ್ಬಿಕೊಂಡು ಇರುವುದು ; ಎಂದರೆ ನೀರು ಭೂಮಿಯ ಸುತ್ತಲೂ ಉಬ್ಬಿಕೊಂಡಿರುವುದೆಂದಾಯಿತಷ್ಟೆ ? ಎಲ್ಲಾ ಕಡೆಯೂ ಉಬ್ಬಿಕೊಂಡಿರುವ ವಸ್ತುವು ಗುಂಡಾಗಿರುತ್ತದೆ ; ಆದುದರಿಂದ ಭೂಮಿಯು ಗುಂಡಾಗಿರಬೇಕೆಂದು ಗೊತ್ತಾಗುತ್ತದೆ.

೩. ನಿಮ್ಮ ಮನೆಗಳಲ್ಲಿ ದೀಪ ಹೊತ್ತಿಸಿದಾಗ ಗೋಡೆಯಮೇಲೆ ಯಾವ ತರನಾಗಿಯಾಗಲಿ ವಸ್ತುಗಳ ನೆರಳು ಬಿದ್ದಿರುವುದನ್ನು ನೀವು ನೋಡಿದ್ದೀರಷ್ಟೆ. ಹಾಗೆಯೇ ಈಗ ಇಲ್ಲಿಯೂ ನಿಮ್ಮ ನೆರಳು ಹೇಗೆ ಬಿದ್ದಿರುತ್ತದೆ ನೋಡಿರಿ. ಈ ಚಿತ್ರವನ್ನು ಹಿಡಿಯುತ್ತೇನೆ. ಇದರ ನೆರಳು ಹೇಗೆ ಬೀಳುತ್ತದೆ ನೋಡಿರಿ. ಪದಾರ್ಥವು ಉದ್ದವಾಗಿದ್ದರೆ ಉದ್ದಕ್ಕೂ, ಗುಂಡಾಗಿದ್ದರೆ ಸುಮಾರಾಗಿ ಗುಂಡಗೂ ನೆರಳು ಬೀಳುವುದಿಲ್ಲವೆ ? ಇಲ್ಲಿ ಈಗ ದೀಪವನ್ನು ಹಚ್ಚಿ ಈ ತಳಿಗೆಯ ನೆರಳು ಹೇಗೆ ಬೀಳುವುದೋ ತೋರಿಸುವೆನು,



ತಟ್ಟೆಯೂ ಅದರ ನೆರಳು.



ಚೆಂಡೂ ಅದರ ನೆರಳು.

ನೋಡಿರಿ. ಈ ಚೆಂಡಿನ ನೆರಳನ್ನೂ ನೋಡಿರಿ. ಎರಡರ ನೆರಳೂ ಗುಂಡಗೆ ಬಿದ್ದಿರುತ್ತವಲ್ಲವೆ ? ಈಗ ತಳಿಗೆಯನ್ನು ತಿರುಗಿಸಿ ಏಣಿನ ಮುಖವಾಗಿ ಹಿಡಿಯುವೆನು ; ಇದರ




ಏಣಿನಮುಖವಾಗಿ ಹಿಡಿದ ತಟ್ಟೆ ಮತ್ತು ಅದರ ನೆರಳು.

ನೆರಳನ್ನು ಚೆನ್ನಾಗಿ ನೋಡಿರಿ. ಚೆಂಡನ್ನು ಹೇಗೆ ಬೇಕಾದರೂ ತಿರುಗಿಸಿ ಹಿಡಿಯುವೆನು. ಈ ನೆರಳನ್ನು ನೋಡಿದಿರಾ! ಚೆಂಡನ್ನು ಹೇಗೆ ತಿರುಗಿಸಿದರೂ ನೆರಳು ಗುಂಡಗೆ

ಒಂದೇ ತೆರನಾಗಿ ಬೀಳುವುದು. ತಟ್ಟೆಯನ್ನು ತಿರುಗಿಸಿ ಮೂರೆಯಮೇಲೆ ಹಿಡಿದರೆ ನೆರಳು ಬೇರೆ ತೆರನಾಗಿ ಬೀಳುವುದು.

ಹೀಗೆಯೇ ಆಕಾಶದಲ್ಲಿ ಸೂರ್ಯನ ಸುತ್ತಲೂ ಭೂಮಿಯೂ, ಚಂದ್ರನೂ, ಸಂಚಾರ




ಗ್ರಹಣಗಳು.

ಮಾಡುವಾಗ ಒಂದೊಂದು ವೇಳೆ ಇವು ಮೂರೂ ದೀಪ (ಸೂರ್ಯ), ಚೆಂಡು (ಭೂಮಿ), ಇನ್ನೊಂದು ಚೆಂಡು (ಚಂದ್ರ), ಮೂರನ್ನೂ ಒಂದೇ ಪಙ್ಕ್ತಿಯಲ್ಲಿ ಮೊದಲನೆಯ ಚೆಂಡಿನ

(ಭೂಮಿಯ) ನೆರಳು ಎರಡನೆಯ ಚೆಂಡಿನ (ಚಂದ್ರನ) ಮೇಲೆ ಬೀಳುವಂತೆ ಹಿಡಿದು ತೋರಿಸಿರಿ.] ಒಂದೇ ಪಙ್ಕ್ತಿಯಲ್ಲಿ ನಿಂತು ಮಧ್ಯದಲ್ಲಿ ಭೂಮಿ ಇದ್ದರೆ ಆಗ ಭೂಮಿಯ ನೆರಳು ಚಂದ್ರನಮೇಲೆ ಬೀಳುವುದು. ಆ ನೆರಳು ಯಾವಾಗಲೂ ಗುಂಡಗೆ ಇರುವುದು. ಇದರಿಂದಲೂ ಭೂಮಿಯು ಗುಂಡಾಗಿದೆ ಎಂದು ತಿಳಿಯಬಹುದು.

ಸೂಚನೆ.—ಉಪಾಧ್ಯಾಯರು ಈ ಪಾಠವನ್ನು ಚಿತ್ರ, ಚೆಂಡು, ದೀಪ, ತಳಿಗೆ, ಮುಂತಾದುವುಗಳನ್ನು ಇಟ್ಟುಕೊಂಡೇ ಬೋಧಿಸಬೇಕು.

"ಭೂಮಿಯು ಗುಂಡಾಗಿದೆ ಎಂದು ಹೇಳುತ್ತೀರಲ್ಲಾ? ನೋಡಿದರೆ ಅದರ ಮೇಲೆ ಬಲು ದೊಡ್ಡ ಗುಡ್ಡಬೆಟ್ಟಗಳೂ, ಬಲು ಆಳವಾದ ಸಮುದ್ರದಂತಹ ಹಳ್ಳಕೊಳ್ಳಗಳೂ ಇರುವವಲ್ಲವೆ?" ಎಂದು ಯಾರಾದರೂ ಆಕ್ಷೇಪಿಸಬಹುದು. ಇದಕ್ಕೆ ಸಮಾಧಾನ—"ಈ ಗುಡ್ಡಬೆಟ್ಟಗಳೂ, ಹಳ್ಳಕೊಳ್ಳಗಳೂ ನಮಗೆ ಬಹು ದೊಡ್ಡವೆಂದು ಕಾಣಬರುವುದು ನಿಶ್ಚಯವೇ ಅಹುದು; ಆದರೆ ಇವುಗಳನ್ನು ಗಾತ್ರದಲ್ಲಿ ಬಲು ದೊಡ್ಡದಾದ ಭೂಮಿಯೊಡನೆ ಹೋಲಿಸಿದರೆ, ಕಿತ್ತಳೆಹಣ್ಣಿನ ಸಿಪ್ಪೆಯಮೇಲೆ ಇರುವ ತರಕಲಾಂತ ಲೆಕ್ಕಕ್ಕೆ ಬರುವುದಿಲ್ಲವೆಂದು ತಿಳಿಯಬರುತ್ತದೆ. ಮೇಲಣ ತರಕಲು ಕಿತ್ತಳೆಹಣ್ಣಿಗೆ ಹೇಗೋ, ಗುಡ್ಡಬೆಟ್ಟಗಳೂ, ಹಳ್ಳಕೊಳ್ಳಗಳೂ, ಭೂಮಿಗೆ ಹಾಗೆಯೇ ಎಂದು ಭಾವಿಸಬೇಕು."

---

## ೩. ಭೂಚಲನೆ.

ಭೂಮಿಯು ಏತರಮೇಲಿದೆ? ನಿನ್ನ ಕುಲಾವಿಯನ್ನು ಮೇಲಕ್ಕೆ ಎಸೆದರೆ ಏನಾಗುತ್ತದೆ? ಅದು ತಿರುಗಿ ನೆಲಕ್ಕೆ ಬೀಳುತ್ತದೆಯಲ್ಲವೇ? ಅದೇ ಕುಲಾವಿಯನ್ನು ಈ ರೂಲುಕಡ್ಡಿಯಮೇಲಿಟ್ಟು ಎತ್ತಿ ಹಿಡಿದುಕೋ; ಈಗ ಬೀಳದೆ ನಿಂತಿದೆ; ನೋಡು. ಮೊದಲನೆಯಸಲ ಏಕೆ ಬಿದ್ದಿತು? ಎರಡನೆಯಸಲ ಏಕೆ ಬೀಳಲಿಲ್ಲ? ಎರಡನೆಯಸಲ ಕಡ್ಡಿ ಆಸರೆ ಇದ್ದಿತು. ಆಸರೆ ಇಲ್ಲದೆ ಯಾವುದೂ ನಿಲ್ಲಲಾರದು. ಹಾಗಾದರೆ ನಮ್ಮ ಮಠ ಬೀಳದಿರುವುದಕ್ಕೆ ಕಾರಣವೇನು? ಅದು ಭೂಮಿಯಮೇಲೆ ನಿಂತಿದೆ; ಹಾಗೆಯೇ ಮರ, ಬೆಟ್ಟ- ಮೊದಲಾದುವು ಭೂಮಿಯಮೇಲೆ ನಿಂತಿರುವುದರಿಂದ ಕೆಳಕ್ಕೆ ಬೀಳುವುದಿಲ್ಲ.

ಹೀಗೆ ಎಲ್ಲವೂ ಭೂಮಿಯಮೇಲೆ ನಿಂತಿದ್ದರೂ ಭೂಮಿಯು ಮಾತ್ರ ಯಾವುದರ

ಮೇಲೂ ಇಲ್ಲದೆ ಆಕಾಶದಲ್ಲಿಯೇ ಇರುವುದು. ಅಂತರಿಕ್ಷದಲ್ಲಿ ಪ್ರಕಾಶಿಸುವ ಸೂರ್ಯ ಚಂದ್ರರಂತೆ ಭೂಮಿಯೂ ಒಂದು ಗ್ರಹವು. ಸೂಜಿಗಲ್ಲು ಸೂಜಿಯನ್ನು ಸೆಳೆಯುವಂತೆ ಸೂರ್ಯನು ಇತರ ಗ್ರಹಗಳೊಂದಿಗೆ ಭೂಮಿಯನ್ನೂ ಸೆಳೆದು ಹಿಡಿದಿರುವನು.


ನೀನು ಆಕಾಶಬುಟ್ಟಿಯನ್ನು ನೋಡಿದ್ದೀಯಾ ? ಅದು ಅಂತರಿಕ್ಷದಲ್ಲಿ ಹೇಗೆ ಹೋಗುವುದು ಹೇಳು. ಅದೇ ಮೇರೆಗೆ ಭೂಮಿಯು ಅಂತರಿಕ್ಷದಲ್ಲಿ ತೇಲಾಡುತ್ತಾ ಇರುತ್ತದೆ. ಸೂರ್ಯನ ಆಕರ್ಷಣಶಕ್ತಿಯಿಂದ ಭೂಮಿಯು ಬೀಳದೆ ನಿಂತಿದೆ ಎಂದು ಪಂಡಿತರು ನಿಶ್ಚಯಿಸಿದ್ದಾರೆ.

[ 'ಆಕರ್ಷಣ' ಎಂದರೆ ಎಳೆಯುವುದು ಎಂದರ್ಥ.]

---

## ೪. ಹಗಲುರಾತ್ರಿಗಳು.


ಸೂರ್ಯನು ನಿತ್ಯವೂ ಬೆಳಗಾಗುತ ಪೂರ್ವದಲ್ಲಿ ಹುಟ್ಟಿ ಸಂಜೆಯು ಹೊತ್ತಿನಲ್ಲಿ ಪಶ್ಚಿಮದಲ್ಲಿ ಮುಳುಗುವಂತೆ ನಮಗೆ ಕಾಣುವುದಿಲ್ಲವೆ ? ಆದರೂ ಸೂರ್ಯನು ನಿಜವಾಗಿ ಸುತ್ತುವುದಿಲ್ಲ. ಭೂಮಿಯು ಪಶ್ಚಿಮದಿಂದ ಪೂರ್ವದಕಡೆಗೆ ತಿರುಗುವುದರಿಂದ ಹಾಗೆ




ಭೂಪಥ, ಚಂದ್ರಪಥ.

ಕಾಣುತ್ತದೆ. ನೀನು ಬಲವಾಗಿ ಅಪ್ಪಾಲೆ ತಿಪ್ಪಾಲೆ ಸುತ್ತಿನೋಡು ; ನಿನಗೆ ಏನು ಕಾಣುತ್ತದೆ ? ಈ ಕೊಠಡಿಯಲ್ಲಿರುವುದೆಲ್ಲಾ ನಿನ್ನ ಹಿಂದುಗಡೆ ಓಡಿಹೋಗುವಂತೆ ಕಾಣುವುದಿಲ್ಲವೆ ? ನೀನೇ ಭೂಮಿ, ಈ ಕಿಟಕಿಯೇ ಸೂರ್ಯ ಎಂದು ಇಟ್ಟುಕೊಳ್ಳೋಣ. ನೀನು ಸುತ್ತುವುದರಿಂದ ನಿನ್ನ ಕಣ್ಣಿಗೆ ಕಿಟಕಿಯೇ ಸುತ್ತುವಂತೆ ಕಾಣುತ್ತಿದೆಯಲ್ಲವೆ ?

ನೀನು ರೈಲ್ವೆ ಗಾಡಿಯಲ್ಲಿ ಪ್ರಯಾಣ ಮಾಡಿದ್ದೀಯೋ? ರೈಲ್ವೆ ಗಾಡಿಯಲ್ಲಿ ಹೋಗುವಾಗ ಕಿಟಕಿಗಳಲ್ಲಿ ನೋಡಿದರೆ ರಸ್ತೆಯ ಮಗ್ಗುಲಲ್ಲಿರುವ ಗಿಡಗಳೆಲ್ಲಾ ಗಾಡಿಯ ಹಿಂದುಗಡೆಗೆ ಓಡಿಹೋಗುವಂತೆ ಕಾಣುವುದಿಲ್ಲವೆ? ಹಾಗೆಯೇ ಭೂಮಿಯು ಪಶ್ಚಿಮದಿಂದ ಪೂರ್ವಕ್ಕೆ ತಿರುಗುವುದರಿಂದ ಸೂರ್ಯನು ಪೂರ್ವದಿಂದ ಪಶ್ಚಿಮಕ್ಕೆ ಬರುವಂತೆ ಕಾಣುತ್ತಾನೆ. ಹೀಗೆ ಭೂಮಿಯು ಒಂದು ಸುತ್ತು ಸುತ್ತುವುದಕ್ಕೆ ಇಪ್ಪತ್ತುನಾಲ್ಕು ಘಂಟೆಗಳಷ್ಟು ಕಾಲವಾಗುತ್ತದೆ. ಇದೇ ಒಂದು ದಿವಸವು. ಆಗ ಸೂರ್ಯನಿಗೆ ಎದುರಿನ ಭೂಭಾಗದಲ್ಲಿರುವವರಿಗೆ ಹಗಲೂ, ಮರೆಯಾದ ಭಾಗದಲ್ಲಿರುವವರಿಗೆ ರಾತ್ರಿಯೂ, ಆಗಿರುತ್ತದೆ.



ಹಗಲು. ರಾತ್ರಿ.

### ಪ್ರಶ್ನೆಗಳು.

ಭೂಮಿಯು ಏತರಮೇಲೆ ನಿಂತಿದೆ?- ಹಗಲೂ, ರಾತ್ರಿಯೂ, ಹೇಗೆ ಉಂಟಾಗುತ್ತವೆ? ಭೂಮಿಯು ಯಾವ ಕಡೆಗೆ ತಿರುಗುತ್ತದೆ? ಭೂಮಿಯು ಒಂದು ಸಾರಿ ತಿರುಗುವುದಕ್ಕೆ ಎಷ್ಟು ಹೊತ್ತು ಹಿಡಿಯುತ್ತದೆ?

---

## ೫. ಸಂವತ್ಸರ.

ಇದಲ್ಲದೆ, ಒಬ್ಬ ಹುಡುಗನು ಅಪ್ಪಾಲೆ ತಿಪ್ಪಾಲೆ ತಿರುಗುತ್ತಾ ಈ ಮೇಜಿನ ಸುತ್ತಲೂ ಸುತ್ತಿಕೊಂಡು ಹೇಗೆ ಬರಬಹುದೋ ಹಾಗೆಯೇ ಭೂಮಿಯೂ ಗರಗರನೆ ತಿರುಗುತ್ತಾ ಸೂರ್ಯನ ಸುತ್ತಲೂ ಸುತ್ತಿಕೊಂಡು ಬರುತ್ತದೆ.

ಭೂಮಿಯು ಬುಗುರಿಯಂತೆ ಒಂದು ಸಲ ತಿರುಗಲು ೨೪ ಘಂಟೆಗಳ ಕಾಲ ಬೇಕೆಂದು ಹೇಳಲಿಲ್ಲವೆ? ಭೂಮಿಯು ಹೀಗೆಯೇ ತಿರುಗಿಕೊಂಡು ಹೋಗುತ್ತಾ ಸೂರ್ಯನ ಸುತ್ತಲೂ ಒಂದು ಸಾರಿ ಸುತ್ತಬೇಕಾದರೆ ೩೬೫। ದಿವಸಗಳಾಗುತ್ತವೆ. ಇಷ್ಟು ಕಾಲಕ್ಕೆ ಒಂದು ವರ್ಷವೆಂದು ಹೆಸರು.

ಕಾಲಭೇದಗಳು.—ಸೂರ್ಯನ ಸುತ್ತಲೂ ಸುತ್ತುವ ಭೂಮಿಯ ಪಥವು ಗುಂಡಾಗಿಲ್ಲ;

ಮೊಟ್ಟೆಯ ಆಕಾರದಂತೆ ಇದೆ. ಆದುದರಿಂದ ಭೂಮಿಯು ಬುಗುರಿಯಹಾಗೆ ತಾನು ತಿರುಗುತ್ತಾ ಸೂರ್ಯನನ್ನು ಸುತ್ತಿಕೊಂಡು ಬರುವಾಗ ಸೂರ್ಯನಿಗೆ ಯಾವಾಗಲೂ ಒಂದೇ ಸಮನಾದ ದೂರದಲ್ಲಿಯಾಗಲಿ, ಒಂದೇ ಮುಖವಾಗಿಯಾಗಲಿ ಇರುವುದಿಲ್ಲ. ಈ ಕಾರಣದಿಂದ ನಮಗೆ ಕಾಲಭೇದಗಳುಂಟಾಗುತ್ತವೆ. ಇವುಗಳನ್ನೇ ನಮ್ಮವರು ಋತುಗಳೆಂದು ಹೇಳುತ್ತಾರೆ.

ಸೂಚನೆ.—ಭೂಪಥದ ಚಿತ್ರವನ್ನು ತೋರಿಸಿ, ಅದರ ನಕ್ಷೆಯನ್ನು ಉಪಾಧ್ಯಾಯರು ಕಪ್ಪು ಹಲಗೆಯ ಮೇಲೆ ಬರೆದು ತೋರಿಸಬೇಕು.

---

## ೬. ಭೂಮಿಯ ಅಳತೆ.

ನಾವು ವಾಸಮಾಡುವ ಭೂಮಿಯು ಎಷ್ಟು ದೊಡ್ಡದಾಗಿದೆ, ನೋಡಿರಿ! ಇದನ್ನು ಅಳೆಯುವುದಕ್ಕೆ ಆಗುತ್ತದೆಯೋ? ಆದರೂ ಅದರ ಸುತ್ತಳತೆಯನ್ನು ಕಂಡುಹಿಡಿದಿದ್ದಾರೆ ಇಷ್ಟೇ ಅಲ್ಲ; ಅದರ ಅಡ್ಡಳತೆಯನ್ನೂ ಗೊತ್ತುಮಾಡಿದ್ದಾರೆ. ಸುತ್ತಳತೆ ಎಂದರೆ ಏನೋ ನೋಡೋಣ. ಒಂದು ಕಿತ್ತಳೆಯ ಹಣ್ಣನ್ನು ತೆಗೆದುಕೊಳ್ಳಿ. ಅದರ ಹೊಟ್ಟೆಯ ಸುತ್ತಲೂ ಒಂದು ಸುತ್ತು ದಾರವನ್ನು ಸುತ್ತಿರಿ. ಆ ಸುತ್ತುದಾರವನ್ನು ಅಳತೆ ಮಾಡಿರಿ. ಅದೇ ಕಿತ್ತಳೆಯ ಹಣ್ಣಿನ ಸುತ್ತಳತೆ. ಅಡ್ಡಳತೆ ಎಂದರೇನು, ಬಲ್ಲಿರೋ? ಒಂದು ಗೇಣುದ್ದ ನೇರವಾದ ಕಡ್ಡಿಯನ್ನು ತೆಗೆದುಕೊಳ್ಳಿರಿ. ಅದನ್ನು ಕಿತ್ತಳೆಯಹಣ್ಣಿನ ಒಂದು ಕಡೆಯಿಂದ ಎದುರುಗಡೆಗೆ ಹೋಗುವಂತೆ ನೆಟ್ಟಗೆ ಚುಚ್ಚಿರಿ ಹಣ್ಣಿನ ಒಳಗಡೆ ಅಡಕವಾದ ಕಡ್ಡಿಯ ಭಾಗವನ್ನು ಗುರುತುಮಾಡಿಕೊಳ್ಳಿರಿ. ಕಡ್ಡಿಯನ್ನು ಈಚೆಗೆ ಎಳೆದುಕೊಂಡು ಗುರುತು ಹಚ್ಚಿದ ಭಾಗವನ್ನು ಅಳೆಯಿರಿ. ಅದೇ ಕಿತ್ತಳೆಯ ಹಣ್ಣಿನ ಅಡ್ಡಳತೆ.

ಭೂಮಿಯ ಸುತ್ತಳತೆ ಸುಮಾರು ೨೫,೦೦೦ ಮೈಲಿಯಾಗುತ್ತದೆ. ಈ ಸುತ್ತಳತೆಗೆ 'ಪರಿಧಿ' ಯೆಂದೂ ಹೆಸರು. ಆದುದರಿಂದ ಭೂಮಿಯ ಪರಿಧಿಯು ೨೫,೦೦೦ ಮೈಲಿಯೆಂದು ಹೇಳಬಹುದು.

ಭೂಮಿಯೆಲ್ಲಾ ನೆಲವೇ ಆಗಿದ್ದು ಅದರಮೇಲೆ ಒಬ್ಬ ಮನುಷ್ಯನು ದಿನ ಒಂದಕ್ಕೆ ೨೫ ಮೈಲಿಗಳ ಮೇರೆ ನಡೆದರೆ, ಅವನು ಅದನ್ನು ಸುತ್ತಿಕೊಂಡು ಬರುವುದಕ್ಕೆ ೧,೦೦೦ ದಿವಸಗಳು ಹಿಡಿಯುತ್ತವೆ—ಎಂದರೆ, ಅವನು ಹೊರಟ ದಿನದಿಂದ ಹಿಂದಿರುಗಿ ಬರುವ

ವೇಳೆಗೆ ಸುಮಾರು ೨ ವರ್ಷವೂ ೯ ತಿಂಗಳ ಕಾಲ ಹಿಡಿಯುತ್ತದೆ ಘಂಟೆಗೆ ೨೫ ಮೈಲಿಗಳ ಮೇರೆ ಓಡುವ ಒಂದು ರೈಲು ಹಗಲೂ ರಾತ್ರಿಯೂ ಓಡುತ್ತಿದ್ದರೆ, ಅದು ಭೂಮಿಯ ಸುತ್ತಲೂ ತಿರುಗಿಕೊಂಡು ಬರುವುದಕ್ಕೆ ಸುಮಾರು ೧ ತಿಂಗಳೂ ೧೨ ದಿವಸಗಳೂ ಆಗುತ್ತವೆ.


ಭೂಮಿಯ ಅಡ್ಡಳತೆ ಸುಮಾರು ೮,೦೦೦ ಮೈಲಿಯಾಗುತ್ತದೆ. ಈ ಅಡ್ಡಳತೆಗೆ 'ವ್ಯಾಸ' ಎಂದೂ ಹೆಸರಿದೆ. ವ್ಯಾಸವೆಂದರೆ ಗುಂಡಾದ ವಸ್ತುವಿನ ಅಡ್ಡಳತೆ. ಆದುದರಿಂದ ಭೂಮಿಯ ವ್ಯಾಸವು ಎಂದರೆ ಅಡ್ಡಳತೆಯು ೮,೦೦೦ ಮೈಲಿಯೆಂದು ಹೇಳಬಹುದು.

ಮೇಲೆ ಹೇಳಿದ ಅಳತೆಗಳನ್ನು ಮಾತ್ರವೇ ಅಲ್ಲದೆ ಭೂಗೋಳದ ಮೇಲೆ ಮೂರು ಪಾಲು ನೀರೂ, ಒಂದು ಪಾಲು ನೆಲವೂ ಇವೆಯೆಂಬುದನ್ನು ಅಳತೆಮಾಡಿ ನಿರ್ಣಯಿಸಿದ್ದಾರೆ.

---

## ೭. ಭೂಪಟದ ಮೇಲಣ ಗೆರೆಗಳು.

ಈ ಭೂಪಟವನ್ನೂ, ಮಾದರಿಗಾಗಿ ಇಟ್ಟಿರುವ ಈ ಭೂಗೋಳವನ್ನೂ ನೋಡಿರಿ. ಇವುಗಳಮೇಲೆ ಉದ್ದುದ್ದನಾಗಿಯೂ, ಅಡ್ಡಡ್ಡಲಾಗಿಯೂ, ಗೆರೆಗಳಿರುತ್ತವೆ. ಅವುಗ




ಭೂಪಟದಮೇಲಣ ಗುರುತುಗಳು.

ಳಿಂದ ಪ್ರಯೋಜನವೇನು? ಅವು ಭೂಮಿಯ ಮೇಲೆ ಸ್ವಭಾವವಾಗಿಯೂ, ಶಾಶ್ವತವಾಗಿಯೂ ಇರತಕ್ಕವುಗಳೆ? ಎಂದು ಕೇಳಬಹುದು. ಅವು ಸ್ವಭಾವಸಿದ್ಧವಾದ ಗೆರೆಗಳೂ

ಅಲ್ಲ ; ಶಾಶ್ವತವಾದ ಗೆರೆಗಳೂ ಅಲ್ಲ. ಒಂದು ಸ್ಥಳದಿಂದ ಇನ್ನೊಂದು ಸ್ಥಳವು ಎಷ್ಟು ದೂರದಲ್ಲಿದೆ ಎಂಬುದನ್ನೂ, ಯಾವುದಾದರೊಂದು ಸ್ಥಳವು ಭೂಗೋಳದ ಯಾವ ಭಾಗದಲ್ಲಿದೆ ಎಂಬುದನ್ನೂ ನಿಶ್ಚಯಿಸಿ ತಿಳಿದು ಹೇಳಲು ಅನುಕೂಲಿಸುವಂತೆ ಭೂಗೋಳ ಶಾಸ್ತ್ರಜ್ಞರು ಈ ಗೆರೆಗಳನ್ನು ಕಲ್ಪಿಸಿರುವರು.

ಭೂಗೋಳದ ಮೇಲಣ ತುದಿಯು ಉತ್ತರಧ್ರುವ ಅಥವಾ ಅಕ್ಷ, ಕೆಳಗಣ ತುದಿಯು ದಕ್ಷಿಣಧ್ರುವ ಅಥವಾ ಅಕ್ಷ ; ಇವೆರಡನ್ನೂ ಕೂಡಿಸುವ ನೆಟ್ಟಗಿರುವ ರೇಖೆಗೆ ಅಕ್ಷರೇಖೆ, [ಅಚ್ಚು] ಎಂದು ಹೆಸರು. ಎರಡು ಅಕ್ಷಗಳಿಗೂ ಮಧ್ಯಕ್ಕೆ ಸರಿಯಾಗಿ ಗೋಳದ ಸುತ್ತಲೂ ಒಂದು ಗೆರೆ ಇರುವುದಷ್ಟೆ; ಇದಕ್ಕೆ ಮಧ್ಯರೇಖೆ, ವಿಷುವದ್ರೇಖೆ ಅಥವಾ ಸಮಭಾಜಕ ವೃತ್ತವೆಂಬ ಸಂಜ್ಞೆಯುಂಟು. ಈ ವೃತ್ತದ ಉತ್ತರ ಮತ್ತು ದಕ್ಷಿಣದ ಎರಡು ಪಕ್ಕಗಳಲ್ಲಿಯೂ ಇದರಂತೆಯೇ ಇನ್ನೂ ಹಲವು ಸುತ್ತು ಗೆರೆಗಳಿರುತ್ತವೆ. ಅವುಗಳಲ್ಲಿ ಎರಡೆರಡರ ಅಂತರವು ಒಂದೇಸಮನಾಗಿರುವುದರಿಂದ ಯಾವುದಾದರೊಂದು ಸ್ಥಳವು ಸಮಭಾಜಕವೃತ್ತಕ್ಕೆ ಇಷ್ಟು ಮೈಲಿ ಉತ್ತರದಲ್ಲಿದೆ ಅಥವಾ ದಕ್ಷಿಣದಲ್ಲಿದೆ ಎಂದು ಹೇಳಬಹುದು.

ಈ ಗೆರೆಗಳೇ ಅಲ್ಲದೆ ಧ್ರುವದಿಂದ ಧ್ರುವಕ್ಕೆ ಉದ್ದುದ್ದಕ್ಕೆ ಹಲವು ಗೆರೆಗಳಿವೆಯಲ್ಲವೆ ? ಅವುಗಳನ್ನು ಮಧ್ಯಾಹ್ನರೇಖೆಗಳೆನ್ನುವರು. ಇವುಗಳಲ್ಲಿ ಯಾವುದಾದರೊಂದು ರೇಖೆಯಮೇಲೆ ಮೇಲಿನಿಂದ ಕೆಳಗಣವರೆಗೂ ಇರುವ ಸ್ಥಳಗಳಿಗೆಲ್ಲಾ ನಿತ್ಯವೂ ಮಧ್ಯಾಹ್ನವು ಏಕಕಾಲದಲ್ಲಾಗುವುದು. ಈ ರೇಖೆಗಳಲ್ಲಿ ಯಾವುದಾದರೊಂದನ್ನು ಗೊತ್ತಿಟ್ಟುಕೊಂಡರೆ, ಯಾವುದಾದರೊಂದು ಸ್ಥಳವು ಆ ರೇಖೆಗೆ ಬಲಗಡೆ ಅಥವಾ ಪೂರ್ವದಲ್ಲಿ ಇದೆ ಎಂದೂ, ಎಡಗಡೆ ಅಥವಾ ಪಶ್ಚಿಮದಲ್ಲಿ ಇದೆ ಎಂದೂ ಹೇಳಲಾಗುವುದು.

## ಪ್ರಶ್ನೆಗಳು.

ಗೋಳಾಕಾರವಾದ ವಸ್ತುಗಳ ಸುತ್ತಳತೆ, ಅಡ್ಡಳತೆ, ಎಂದರೇನು ? ಭೂಮಿಯ ಸುತ್ತಳತೆ ಎಷ್ಟು ? ಅಡ್ಡಳತೆ ಎಷ್ಟು ? ಪರಿಧಿ, ವ್ಯಾಸ, ಅಕ್ಷ, ವಿಷುವದ್ರೇಖೆ, ಮಧ್ಯಾಹ್ನರೇಖೆ—ಎಂಬಿವುಗಳು ಯಾವುವು ? ಒಂದೊಂದನ್ನು ಒಬ್ಬೊಬ್ಬರು ಭೂಪಟದಲ್ಲೂ, ಭೂಗೋಳದಲ್ಲೂ ತೋರಿಸಿರಿ. ಭೂಗೋಳದಮೇಲೆ ಎಳೆದಿರುವ ರೇಖೆಗಳಿಂದ ಪ್ರಯೋಜನವೇನು ?

## ೮. ಪಂಚವಲಯಗಳು.

ಎಲ್ಲಾ ದೇಶಗಳಲ್ಲಿಯೂ ಬೇಸಿಗೆಯಲ್ಲಿ ಬಿಸಿಲೂ, ಚಳಿಗಾಲದಲ್ಲಿ ಚಳಿಯೂ, ಹೆಚ್ಚಾದರೂ, ಕೆಲವು ದೇಶಗಳಲ್ಲಿ ಯಾವಾಗಲೂ ಬಿಸಿಲೇ ಹೆಚ್ಚಾಗಿರುತ್ತದೆ ; ಕೆಲವು ದೇಶಗಳಲ್ಲಿ ಚಳಿಯೇ ಹೆಚ್ಚಾಗಿರುತ್ತದೆ. ಇನ್ನು ಕೆಲವು ಕಡೆ ಬಿಸಿಲೂ,. ಚಳಿಯೂ, ಬಹಳವಾಗಿಲ್ಲದೆ ಮಿತವಾಗಿರುತ್ತವೆ. ಇಂತಹ ಸ್ಥಳಗಳಿಗೆಲ್ಲಾ ಬೇರೆ ಬೇರೆ ಹೆಸರು ಕೊಟ್ಟಿರುತ್ತಾರೆ ; ಬಿಸಿಲು, ಕಾವು, ಸೆಕೆ, ಎನ್ನುವುದಕ್ಕೆ ಉಷ್ಣ ಎನ್ನುತ್ತಾರೆ ; ಚಳಿಗೆ ಶೀತ ಎನ್ನುತ್ತಾರೆ. ಅದುದರಿಂದ ಎಲ್ಲಿ ಉಷ್ಣವು ಹೆಚ್ಚೋ ಅದಕ್ಕೆ ಉಷ್ಣದೇಶವೆಂದೂ, ಎಲ್ಲಿ ಶೀತವು ಹೆಚ್ಚೋ ಅದಕ್ಕೆ ಶೀತದೇಶವೆಂದೂ, ಹೆಸರಿಟ್ಟಿದ್ದಾರೆ. ಉಷ್ಣವೂ, ಶೀತವೂ, ಸಮವಾಗಿರುವ ದೇಶಕ್ಕೆ ಸಮಶೀತೋಷ್ಣ ದೇಶವೆಂದು ಹೆಸರುಂಟಾಗಿದೆ.

ಭೂಗೋಳದ ಉತ್ತರದಲ್ಲಿಯೂ ದಕ್ಷಿಣದಲ್ಲಿಯೂ ಧ್ರುವಗಳ ಬಳಿಯಲ್ಲಿ ಚಳಿ ಬಲು ಹೆಚ್ಚು ; ಅವು ಶೀತಪ್ರದೇಶಗಳು. ಸಮಭಾಜಕವೃತ್ತದ ಎರಡು ಪಕ್ಕಗಳಲ್ಲಿಯೂ ಬಿಸಿಲು ಹೆಚ್ಚು ; ಅದು ಉಷ್ಣಪ್ರದೇಶವು. ಉಷ್ಣಪ್ರದೇಶಕ್ಕೂ ಶೀತಪ್ರದೇಶಗಳಿಗೂ ನಡುವೆ ಸಮಶೀತೋಷ್ಣಪ್ರದೇಶಗಳಿರುತ್ತವೆ. ಅಲ್ಲಿ ಬಿಸಿಲೂ, ಚಳಿಯೂ, ಅತಿಯಾಗಿಲ್ಲದೆ ಮಿತವಾಗಿರುತ್ತವೆ. ಈ ಸಮಸ್ತಪ್ರದೇಶಗಳೂ ಭೂಮಿಯ ಸುತ್ತಲೂ ಇರುವುದರಿಂದ ಇವುಗಳಿಗೆ ವಲಯಗಳು ಎಂದೂ ಹೇಳುವುದುಂಟು. 'ವಲಯ' ಎಂದರೆ ಬಳೆಯಹಾಗೆ ಗುಂಡಾಗಿರುವುದು ಎಂದರ್ಥ. ಅದುದರಿಂದ ಇವುಗಳಿಗೆ ಶೀತವಲಯ, ಸಮಶೀತೋಷ್ಣವಲಯ, ಉಷ್ಣವಲಯ, ಎಂದೂ ಹೆಸರುಂಟು. ಭೂಮಿಯಲ್ಲಿ ಎಷ್ಟು ವಲಯಗಳಿವೆಯೋ ಕ್ರಮವಾಗಿ ನೋಡೋಣ. ಮೊದಲು ಉತ್ತರದಲ್ಲಿ ಒಂದು ಶೀತವಲಯವಿದೆ. ಅದಾದ ಬಳಿಕ ಒಂದು ಸಮಶೀತೋಷ್ಣವಲಯವಿದೆ. ಅದರ ಆಚೆ ಉಷ್ಣವಲಯವಿದೆ. ಅದರ ಆಚೆ ಮತ್ತೊಂದು ಸಮಶೀತೋಷ್ಣವಲಯವಿದೆ. ಕೊನೆಗೆ ದಕ್ಷಿಣದಲ್ಲಿ ಬೇರೊಂದು ಶೀತವಲಯವಿದೆ. ಹೀಗಾಗಿ ಐದು ವಲಯಗಳಿವೆ. ಇವುಗಳನ್ನು ಪಂಚ ವಲಯಗಳೆಂದು ಹೇಳುತ್ತಾರೆ. 'ಪಂಚ' ಎಂದರೆ ಐದು ಎಂದರ್ಥ.

# ೯. ಉಷ್ಣವಲಯವು.

ನಾವು ಇರುವುದು ಉಷ್ಣವಲಯವು. ಉಷ್ಣವಲಯದಲ್ಲಿ ಸೂರ್ಯನು ಮಧ್ಯಾಹ್ನದ ವೇಳೆಯಲ್ಲಿ ನೆತ್ತಿಯ ಮೇಲೆ ಆಗಲಿ, ನೆತ್ತಿಯಿಂದ ಸ್ವಲ್ಪ ಉತ್ತರ ಅಥವಾ ದಕ್ಷಿಣದಲ್ಲಿ ಯಾಗಲಿ ಕಾಣಬರುವನು. ಆದುದರಿಂದ ಇಲ್ಲಿ ಸೂರ್ಯನ ತಾಪವೂ, ಪ್ರಕಾಶವೂ, ಬಹಳ ಹೆಚ್ಚು.



ವಲಯಗಳಲ್ಲಿಯ ಸಸ್ಯಗಳು.

ಈ ಉಷ್ಣವಲಯಗಳಲ್ಲಿ ದೊಡ್ಡ ದೊಡ್ಡ ಮರಗಳು ಬೆಳೆಯುವುವು. ಇಲ್ಲಿಯ ಗಿಡಗಳೂ, ಹೂಗಳೂ, ಹಣ್ಣುಗಳೂ, ಬಲು ಸೊಗಸಾಗಿರುವುವು. ಫಲಪುಷ್ಪಗಳಿಂದ ಕೂಡಿದ ವನಗಳಲ್ಲಿ ಪಂಚರಂಗಿಯ ಗಿಣಿಗಳೂ, ನವಿಲುಗಳೂ, ಕೋಗಿಲೆಗಳೂ, ಇನ್ನೂ ನಾನಾವಿಧವಾದ ಸೊಗಸಾದ ಇಂಪಾದ ಧ್ವನಿಯನ್ನು ಮಾಡುವ ಪಕ್ಷಿಗಳೂ, ಅನೇಕ

ವಿರುವುವು. ಅವು ನೋಡುವುದಕ್ಕೆ ಎಷ್ಟೋ ಅಂದವಾಗಿರುವುವು. ಗಿಡಗಾಡುಗಳಲ್ಲಿ ಬಹು ಗಂಭೀರವಾದ ದೊಡ್ಡ ಆನೆಗಳೂ, ಹುಲಿ, ಚಿರತೆ ಮುಂತಾದ ದುಷ್ಟಮೃಗಗಳೂ, ಭಯಂಕರವಾದ ಹಲವು ಬಗೆಯ ಹೆಬ್ಬಾವುಗಳೂ, ನಾಗರಹಾವುಗಳೂ, ಇರುವುವು. ಈ ವಲಯದಲ್ಲಿರುವ ಮರಳುಗಾಡುಗಳಲ್ಲಿ ಅಲ್ಲಲ್ಲೇ ನೀರಿನ ಬುಗ್ಗೆಗಳೂ, ಈ ಕಾಡಿನಲ್ಲಿ ಸಂಚರಿಸಲು ಅನುಕೂಲವಾಗಿ ಒದಗುವ ಒಂಟೆಗಳೂ ಇರುವುವು.

ಈ ವಲಯದಲ್ಲಿ ವಾಸಮಾಡುತ್ತಿರುವ ಜನರಲ್ಲಿ ಅನೇಕರು ಕೃಷಿ (ಬೇಸಾಯ) ಯಿಂದಲೂ, ಅನೇಕರು ಪಟ್ಟಣಗಳಲ್ಲಿದ್ದುಕೊಂಡು ಬೇರೆಬೇರೆ ಕಸುಬುಗಳಿಂದಲೂ, ಜೀವನ ಮಾಡಿಕೊಂಡು ಇರುವರು. ಅಲ್ಲಲ್ಲಿ ಬಹುಕಾಲದ ಹಿಂದೆ ಕಟ್ಟಿದ ದಿವ್ಯವಾದ ಕಟ್ಟಡಗಳು ಈಗಲೂ ಕಂಗೊಳಿಸುತ್ತಿವೆ.

### ಪ್ರಶ್ನೆಗಳು.

ನಾವು ಇರುವುದು ಯಾವ ವಲಯ? ನಮ್ಮ ಬಣ್ಣ, ಉಡಿಗೆ ತೊಡಿಗೆಗಳು ಹೇಗೆ ಇರುವುವು? ಒಂದೊಂದನ್ನಾಗಿ ವಿವರಿಸಿರಿ. ಮಧ್ಯಾಹ್ನದ ವೇಳೆಯಲ್ಲಿ ಸೂರ್ಯನು ಎಲ್ಲಿರುವಂತೆ ಕಾಣುವನು? ಇಲ್ಲಿ ಯಾವ ಯಾವ ಮೃಗಗಳಿವೆ? ಜನರು ಹೇಗೆ ಜೀವನಮಾಡಿಕೊಂಡಿರುವರು?

---

## ೧೦. ಸಮಶೀತೋಷ್ಣ ವಲಯಗಳು.

ನಾವು ವಾಸವಾಗಿರುವ ಉಷ್ಣವಲಯವನ್ನು ಉತ್ತರದಲ್ಲಿ, ಆಗಲಿ, ದಕ್ಷಿಣದಲ್ಲಿ ಆಗಲಿ, ದಾಟಿದರೆ ಸಮಶೀತೋಷ್ಣವಲಯವು ಸಿಕ್ಕುವುದು. ನಮ್ಮ ವಲಯಕ್ಕೆ ಉತ್ತರದಲ್ಲಿರುವುದು ಉತ್ತರ ಸಮಶೀತೋಷ್ಣವಲಯವು; ದಕ್ಷಿಣದಲ್ಲಿರುವುದು ದಕ್ಷಿಣಸಮಶೀತೋಷ್ಣ ವಲಯವು.

ಸಮಶೀತೋಷ್ಣವಲಯ ಗಳಲ್ಲಿ ಸೂರ್ಯನು ಯಾವ ಕಾಲದಲ್ಲಿಯೂ ನೆತ್ತಿಯಮೇಲೆ ಕಾಣುವುದಿಲ್ಲ. ಉತ್ತರ ಸಮಶೀತೋಷ್ಣವಲಯದಲ್ಲಿ ಸೂರ್ಯನು ಮಧ್ಯಾಹ್ನದ ವೇಳೆ ನೆತ್ತಿಗೆ ದಕ್ಷಿಣದಿಕ್ಕಿನಲ್ಲಿ ದೂರವಾಗಿಯೂ, ದಕ್ಷಿಣ ಸಮಶೀತೋಷ್ಣವಲಯದಲ್ಲಿ ನೆತ್ತಿಗೆ ಉತ್ತರದಿಕ್ಕಿನಲ್ಲಿ ದೂರವಾಗಿಯೂ, ಕಾಣಬರುವನು. ಆದುದರಿಂದ ಅಲ್ಲಿ ಸೂರ್ಯನ ತಾಪವು ಕಡಿಮೆ; ಬಿಸಿಲೂ ಹೆಚ್ಚಾಗಿರುವುದಿಲ್ಲ, ಚಳಿಯೂ ಹೆಚ್ಚಾಗಿರುವುದಿಲ್ಲ. ನಮ್ಮ

ವಲಯದಲ್ಲಿ ಆಗುವಂತೆ ಸಮಶೀತೋಷ್ಣವಲಯಗಳಲ್ಲಿಯೂ ಹಗಲು ರಾತ್ರಿಗಳು ಆಗುತ್ತವೆ. ಆದರೆ ಸೂರ್ಯನು ಮಾತ್ರ ಮಧ್ಯಾಹ್ನದಲ್ಲಿ ತಲೆಯಮೇಲಕ್ಕೆ ಬರುವುದಿಲ್ಲ.

ಇಲ್ಲಿ ಮರಗಿಡಗಳು ಸಮೃದ್ಧಿಯಾಗಿದ್ದರೂ ಉಷ್ಣವಲಯದಲ್ಲಿರುವಂತೆ ಬಲು ದೊಡ್ಡ ಮರಗಳೇ ಆಗಲಿ, ವಿಶೇಷ ವಾಸನೆಯುಳ್ಳ ಪುಷ್ಪಗಳೇ ಆಗಲಿ, ಬಹು ರಸವತ್ತಾದ ಫಲಗಳೇ ಆಗಲಿ, ಇರುವುದಿಲ್ಲ. ಇಲ್ಲಿ ಗೋಧಿ, ಜವೆಗೋಧಿ, ಮೊದಲಾದ ಧಾನ್ಯಗಳೂ, ಮೈಯೋರಟ್, ಗುಲಾಬಿ, ಮುಂತಾದ ಹೂಗಳೂ, ಸೇಬು, ದ್ರಾಕ್ಷಹಣ್ಣುಗಳೂ, ಬೆಳೆಯುತ್ತವೆ.

ಇಲ್ಲಿ ದನಕರುಗಳು, ಆಡು, ಕುರಿ, ಕುದುರೆ, ನಾಯಿ, ನರಿ, ತೋಳ, ಇವುಗಳು ವಿಶೇಷವಾಗಿರುವುವು.

ಇಲ್ಲಿ ಜನರು ಸಾಮಾನ್ಯವಾಗಿ ದೃಢಾಂಗರಾಗಿಯೂ, ಎತ್ತರವಾಗಿಯೂ, ಶಕ್ತಿವಂತರಾಗಿಯೂ ಇರುವರು. ಇವರ ಮೈಬಣ್ಣ ಬಿಳಿಯ ಛಾಯೆ, ಚಳಿ ಸ್ವಲ್ಪ ಹೆಚ್ಚಾದುದರಿಂದ ಇವರು ಯಾವಾಗಲೂ ಶಾಖವಾದ ಉಡುಪನ್ನು ತೊಟ್ಟಿರುವರು. ಇವರು ವ್ಯಾಪಾರದಲ್ಲಿ ಗಟ್ಟಿಗರು. ವ್ಯಾಪಾರಿಗಳಾದುದರಿಂದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಅನೇಕರು ವಾಸಮಾಡುವರು. ರೈಲು, ಹೊಗೆಯ ಹಡಗು, ಬೈಸಿಕಲ್, ನೂಲುವ ಯಂತ್ರ, ಅಚ್ಚಿನ ಯಂತ್ರ ಮೊದಲಾದುವುಗಳನ್ನು ಮೊದಲು ನಿರ್ಮಾಣ ಮಾಡಿದವರು ಇಲ್ಲಿಯವರೇ.

### ಪ್ರಶ್ನೆಗಳು.

ಸಮಶೀತೋಷ್ಣವಲಯಗಳೆಷ್ಟು ? ಎಲ್ಲವೆ ? ಇಲ್ಲಯ ಫಲ, ಪುಷ್ಪಗಳು ಯಾವುವು ? ಜನರು ಹೇಗಿರುವರು ?

---

## ೧೧. ಶೀತವಲಯಗಳು.

ಶೀತವಲಯಗಳು ಸಮಶೀತೋಷ್ಣವಲಯಗಳ ಉತ್ತರದಲ್ಲಿಯೂ, ದಕ್ಷಿಣದಲ್ಲಿಯೂ, ಇವೆ. ಶೀತವಲಯ ಎಂಬ ಹೆಸರಿಗೆ ಸರಿಯಾಗಿ ಅಲ್ಲಿ ಚಳಿ ಬಲು ಹೆಚ್ಚು. ಸೂರ್ಯನು ಉತ್ತರಶೀತವಲಯಕ್ಕೆ ದಕ್ಷಿಣ ದಿಕ್ಕಿನಲ್ಲಿಯೂ, ದಕ್ಷಿಣಶೀತವಲಯಕ್ಕೆ ಉತ್ತರ ದಿಕ್ಕಿನಲ್ಲಿಯೂ, ನೆತ್ತಿಗೆ ಬಲು ದೂರವಾಗಿ ಕಾಣುವನು. ಈ ವಲಯಗಳಲ್ಲಿ ಸೂರ್ಯನು

ಬೇಸಿಗೆಯಲ್ಲಿ ಕೆಲವು ದಿನಗಳು ಮುಳುಗುವುದೇ ಇಲ್ಲ. ಅಕ್ಷಗಳ ಬಳಿಯಲ್ಲಂತೂ, ಆರು ತಿಂಗಳು ಹಗಲು, ಆರು ತಿಂಗಳು ರಾತ್ರಿ ಆಗಿರುತ್ತದೆ.

ಸೂರ್ಯನು ಉದಯಿಸಿದ್ದರೂ, ಎಂದರೆ ಹಗಲನಲ್ಲಿಯೂ, ಸೂರ್ಯನ ತಾಪದ ಬೇಗೆಯೇ ಇಲ್ಲವೆನ್ನಬಹುದು. ದೀರ್ಘರಾತ್ರಿಯಲ್ಲಿ ಆಕಾಶದಲ್ಲಿ ಒಂದು ಜಾತಿಯ ಬೆಳಕು ಬಿಲ್ಲಿನಂತೆ ಬಾಗಿಕೊಂಡು ಮಿಂಚುತ್ತಿರುತ್ತದೆ. ಆ ದೇಶದಲ್ಲಿ ನೀರು ಹೆಪ್ಪುಕಟ್ಟಿ ಮಂಜಿನಗಡ್ಡೆಯಾಗಿರುತ್ತದೆ. ಸಮುದ್ರದ ನೀರೂ ಕೂಡ ಗಟ್ಟಿಯಾಗಿಹೋಗುತ್ತದೆ.

ಅಲ್ಲಿ ಯಾವ ವಿಧವಾದ ಗಿಡಗಳೂ ಬೆಳೆಯುವುದಿಲ್ಲ. ಕುರಿ, ದನ, ಕುದುರೆ



ಶೀತವಲಯದವರು.

ಮುಂತಾದ ಪ್ರಾಣಿಗಳೂ ಇಲ್ಲ. ಅಲ್ಲಿ ಒಂದು ಜಾತಿಯ ನಾಯಿ, ಒಂದು ಬಗೆಯ ಸಾರಂಗ, ಒಂದು ತೆರನಾದ ಕರಡಿ, ವಾಸಮಾಡುವುವು.

ಇಲ್ಲಿ ಒಂದು ವಿಧವಾದ ಜನರು ವಾಸಮಾಡುತ್ತಾರೆ. ಅವರು ಕುಳ್ಳರು, ದೊಡ್ಡರು. ಅವರು ಮಂಜಿನ ಗಡ್ಡೆಗಳಿಂದ ಮನೆಗಳನ್ನು ಕಟ್ಟಿಕೊಳ್ಳುತ್ತಾರೆ, ಆದರೂ ಆ ಮನೆಗಳು ಬೆಚ್ಚಗಿರುತ್ತವೆ. ಅವುಗಳಿಗೆ ಬಾಗಿಲುಗಳಿರುವುದಿಲ್ಲ. ಸಣ್ಣ ಕಂಡಿಗಳು ಮಾತ್ರ ಇರುತ್ತವೆ. ಆ ಕಂಡಿಗಳ ಮೂಲಕ ಮೆಲ್ಲಗೆ ತೆವಳಿಕೊಂಡು ಮನೆಯೊಳಕ್ಕೆ ಹೋಗಬೇಕು.

ಅಲ್ಲಿ ಚಳಿ ಹೆಚ್ಚಾಗಿರುವುದರಿಂದ ಆ ಜನರು ತುಪ್ಪಟದೊಡನಿರುವ ಚರ್ಮದ ಉಡುಪನ್ನು ಹಾಕಿಕೊಳ್ಳುತ್ತಾರೆ. ಅಲ್ಲಿ ಸವುದೆ ಇಲ್ಲದ ಕಾರಣ ಬೆಂಕಿಗೆ ಪ್ರತಿಯಾಗಿ ಮೀನಿನ ಕೊಬ್ಬಿನಿಂದ ದೀಪವನ್ನು ಉರಿಸುತ್ತಾರೆ. ಅಲ್ಲಿ ದವಸಧಾನ್ಯಗಳು ಯಾವುವೂ ಬೆಳೆಯುವುದಿಲ್ಲ. ಆದಕಾರಣ ಅವರು 'ಸೀಲ್' ಎಂಬ ಜಲಚರಗಳನ್ನು ಬೇಟೆಯಾಡಿ ಅವುಗಳನ್ನು ತಿಂದು ಜೀವಿಸುವರು. ಅಲ್ಲಿ ಹಾದಿಬೀದಿಗಳಲ್ಲಿ ಎಲ್ಲೆಲ್ಲಿಯೂ ಮಂಜಿನಗಡ್ಡೆ ಕವಿದುಕೊಂಡು ಇರುವುದರಿಂದ ಎಲ್ಲಿ ಹೋದರೆ ಅಲ್ಲಿಯೇ ಹಾದಿಯಾಗಿರುತ್ತದೆ. ಚಕ್ರವಿಲ್ಲದ ಒಂದುವಿಧವಾದ ಬಂಡಿಗೆ ನಾಯಿಗಳನ್ನಾಗಲಿ, ಸಾರಂಗವನ್ನಾಗಲಿ, ಕಟ್ಟಿ ಬೇಕಾದಕಡೆಗೆ ಹೋಗುತ್ತಾರೆ.

ಅಲ್ಲಿ ಬಿಳಿಯ ಕರಡಿಗಳೂ, 'ವಾಲ್‌ರಸ್' ಎಂಬ ಹಿಮಸಾಗರ ಸಿಂಹಗಳೂ, (ನೀರ್ಗುದುರೆಗಳೂ) ಇವೆ.

### ಪ್ರಶ್ನೆಗಳು.

ಶೀತವಲಯವು ಎಲ್ಲಿದೆ? ಯಾರು ವಾಸಮಾಡುವರು? ಅಲ್ಲಿ ಯಾವ ಮೃಗಗಳಿವೆ? ಅಲ್ಲಿ ವಿಶೇಷವೇನು?

---

## ೧೨. ವಾಯುಗುಣ.

[ವಾಯುವೆಂದರೆ ಸಂಚಾರವಿಲ್ಲದ ಗಾಳಿಯು.] ನಾವು ವಾಸಮಾಡುವ ಭೂಮಂಡಲದ ಸುತ್ತಲೂ ಹಲವು ಮೈಲಿಗಳವರೆಗೆ ವಾಯು ಸುತ್ತಿಕೊಂಡಿರುತ್ತದೆ. ಈ ವಾಯುವಿನಲ್ಲಿ ಆಗಾಗ ಅಲ್ಲಲ್ಲಿ ಆಗುವ ವ್ಯತ್ಯಾಸಗಳು ವಾಯುಗುಣವನ್ನು ಬದಲಾಯಿಸುವುವು.

ಕೆಲವು ದೇಶಗಳಲ್ಲಿ ಉಷ್ಣವು ಹೆಚ್ಚಾಗಿರುತ್ತದೆ. ಕೆಲವುಗಳಲ್ಲಿ ಶೀತವು ಹೆಚ್ಚಾಗಿರುತ್ತದೆ. ಕೆಲವುಗಳಲ್ಲಿ ಎರಡೂ ಹೆಚ್ಚಿಲ್ಲದೆ ಸಮಧಾತುವಾಗಿ ಇರುತ್ತದೆ. ಇವೇ ಮುಂತಾದ ಕಾಲಸ್ಥಿತಿಯ ವ್ಯತ್ಯಾಸಗಳೆಲ್ಲಾ ಆಯಾ ದೇಶದ ವಾಯುಗುಣದಿಂದ ತಿಳಿಯಬರುತ್ತವೆ.

ಯಾವುದಾದರೊಂದು ದೇಶವು ಹೆಚ್ಚಾಗಿ ಮಳೆ, ಗಾಳಿ, ಚಳಿಯುಳ್ಳದಾಗಿದ್ದರೆ ಅದನ್ನು ಶೀತದೇಶವೆನ್ನುತ್ತೇವೆ; ಹಾಗಿಲ್ಲದೆ ಅಲ್ಲಿ ಉರಿಬಿಸಿಲು ವಿಶೇಷವಾಗಿ ಕಾಯು

ತ್ತಿದ್ದು, ಚಳಿಗಾಲದಲ್ಲಿಯೂ ಬಲು ಸೆಕೆಯಾಗುವುದಾದರೆ ಅದನ್ನು ಉಷ್ಣದೇಶವೆನ್ನು ತ್ತೇವೆ.

ಉಷ್ಣವಲಯದಲ್ಲಿರುವ ದೇಶಗಳು ಉಷ್ಣವಾಗಿಯೂ, ಶೀತವಲಯದಲ್ಲಿರುವ ದೇಶಗಳು ಶೀತವಾಗಿಯೂ, ಸಮಶೀತೋಷ್ಣವಲಯಗಳಲ್ಲಿರುವ ದೇಶಗಳು ಸಮಧಾತು ವಾಗಿಯೂ ಇರುವುದು ಸಹಜವಾಗಿದೆ. ಈ ಕಾರಣದಿಂದ ಧ್ರುವಗಳಕಡೆಗೆ ಹೋ ಗುತ್ತಾ ಹೋಗುತ್ತಾ ಶೀತವು ಹೆಚ್ಚುವುದೆಂದೂ, ವಿಷುವದ್ರೇಖೆಯ ಬಳಿಗೆ ಬರುತ್ತಾ ಬರುತ್ತಾ ಉಷ್ಣವು ಹೆಚ್ಚುವುದೆಂದೂ, ಹೇಳಬಹುದು. ಸಾಮಾನ್ಯವಾಗಿ ಇದು ನಿಜ ವಾದರೂ, ಮುಂದೆ ತಿಳಿಸುವ ಕಾರಣಗಳಿಂದ ಇದರಲ್ಲಿಯೂ ವ್ಯತ್ಯಾಸಗಳು ಆಗುತ್ತವೆ. ಹೇಗೆಂದರೆ :—

೧. ತಗ್ಗಿನ ಪ್ರದೇಶಗಳಿಗಿಂತ ಎತ್ತರವಾದ ಪ್ರದೇಶಗಳಲ್ಲಿ ತಂಪು ಹೆಚ್ಚು.
೨. ಸಮುದ್ರತೀರದ ಪ್ರದೇಶಗಳಲ್ಲಿಯೂ, ದ್ವೀಪಗಳಲ್ಲಿಯೂ, ಸಮುದ್ರದ ಬಲ ದಿಂದ ಶೀತೋಷ್ಣಗಳ ವೇಗವು ಹೆಚ್ಚದೆ ಇರುವುದು.
೩. ಸಮುದ್ರತೀರವು ಇಲ್ಲದ ಪ್ರದೇಶಗಳಲ್ಲಿ ಬೇಸಿಗೆಯಲ್ಲಿ ಉಷ್ಣ ಹೆಚ್ಚುವುದು ; ಚಳಿಗಾಲದಲ್ಲಿ ಚಳಿ ಹೆಚ್ಚುವುದು.
೪. ಇದಲ್ಲದೆ ದೇಶವು ಗಿಡಸೀಮೆಯಾಗಿದ್ದರೆ, ಎಂದರೆ, ಅಲ್ಲಿ ದೊಡ್ಡ ಮರ ಗಳಿರುವ ಕಾಡುಗಳಿದ್ದರೆ, ಆ ದೇಶವು ತಂಪಾಗಿರುವುದು.

ಇವೇ ಮೊದಲಾದ ಕಾರಣಗಳಿಂದ ಈ ಭೂಗೋಳವನ್ನು ಆವರಿಸಿರುವ ವಾಯುವು ಗುಣಭೇದಗಳನ್ನು ಪಡೆಯುವುದು.

---

## ೧೩. ಭೂಮಿಯಮೇಲೆ ವಾಸವಾಗಿರುವ ಜನ.

ವಿಸ್ತಾರವಾದ ಈ ಭೂಭಾಗದಲ್ಲಿ ಎಲ್ಲೆಲ್ಲಿ ವಾಸಕ್ಕೆ ಅನುಕೂಲ ಇರುವುದೋ ಅಲ್ಲೆಲ್ಲಾ ಜನರು ವಾಸವಾಗಿರುವರು. ಫಲವತ್ತಾದ ಭೂಮಿ, ಬೇಕಾದಷ್ಟು ಜಲವಸತಿ, ಆರೋಗ್ಯವಾದ ವಾಯುಗುಣ, ಇವು ಎಲ್ಲವೂ ಎಲ್ಲಿ ಇರುವುವೋ ಅಲ್ಲಿ ಜನರು ಹೆಚ್ಚಾಗಿ ವಾಸಮಾಡುವರು. ಈ ಅನುಕೂಲಗಳು ಕಡಿಮೆಯಾದಹಾಗೆಲ್ಲಾ ವಾಸಮಾಡುವವರ ಸಂಖ್ಯೆಯೂ ಕಡಿಮೆ. ಈ ಭೂಮಿಯಮೇಲೆ ವಾಸಮಾಡುವ ಜನರೆಲ್ಲರೂ ಒಂದೇ

ಮುಖಧಾವುಳ್ಳವರಾಗಿಯಾಗಲಿ ಒಂದೇ ಬಣ್ಣವುಳ್ಳವರಾಗಿಯಾಗಲಿ ಇದ್ದಾರೆಯೋ? ಇಲ್ಲ. ಜನಗಳಲ್ಲಿ ಒಬ್ಬೊಬ್ಬನೂ ಒಂದೊಂದು ರೀತಿಯಾಗಿದ್ದರೂ, ಅನೇಕರು ಸಾಮಾನ್ಯವಾದ ಕೆಲವು ಹೋಲಿಕೆಗಳನ್ನುಳ್ಳವರಾಗಿರುವರು. ಹೀಗೆ ಸಾಮಾನ್ಯವಾದ ಕೆಲವು ಹೋಲಿಕೆ



ಇಂಗ್ಲಿಷ್. ಚೀಣ. ರೆಡ್‌ಇಂಡಿಯನ್. ದಕ್ಷಿಣದ್ವೀಪವಾಸಿ. ನೀಗ್ರೊ.
ಮಾನವ ವರ್ಗಗಳು.

ಯುಳ್ಳವರೆಂದು ತಿಳಿಯಬಹುದಾದ ಜನರನ್ನು ಮೂರು ವರ್ಗ ಅಥವಾ ಪಂಗಡವಾಗಿ ವಿಂಗಡಿಸಬಹುದು:—ಕಪ್ಪುಜನ (ನೀಗ್ರೊ), ಹಳದಿಜನ (ಮಾಂಗೋಲ್), ಬಿಳಿಯಜನ (ಆರ್ಯ ಅಥವಾ ಕಕೇಷಿಯನ್).

ಒರಟಾದ ಕಪ್ಪುಕೂದಲುಳ್ಳ, ತಟ್ಟೆಮುಖದ, ಚಪ್ಪಟೆಮೂಗಿನ, ದಪ್ಪತುಟಿಯ, ಮುಂದಾಡೆಯ ಕಪ್ಪುಜನರು ಉಷ್ಣವಲಯದಲ್ಲಿ ಮೊದಲು ವಿಶೇಷವಾಗಿ ವಾಸವಾಗಿದ್ದರು. ಈಗ ಇವರ ಸಂಖ್ಯೆಯು ಕಡಿಮೆ.

ನೀಳವಾದ ಕಪ್ಪು ಕೂದಲುಳ್ಳ, ಸಣ್ಣ ಕಣ್ಣಿನ, ತೆಳುದುಟಿಯ, ಚಪ್ಪಟೆ ಮುಖದ ಎಳಹಳದೀ ಬಣ್ಣದವರು (ಚೀಣಾಜ್ಞವರು) ಅನೇಕರಿರುವರು. ಇವರು ಅನೇಕ ದೇಶಗಳಲ್ಲಿ ವಾಸಿಸುತ್ತಿರುವರು.

ನೀಳವಾದ, ಮೃದುವಾದ ಕೂದಲುಳ್ಳ, ಎಳಸಾದ ಮೂಗುಳ್ಳ, ತಿದ್ದಿದ ಮುಖವುಳ್ಳ, ಬೆಳ್ಳಗೂ, ಶ್ಯಾಮವರ್ಣವಾಗಿಯೂ, ರಕ್ತವರ್ಣವಾಗಿಯೂ ಇರುವ ಆರ್ಯರು ಕೇವಲ ನಾಗರಿಕರಾಗಿ ಭೂಮಿಯ ಅನೇಕ ದೇಶಗಳನ್ನು ಆಕ್ರಮಿಸಿಕೊಂಡಿರುವರು.

---

## ೧೪. ನೆಲ.

ಭೂಗೋಳದಲ್ಲಿ ಮುಕ್ಕಾಲುಪಾಲು ಜಲವಾಗಿಯೂ, ಕಾಲುಪಾಲು ನೆಲವಾ

ಗಿಯೂ ಇದೆ ಎಂದು ಹೇಳಲಿಲ್ಲವೆ? ಈ ನೆಲವು ಎಲ್ಲಾ ಕಡೆಗಳಲ್ಲಿಯೂ ಒಂದೇ ವಿಧವಾಗಿ ಇರುವುದಿಲ್ಲ; ಕೆಲವುಕಡೆ ಮಟ್ಟವಾಗಿಯೂ, ಕೆಲವುಕಡೆ ತಗ್ಗಾಗಿಯೂ, ಇನ್ನು ಕೆಲವುಕಡೆ ಎತ್ತರವಾಗಿಯೂ, ಇರುತ್ತದೆ.

ಊರ ಹೊರಗಡೆ ಹೊಲಗದ್ದೆಗಳ ಬಳಿಗೆ ಹೋಗಿ ನೋಡಿದರೆ ನೆಲವು ಬಹಳ ಹಳ್ಳ ತಿಟ್ಟುಗಳಿಲ್ಲದೆ ಸುಮಾರಾಗಿ ಮಟ್ಟವಾಗಿ ಇರುವಂತೆ ಕಾಣುವುದಿಲ್ಲವೆ? ಹೀಗೆ ಮಟ್ಟವಾಗಿ ದೊಡ್ಡದಾಗಿರುವ ನೆಲಕ್ಕೆ ಮೈದಾನ ಅಥವಾ ಬಯಲು ಎಂದು ಹೆಸರು.

ಕೆಲವುಕಡೆ ನೆಲವು ಮೈದಾನಕ್ಕಿಂತಲೂ ಉಬ್ಬಾಗಿರುತ್ತದೆ. ಈ ಉಬ್ಬು ಹೆಚ್ಚಾಗಿಲ್ಲದಿದ್ದರೆ ಅದಕ್ಕೆ ದಿಣ್ಣೆ, ತಿಟ್ಟು, ದೋರೆ, ಎಂದು ಹೇಳುತ್ತಾರೆ. ಈ ಉಬ್ಬು ಸ್ವಲ್ಪ



ಭೂಜಲ ವಿಭಾಗಗಳು.

ಹೆಚ್ಚಾಗಿ ಮೇಲಕ್ಕೆ ಹತ್ತಿಹೋಗುವಹಾಗಿದ್ದರೆ ಅಂತಹವುಗಳನ್ನು ಗುಡ್ಡ, ಬೆಟ್ಟ ಎಂದು ಕರೆಯುತ್ತಾರೆ. ಅವು ಬಹಳ ಎತ್ತರವಾಗಿದ್ದರೆ ಪರ್ವತಗಳು ಎನ್ನಿಸಿಕೊಳ್ಳುತ್ತವೆ. ಆದುದರಿಂದ ಭೂಮಿಯಲ್ಲಿ ಎತ್ತರವಾದ ಭಾಗಗಳಿಗೆ ಬೆಟ್ಟಗಳು ಅಥವಾ ಪರ್ವತಗಳು ಎಂದು ಹೆಸರು. ಕೆಲವು ಪರ್ವತಗಳು ಬಲು ಎತ್ತರವಾಗಿರುತ್ತವೆ; ಅವುಗಳ ತಲೆಯ ಮೇಲೆ ಯಾವಾಗಲೂ ಮಂಜು ಹೆಪ್ಪುಕಟ್ಟಿಕೊಂಡಿರುತ್ತದೆ. ಇಂತಹ ಪರ್ವತಗಳಲ್ಲಿ ಹಿಮವತ್ಪರ್ವತವು ಮುಖ್ಯವಾಗಿದೆ.

ಗಿಯೂ ಇದೆ ಎಂದು ಹೇಳಲಿಲ್ಲವೆ ? ಈ ನೆಲವು ಎಲ್ಲಾ ಕಡೆಗಳಲ್ಲಿಯೂ ಒಂದೇ ವಿಧವಾಗಿ ಇರುವುದಿಲ್ಲ ; ಕೆಲವುಕಡೆ ಮಟ್ಟವಾಗಿಯೂ, ಕೆಲವುಕಡೆ ತಗ್ಗಾಗಿಯೂ, ಇನ್ನು ಕೆಲವುಕಡೆ ಎತ್ತರವಾಗಿಯೂ, ಇರುತ್ತದೆ.

ಊರ ಹೊರಗಡೆ ಹೊಲಗದ್ದೆಗಳ ಬಳಿಗೆ ಹೋಗಿ ನೋಡಿದರೆ ನೆಲವು ಬಹಳ ಹಳ್ಳ ತಿಟ್ಟುಗಳಿಲ್ಲದೆ ಸುಮಾರಾಗಿ ಮಟ್ಟವಾಗಿ ಇರುವಂತೆ ಕಾಣುವುದಿಲ್ಲವೆ ? ಹೀಗೆ ಮಟ್ಟವಾಗಿ ದೊಡ್ಡದಾಗಿರುವ ನೆಲಕ್ಕೆ ಮೈದಾನ ಅಥವಾ ಬಯಲು ಎಂದು ಹೆಸರು.

ಕೆಲವುಕಡೆ ನೆಲವು ಮೈದಾನಕ್ಕಿಂತಲೂ ಉಬ್ಬಾಗಿರುತ್ತದೆ. ಈ ಉಬ್ಬು ಹೆಚ್ಚಾಗಿಲ್ಲದಿದ್ದರೆ ಅದಕ್ಕೆ ದಿಣ್ಣೆ, ತಿಟ್ಟು, ದೋರೆ, ಎಂದು ಹೇಳುತ್ತಾರೆ. ಈ ಉಬ್ಬು ಸ್ವಲ್ಪ




ಭೂಜಲ ವಿಭಾಗಗಳು.

ಹೆಚ್ಚಾಗಿ ಮೇಲಕ್ಕೆ ಹತ್ತಿಹೋಗುವಹಾಗಿದ್ದರೆ ಅಂತಹವುಗಳನ್ನು ಗುಡ್ಡ, ಬೆಟ್ಟ ಎಂದು ಕರೆಯುತ್ತಾರೆ. ಅವು ಬಹಳ ಎತ್ತರವಾಗಿದ್ದರೆ ಪರ್ವತಗಳು ಎನ್ನಿಸಿಕೊಳ್ಳುತ್ತವೆ. ಆದುದರಿಂದ ಭೂಮಿಯಲ್ಲಿ ಎತ್ತರವಾದ ಭಾಗಗಳಿಗೆ ಬೆಟ್ಟಗಳು ಅಥವಾ ಪರ್ವತಗಳು ಎಂದು ಹೆಸರು. ಕೆಲವು ಪರ್ವತಗಳು ಬಲು ಎತ್ತರವಾಗಿರುತ್ತವೆ ; ಅವುಗಳ ತಲೆಯ ಮೇಲೆ ಯಾವಾಗಲೂ ಮಂಜು ಹೆಪ್ಪುಕಟ್ಟಿಕೊಂಡಿರುತ್ತದೆ. ಇಂತಹ ಪರ್ವತಗಳಲ್ಲಿ ಹಿಮವತ್ಪರ್ವತವು ಮುಖ್ಯವಾಗಿದೆ.

ಈ ಪರ್ವತಗಳು ಒಂದುವೇಳೆ ಗುಂಪಾಗಿರುತ್ತವೆ; ಅವುಗಳಿಗೆ ಪರ್ವತಸಮೂಹ ವೆಂದು ಹೆಸರು; ಇವು ಕೆಲವುವೇಳೆ ಸಾಲಾಗಿ ನೀಡಿಕೊಂಡಿರುತ್ತವೆ; ಅಂತಹವುಗಳಿಗೆ ಪರ್ವತಶ್ರೇಣಿಗಳೆಂದು ಹೆಸರು. ಪರ್ವತಗಳ ತುದಿಗೆ ಶಿಖರವೆಂದು ಹೆಸರು. ಎರಡು ಪರ್ವತಶ್ರೇಣಿಗಳ ನಡುವೆ ತಗ್ಗಾದ ಮತ್ತು ಇಕ್ಕಟ್ಟಾದ ಪ್ರದೇಶವಿರುವುದು; ಅಂತಹ ಪ್ರದೇಶಕ್ಕೆ ಕಣಿವೆ ಎಂದು ಹೆಸರು. ಕೆಲವುಕಡೆ ಸುತ್ತುಮುತ್ತಲೂ ಇರುವ ಬೆಟ್ಟಗಳು ತಗ್ಗಾಗಿರದೆ ಬಹಳ ಎತ್ತರವಾಗಿಯೂ ವಿಶಾಲವಾಗಿಯೂ ಇರುತ್ತವೆ.

ಕೆಲವುಕಡೆ ಒಂದು ತೆರನಾದ ಬೆಟ್ಟಗಳಿವೆ. ಅವು ಒಂದೊಂದುವೇಳೆ ಮಹಾ ರಭಸದಿಂದ ನೆಲವನ್ನು ಭೇದಿಸಿ ದಾರಿಮಾಡಿಕೊಂಡು, ಹೊಗೆಯನ್ನೂ, ಬೆಂಕಿಯನ್ನೂ



ಜ್ವಾಲಾಮುಖಿ.

ಕಾರುತ್ತವೆ. ಬೆಂಕಿಯೇ ಮುಂತಾದುವು ಹೊರಟುಬರುವ ದಾರಿಗೆ ಜ್ವಾಲಾಮುಖಿ ಎಂದು ಹೆಸರು; ಹೀಗಾಗುವುದಕ್ಕೆ ಸ್ವಲ್ಪ ಮುಂಚೆ ನೆಲವು ಅಲ್ಲಾಡಿಹೋಗುತ್ತದೆ; ಅದಕ್ಕೆ ಭೂಕಂಪವೆನ್ನುತ್ತಾರೆ. ಕೆಲವುವೇಳೆ ಇವುಗಳಿಂದ ಕಲ್ಲು, ಕಾದ ಲೋಹಗಳು, ನೀರಾಗಿ ಕರಗಿ ಮೇಲಕ್ಕೆ ಉಕ್ಕಿಬಂದು, ಸುತ್ತಲೂ ಇರುವ ಎಲ್ಲವನ್ನೂ ಸುಟ್ಟುಬಿಡು ವುದುಂಟು. ಇಂತಹ ಬೆಟ್ಟಗಳಿಗೆ ಅಗ್ನಿಪರ್ವತಗಳೆಂದು ಹೆಸರು.

'ಅಗ್ನಿಪರ್ವತ' ಎಂದರೆ ಬೆಂಕಿಯನ್ನು ಕಾರುವ ಬೆಟ್ಟ ಎಂದು ಅರ್ಥ. ಒಂದಾನೊಂದು ಕಾಲದಲ್ಲಿ ಅಗ್ನಿಪರ್ವತವಾಗಿದ್ದ ಇಂತಹ ಬೆಟ್ಟವು ಈಗ ಆರಿಹೋಗಿರು ವುದೂ ಉಂಟು.

ಸೂಚನೆ.—ಹಳ್ಳತಿಟ್ಟಾದ ನೆಲದಮೇಲಿರುವ ಉಬ್ಬು, ಗುಡ್ಡ, ಬೆಟ್ಟ, ಪರ್ವತ, ಕಣಿವೆಗಳನ್ನು ತೋರಿಸಲು, ಮರಳನ್ನು ತೆಗೆದುಕೊಂಡು ಮೈದಾನದಂತೆ ಇರುವ ಮೇಜಿನಮೇಲೆ ಹರಡಿ ಬೆಟ್ಟಗುಡ್ಡಗಳಿಗೆ ಹೆಚ್ಚಾಗಿ ಮರಳನ್ನು ರಾಶಿಹಾಕಿ ತೋರಿಸಬೇಕು. ಜೇಡಿಮಣ್ಣಿನಿಂದ ಮಾದರಿಯನ್ನು ಮಾಡಿ ತೋರಿಸುವುದು ಉತ್ತಮ. ಭೂಪಟದಲ್ಲಿ ಬೇರೆ ಬೇರೆ ಬಣ್ಣಗಳಿಂದ ಹಳ್ಳತಿಟ್ಟುಗಳನ್ನು ತೋರಿಸುವುದನ್ನು ಬಾಲಕರಿಗೆ ತಿಳಿಯಪಡಿಸಬೇಕು.

## ಪ್ರಶ್ನೆಗಳು.

ಎಂತಹ ನೆಲವನ್ನು ಮೈದಾನವೆನ್ನುವರು? ಪರ್ವತಶ್ರೇಣಿ ಎಂದರೇನು? ಕಣಿವೆಯು ಯಾವುದು? ಅಗ್ನಿಪರ್ವತಗಳ ಸ್ವಭಾವವೇನು? ಜ್ವಾಲಾಮುಖಿ ಎಂದರೆ ಏನು ಅರ್ಥ?

---

# ೧೫. ನೆಲ

ನಾಲ್ಕೈದು ಒಕ್ಕಲು ವಾಸಮಾಡುವ ಪ್ರದೇಶಕ್ಕೆ ಕೊಪ್ಪಲು ಅಥವಾ ಹುಂಡಿ ಎಂತಲೂ;

ಹಲವು ಒಕ್ಕಲು ಇರುವ ಸ್ಥಳಕ್ಕೆ ಹಳ್ಳಿ ಎಂತಲೂ;

ನೂರಾರು ಒಕ್ಕಲು ಇರುವ ಸ್ಥಳಕ್ಕೆ ಊರು ಎಂತಲೂ;

ಊರಿಗಿಂತ ಹೆಚ್ಚಾಗಿ ಜನವಸತಿಯಾಗಿರುವ ಸ್ಥಳಕ್ಕೆ ಪಟ್ಟಣವೆಂತಲೂ;

ಅನೇಕ ಹಳ್ಳಿ, ಊರು, ಪಟ್ಟಣಗಳನ್ನೊಳಗೊಂಡಿರುವ ಭೂಭಾಗಕ್ಕೆ ದೇಶವೆಂತಲೂ;

ಅನೇಕ ದೇಶಗಳನ್ನೊಳಗೊಂಡಿರುವ ಬಹು ವಿಸ್ತಾರವಾದ ಭೂಭಾಗಕ್ಕೆ ಖಂಡವೆಂತಲೂ ಹೆಸರು.

ಭೂಮಿಯಮೇಲಿರುವ ಪ್ರದೇಶವನ್ನೆಲ್ಲಾ ಐದು ಖಂಡಗಳಾಗಿ ಭಾಗಿಸಿರುವರು.

ಸಮುದ್ರವು ಭೂಮಿಯ ಸುತ್ತಲೂ ಇದೆ ಎಂದು ಹೇಳಲಿಲ್ಲವೆ? ಕೆಲವುವೇಳೆ ಅದು ಸಣ್ಣ ಭೂಭಾಗವನ್ನು ಸುತ್ತಿಕೊಂಡಿರುತ್ತದೆ.

ನೀರಿನಿಂದ ಸುತ್ತಲೂ ಸುತ್ತಲ್ಪಟ್ಟ ಅಂತಹ ಸಣ್ಣ ಭೂಭಾಗಕ್ಕೆ ದ್ವೀಪವೆಂದು ಹೆಸರು. ಕೆಲವುವೇಳೆ ಇಂತಹ ಹಲವು ದ್ವೀಪಗಳು ಗುಂಪಾಗಿರುವುದುಂಟು; ಅಂತಹವುಗಳಿಗೆ ದ್ವೀಪಸ್ತೋಮವೆನ್ನುತ್ತಾರೆ. 'ಸ್ತೋಮ' ಎಂದರೆ ಗುಂಪು ಎಂದರ್ಥ.

ಕೆಲವು ಸ್ಥಳಗಳಲ್ಲಿ ಸಮುದ್ರವು ಒಂದು ಸಣ್ಣ ಭೂಭಾಗದ ಮುಕ್ಕಾಲುಪಾಲಿನಷ್ಟನ್ನು ಸುತ್ತಿಕೊಂಡಿರುತ್ತದೆ; ಅಂತಹ ಭೂಮಿಗೆ ಪರ್ಯಾಯದ್ವೀಪವೆಂದು ಹೆಸರು. 'ಪರ್ಯಾಯದ್ವೀಪ' ಎಂದರೆ ನೀರಿನಿಂದ ಸುತ್ತಲ್ಪಟ್ಟಿರುವುದರಲ್ಲಿ ದ್ವೀಪಕ್ಕಿಂತ ಸ್ವಲ್ಪ ಕಡಿಮೆಯಾದುದು ಎಂದರ್ಥ.

ಕೆಲವುವೇಳೆ ವಿಸ್ತಾರವಾದ ಎರಡು ಭೂಭಾಗಗಳು ಇಕ್ಕಟ್ಟಾದ ಭೂಮಿಯಿಂದ ಸೇರಿರುತ್ತವೆ; ಇಂತಹ ಇಕ್ಕಟ್ಟಾದ ಭೂಮಿಗೆ ಭೂಕಂಠ ಎಂದು ಹೆಸರು. 'ಕಂಠ' ಎಂದರೆ ಕತ್ತು ಎಂದು ಅರ್ಥ. ಕತ್ತು ತಲೆಯನ್ನೂ, ಮೈಯನ್ನೂ, ಸೇರಿಸುವಂತೆ ಈ ಭೂಮಿಯು ಎರಡು ಭೂಭಾಗಗಳನ್ನು ಸೇರಿಸುತ್ತದೆ; ಆದುದರಿಂದ ಅದಕ್ಕೆ ಈ ಹೆಸರು ಬಂದಿದೆ. ಇದನ್ನೇ ಕೆಲವರು ಭೂಸಂಧಿ ಎನ್ನುತ್ತಾರೆ.

ಸಮುದ್ರದೊಳಗೆ ಚಾಚಿಕೊಂಡಿರುವ ಭೂಮಿಗೆ ಭೂಶಿರವೆಂದು ಹೆಸರು. 'ಶಿರ' ಎಂದರೆ ತಲೆ ಎಂದರ್ಥ.

ಸೂಚನೆ.—ಉಪಾಧ್ಯಾಯರು ಪಾಠಶಾಲೆಯ ಮುಂದಿನ ಮೈದಾನದ ಒಂದು ಭಾಗದಲ್ಲಿ ದ್ವೀಪ, ಪರ್ಯಾಯದ್ವೀಪ, ಭೂಶಿರ, ಭೂಕಂಠ, ಮುಂತಾದುವುಗಳ ಆಕಾರಗಳನ್ನು ಕೆತ್ತಿಸಿದ್ದು ಈ ಪಾಠವನ್ನು ಬೋಧಿಸುವ ವೇಳೆ ಕೆತ್ತಿಸಿದ್ದ ಸ್ಥಳದಲ್ಲಿ ನೀರನ್ನು ಬಿಟ್ಟು ದ್ವೀಪ ಮುಂತಾದವುಗಳ ಸ್ವರೂಪವನ್ನು ನಿದರ್ಶಿಸಬೇಕು. ಮಣ್ಣು, ನೀರು, ಇಟ್ಟುಕೊಂಡಾಗಲಿ ಈ ಪಾಠವನ್ನು ಬೋಧಿಸಬೇಕು. ದೊಡ್ಡ ಮಳೆ ಬಿದ್ದು ನಿಂತಮೇಲಾಗಲಿ, ಮರುದಿನವಾಗಲಿ ಬಾಲಕರನ್ನು ಹೊರಗೆ ಕರೆತಂದು ಆಗ ಉಂಟಾಗಿರುವ ದ್ವೀಪ ಮುಂತಾದುವುಗಳನ್ನು ತೋರಿಸಬೇಕು.

## ಪ್ರಶ್ನೆಗಳು.

ದ್ವೀಪವೆಂದರೇನು? ಯಾವುದಕ್ಕೆ ಪರ್ಯಾಯದ್ವೀಪವೆಂದು ಹೆಸರು? ಯಾವುದನ್ನು ಭೂಕಂಠವೆನ್ನುತ್ತಾರೆ? ಇವುಗಳ ಆಕಾರವನ್ನು ಗೋಡೆಗೆ ತಗಲುಹಾಕಿರುವ ಕಪ್ಪುಹಲಗೆಯಮೇಲೆ ಬರೆದು ತೋರಿಸಿರಿ. ಈ ಭೂಪಟದಲ್ಲಿ ಯಾವುದಾದರೂ ಒಂದು ಭೂಶಿರವನ್ನು ತೋರಿಸಿರಿ. ಮಣ್ಣು, ನೀರು, ಇವನ್ನು ತೆಗೆದುಕೊಂಡು ದ್ವೀಪದ ಆಕಾರವನ್ನು ಮಾಡಿ ತೋರಿಸಿರಿ.

---

## ೧೬. ಜಲ.

ಭೂಗೋಳದಲ್ಲಿ ಮುಕ್ಕಾಲುಪಾಲು ಜಲ ಇದೆ ಎಂದು ಹೇಳಲಿಲ್ಲವೆ? ಸಾಧಾರಣ

ವಾಗಿ ಈ ನೀರೆಲ್ಲಾ ಉಪ್ಪುನೀರು. ಇದು ನೆಲದ ಸುತ್ತಲೂ ಹರಡಿಕೊಂಡಿದೆ ; ಇದಕ್ಕೆ ಸಮುದ್ರವೆಂದು ಹೆಸರು. ನಾವು ಯಾವ ಕಡೆಗಾದರೂ ಹೊರಟು ನೆಟ್ಟಗೆ ಹೋಗುತ್ತಾ ಇದ್ದರೆ ಕೊನೆಗೆ ಸಮುದ್ರಕ್ಕೆ ಹೋಗಿ ಸೇರುತ್ತೇವೆ. ನಾವಿಕರು ಹಡಗಿನಲ್ಲಿ ಕುಳಿತು ಸಮುದ್ರದಮೇಲೆ ಪ್ರಯಾಣಹೋಗುತ್ತಾರೆ. ಸ್ವಲ್ಪ ದೂರ ಹೋದಕೂಡಲೆ ಅವರಿಗೆ ಆ ಹೊರಟ ದೇಶವು ಕಣ್ಮರೆಯಾಗುತ್ತದೆ. ಬಳಿಕ ಅವರಿಗೆ ಹಲವು ದಿವಸಗಳವರೆಗೆ ಮೇಲೆ ಆಕಾಶವೂ ಕೆಳಗೆ ನೀರೂ ವಿನಾ ಬೇರೆ ಏನೂ ಕಾಣುವುದಿಲ್ಲ. ಅವರ ಎದುರಿಗೆ ಯಾವುದಾದರೂ ಬೇರೊಂದು ಹಡಗು ಬರದರೆ ಅದು ಕಾಣಬಹುದು. ಹೀಗೆ ಕೆಲವು ದಿನ ಪಯಣ ಹೋದರೆ ಮೊದಲು ಮೊದಲು ದೂರದಲ್ಲಿ ಕರ್ರಗೆ ಒಂದು ಗೆರೆ ಕಾಣಿಸುತ್ತದೆ. ಅದರ ಹತ್ತಿರಕ್ಕೆ ಹೋಗುತ ಹೋಗುತ ಅದು ಅಗಲವಾಗಿ ಎತ್ತರವಾಗಿ ಕಾಣಬರುತ್ತದೆ. ಅದು ಇನ್ನೊಂದು ದೇಶದ ತೀರ.

ಎಲ್ಲಾ ಭೂಮಿಯನ್ನು ಸುತ್ತಿಕೊಂಡಿರುವ ಅಪಾರವಾದ ಉಪ್ಪುನೀರಿನ ರಾಶಿಗೆ ಸಾಗರವೆಂದು ಹೆಸರು.

ಸಮುದ್ರದ ದಡಕ್ಕೆ ತೀರ ಎಂದು ಹೇಳುತ್ತಾರೆ.

ಕೆಲವುವೇಳೆ ಸಮುದ್ರವು ನೆಲದೊಳಕ್ಕೆ ಬಹುದೂರ ಚಾಚಿಕೊಂಡಿರುತ್ತದೆ ; ಅಂತಹ ಪ್ರದೇಶಕ್ಕೆ ಖಾರಿ ಎನ್ನುತ್ತಾರೆ.

ಖಾರಿಗಿಂತ ಕಿರಿದಾಗಿ ಬಾಯಿ ಮಾತ್ರ ಅಗಲವಾಗಿರುವ ಜಲಭಾಗಕ್ಕೆ ಕೊಲ್ಲಿ ಎನ್ನುತ್ತಾರೆ. ಬಂಗಾಳಕೊಲ್ಲಿಯು ಬಲು ದೊಡ್ಡದಾಗಿದೆ.

ಕೆಲವುವೇಳೆ ಎರಡು ದೊಡ್ಡ ಸಮುದ್ರಗಳು ಇಕ್ಕಟ್ಟಾದ ಜಲಭಾಗದಿಂದ ಸೇರಿರುತ್ತವೆ ; ಈ ಜಲಭಾಗಕ್ಕೆ ಜಲಸಂಧಿ ಎಂದು ಹೆಸರು.

ಸಮುದ್ರತೀರದಲ್ಲಿ ಕೆಲವುಕಡೆ ಗಾಳಿಗೆ ಮರೆಯಾಗಿ ಹಡಗು ನಿಲ್ಲುವುದಕ್ಕೆ ಅನುಕೂಲವಾದ ಸ್ಥಳಗಳಿರುತ್ತವೆ. ಅಂತಹ ಸ್ಥಳಗಳನ್ನು ಬಂದರು ಎಂದು ಕರೆಯುತ್ತಾರೆ.

ಸೂಚನೆ.—ಹಿಂದಣ ಪಾಠದಂತೆ ಈ ಪಾಠವನ್ನೂ ನಿದರ್ಶನಗಳ ಸಹಾಯದಿಂದ ಬೋಧಿಸುವುದು.

---

# ೧೭. ಸಮುದ್ರದಿಂದ ಆಗುವ ಪ್ರಯೋಜನಗಳು.

ಸಮುದ್ರವು ಭೂಮಿಯನ್ನೆಲ್ಲಾ ಸುತ್ತಿಕೊಂಡಿದೆಯಷ್ಟೆ. ಇದರಿಂದ ಹಡಗುಗಳೂ, ಜಹಜುಗಳೂ, ಬೇಕಾದಕಡೆಗೆ ಹೋಗಲು ಅನುಕೂಲವಾಗಿರುವುದು. ಹಡಗು, ಜಹಜು, ಇವುಗಳ ಮೂಲಕವಾಗಿ ಜನರು ಬೇಕಾದ ಸ್ಥಳಕ್ಕೆ ಹೋಗಬಹುದು ; ಬೇಕಾದ ಸಾಮಾನುಗಳನ್ನು ಸಾಗಿಸಲೂಬಹುದು. ಆದಕಾರಣ ರೈಲುಹಾದಿಯನ್ನು ಪ್ರಪಂಚದ 'ಲೋಹಮಾರ್ಗ' ಎನ್ನುವಹಾಗೆ ಸಮುದ್ರವನ್ನು 'ಜಲಮಾರ್ಗ' ಎನ್ನಬಹುದು.

ಸಮುದ್ರವು ಬಿಸಿಲಿನಿಂದ ನೆಲದಷ್ಟು ಬೇಗನೆ ಕಾಯುವುದಿಲ್ಲ. ತಂಪಾದಾಗ ಅದು ನೆಲದಷ್ಟು ಬೇಗ ಆರಿಹೋಗುವುದೂ ಇಲ್ಲ. ಸಮುದ್ರವು ಬಿಸಿಲುಹೊತ್ತಿನಲ್ಲಿ ನೆಲಕ್ಕಿಂತ ತಂಪಾಗಿಯೂ, ತಂಪುಹೊತ್ತಿನಲ್ಲಿ ನೆಲಕ್ಕಿಂತ ಉಷ್ಣವಾಗಿಯೂ ಇದ್ದುಕೊಂಡು, ತೀರಪ್ರದೇಶಗಳ ಶೀತೋಷ್ಣಗಳಲ್ಲಿ ಬಹಳವಾಗಿ ಹೆಚ್ಚುಕಡಿಮೆಯಾಗದಂತೆ ಮಾಡುತ್ತದೆ.

ಸಮುದ್ರದಲ್ಲಿ ನಾನಾವಿಧವಾದ ಮೀನುಗಳೂ, ಇತರ ಪ್ರಾಣಿಗಳೂ ಇವೆ. ಅವುಗಳನ್ನು ಜನರು ಬೇಟೆಯಾಡಿ ಹಿಡಿದು, ಆಹಾರಕ್ಕೂ ಬೇರೆ ಕೆಲಸಗಳಿಗೂ, ಉಪಯೋಗಿಸಿಕೊಳ್ಳುತ್ತಾರೆ. ಸಮುದ್ರದಲ್ಲಿ ಹವಳಗಳೂ, ಮುತ್ತಿನ ಚಿಪ್ಪುಗಳೂ ಇವೆ. ಇವುಗಳನ್ನು ತಂದು ಜನರು ಅಲಂಕಾರಮಾಡಿಕೊಳ್ಳುತ್ತಾರೆ. ಸಮುದ್ರದ ನೀರು ಉಪ್ಪಾಗಿದೆ ಎಂದು ಹೇಳಲಿಲ್ಲವೆ ? ಆ ನೀರನ್ನು ಬಾಯಿ ಅಗಲವಾದ ಪಾತ್ರೆಗಳಲ್ಲಾಗಲಿ, ಗುಳಿಗಳಲ್ಲಾಗಲಿ ತುಂಬಿಟ್ಟರೆ, ಕೆಲವು ದಿನಕ್ಕೆ ಆ ನೀರೆಲ್ಲಾ ಇಂಗಿಹೋಗಿ ತಳದಲ್ಲಿ ಉಪ್ಪು ಹರಳುಹರಳಾಗಿ ನಿಲ್ಲುತ್ತದೆ. ಈ ಉಪ್ಪು ಮನುಷ್ಯರಿಗೂ, ದನಕರುಗಳಿಗೂ, ಆವಶ್ಯವಾಗಿದೆ.

ನಮ್ಮ ಕೊಳ, ಕಟ್ಟೆ, ಕೆರೆ, ಹೊಳೆ, ಮೊದಲಾದುವುಗಳ ನೀರಿಗೆ ಮಳೆಯೇ ಆಧಾರವಾಗಿದೆಯಷ್ಟೆ. ಆ ಮಳೆಗೆ ಸಮುದ್ರದ ನೀರೇ ಮುಖ್ಯಾಧಾರವಾಗಿದೆ. ಆದಕಾರಣ ಸಮುದ್ರದ ನೀರೇ ಪ್ರಪಂಚದಲ್ಲಿರುವ ಸಿಹಿನೀರಿಗೂ ಕೂಡ ಮುಖ್ಯವಾದ ಆಧಾರವೆಂದು ಹೇಳಬಹುದಾಗಿದೆ.

ಸೂಚನೆ.—ಪಾತ್ರೆಯು ನೀರಿಗಿಂತಲೂ ಬೇಗ ಕಾಯುವುದೆಂದೂ, ಬೇಗ ಆರುವುದೆಂದೂ, ತಿಳಿಸುವುದು. ಮುತ್ತಿನ ಚಿಪ್ಪುಗಳನ್ನು ಯಾವ ಯಾವ ರೀತಿಯಲ್ಲಿ ಉಪಯೋಗಿಸುವರು ಎಂಬುದನ್ನು ತಿಳಿಸಬೇಕು.

# ೧೮. ಮಳೆ.

ಮೋಡದಿಂದ ಮಳೆ ಬರುತ್ತದೆಯಾದುದರಿಂದ ಮೋಡಕ್ಕೂ, ಮಳೆಗೂ, ಸಂಬಂಧವಿದೆ ಎನ್ನಬಹುದು. ಹೀಗಿರಲು ಸಮುದ್ರಕ್ಕೂ ಮಳೆಗೂ ಸಂಬಂಧವೇನು ? ಎಂದು ಕೇಳಿದರೆ ಮೋಡಕ್ಕೆ ನೀರು ಎಲ್ಲಿಂದ ಬಂದಿತು ? ಎಂದು ನಿನ್ನನ್ನು ಕೇಳಬಹುದು.

ಮೊದಲು ಮೋಡವೆಂಬುದೇನೋ ನೋಡೋಣ. ಬೇಕಾದರೆ ನೀವೇ ಸಣ್ಣ ಮೋಡಗಳನ್ನು ಉಂಟುಮಾಡಬಹುದು. ಒಂದು ಪಾತ್ರೆಯಲ್ಲಿ ಸ್ವಲ್ಪ ನೀರು ಹಾಕಿ ಒಲೆಯಮೇಲಿಟ್ಟರೆ ಸ್ವಲ್ಪ ಹೊತ್ತಿಗೆಲ್ಲಾ ಆ ನೀರು ಕುದಿಯತೊಡಗುತ್ತದೆ. ಆಗ ಪಾತ್ರೆಯ ಮೇಲುಗಡೆ ಬೆಳ್ಳಗೆ ಹಬೆ ಕಾಣಿಸಿಕೊಳ್ಳಲಾರಂಭಿಸುತ್ತದೆ. ಅದೇ ಮೋಡವು. ಹೆಚ್ಚಾಗಿ ಕಾಯ್ದಿರುವ ಹಬೆಯು ಕಣ್ಣಿಗೆ ಕಾಣಿಸುವುದಿಲ್ಲ ; ಕಾವು ಸ್ವಲ್ಪ ಕಡಿಮೆಯಾದ ಕೂಡಲೆ ಅದು ಕಾಣಿಸಿಕೊಳ್ಳುತ್ತದೆ. ನಮ್ಮ ಉಸಿರಿನಲ್ಲಿಯೂ ಹಬೆ ಇದೆ. ಅದು ಬೇಸಿಗೆಯಲ್ಲಿ ಕಾಣಬರುವುದಿಲ್ಲ ; ಮಾಗಿಯ ಕಾಲದಲ್ಲಿ 'ಹಾ' ಎಂದು ಗಟ್ಟಿಯಾಗಿ ಬಾಯಿಂದ ಉಸಿರುಬಿಟ್ಟರೆ ಅದು ಹೊಗೆಯಹಾಗೆ ಕಾಣಬರುತ್ತದೆ.

ಸೂರ್ಯನ ಬಿಸಿಲಿನಿಂದ ಸಮುದ್ರ, ನದಿ, ಕೆರೆ, ಮೊದಲಾದವುಗಳಲ್ಲಿರುವ ನೀರು ಕಾಯುತ್ತಿರುತ್ತದೆ. ಅದರಿಂದ ಬೇಕಾದಷ್ಟು ಹಬೆಯು ಏಳುತ್ತಿರುತ್ತದೆ. ಈ ಹಬೆಯು ಆಕಾಶದಲ್ಲಿ ಎತ್ತರಕ್ಕೆ ಹೋದ ಬಳಿಕ, ಅಲ್ಲಿನ ಶೈತ್ಯದ ಸಂಬಂಧದಿಂದ ಪುನಃ ನೀರಿನ ಸಣ್ಣ ತುಂತುರಾಗಿ ನಮ್ಮ ಕಣ್ಣಿಗೆ ಕಾಣಿಸಿಕೊಳ್ಳುತ್ತದೆ ; ಇದೇ ಮೋಡವು. ಈ ಮೋಡವು ಬಹಳ ಭಾರವಾಗಿ ಆಕಾಶದಲ್ಲಿ ತೇಲಲಾರದೆಹೋದರೆ, ಅದು ಕರಗಿ ಕೆಳಗೆ ನೀರಾಗಿ ಬೀಳುತ್ತದೆ. ಇದೇ ಮಳೆ. ನೆಲದಮೇಲೆ ಬಿದ್ದ ಮಳೆಯ ನೀರು ಹರಿದು ಕೆರೆಕಟ್ಟೆಗಳಲ್ಲೆಲ್ಲಾ ತುಂಬಿಕೊಳ್ಳುತ್ತದೆ. ನೆಲದೊಳಗಿಳಿದ ನೀರು ಬುಗ್ಗೆಯಿಂದ ಹೊರಟು ಹೊಳೆಯಾಗಿ ಹರಿಯುತ್ತದೆ. ಆದುದರಿಂದ ಸಮುದ್ರದ ನೀರೇ ಪ್ರಪಂಚದ ನೀರಿಗೆಲ್ಲಾ ಆಧಾರವಾಗಿದೆ ಎನ್ನಬಹುದು.

ಸಮುದ್ರದ ನೀರು ಹಬೆಯಾಗುವಾಗ ಅದರಲ್ಲಿರುವ ಉಪ್ಪು ಹಿಂದೆ ನಿಂತುಬಿಡುತ್ತದೆ. ಆದುದರಿಂದ ಮಳೆಯ ನೀರು ಸಿಹಿಯಾಗಿರುತ್ತದೆ.

ಪ್ರಪಂಚದಲ್ಲಿರುವ ನೀರು ಮೊದಲು ಸಮುದ್ರದಿಂದ ಹಬೆಯಾಗಿ ಮೇಲಕ್ಕೆ ಎದ್ದು ಮೋಡವಾಗುತ್ತದೆ. ಬಳಿಕ ಮಳೆಯಾಗಿ ಹರಿದು ತಿರುಗಿ ಸಮುದ್ರಕ್ಕೆ ಹೋಗಿ ಸೇರು

ತ್ತದೆ. ಹೀಗೆ ನೀರು ಒಂದುಕಡೆಯಿಂದ ಇನ್ನೊಂದುಕಡೆಗೆ ಒಂದಲ್ಲ ಒಂದು ಬಗೆಯಾಗಿ ಸುತ್ತುತ್ತಾ ಇರುತ್ತದೆ.

ಪ್ರಶ್ನೆಗಳು.

ಸಾಗರವೆಂದರೇನು ? ಯಾವುದನ್ನು ತೀರವೆಂದು ಕರೆಯುತ್ತಾರೆ ? ಖಾರಿ ಯಾವುದು ? ಕೊಲ್ಲಿಯು ಯಾವುದು ? ಯಾವ ಜಲಭಾಗಕ್ಕೆ ಜಲಸಂಧಿ ಯೆಂದು ಹೆಸರು ? ಬಂದರ್ ಎಂದರೇನು ? ಬಂದರಿನಲ್ಲಿ ಏನು ನಿಲ್ಲುತ್ತದೆ ? ಸಮುದ್ರದಿಂದ ಆಗುವ ಪ್ರಯೋಜನಗಳು ಯಾವುವು ? ಉಪ್ಪನ್ನು ಹೇಗೆ ಮಾಡುತ್ತಾರೆ ? ಉಪ್ಪಿನ ಮೋರಿ ಎಂದರೇನು ? ಮೋಡವು ಹೇಗೆ ಆಗುತ್ತದೆ ? ಮಳೆ ಬೀಳುವ ಕ್ರಮ ಹೇಗೆ ?

---

## ೧೯. ಜಲವಿಭಾಗಗಳು.

ಮಳೆ ಹೊಯ್ಯುವುದನ್ನು ನೀವೆಲ್ಲಾ ನೋಡಿದ್ದೀರಷ್ಟೆ ? ಆಗ ಏನೇನಾಗುತ್ತದೆ ? ಆಗ ಮನೆಯಮೇಲೆ ಬೀಳುವ ಮಳೆಯ ನೀರು ಹೆಂಚುಗಳಿಂದ ಉರುಳಿ ಕೆಳಕ್ಕೆ ಸುರಿಯುತ್ತದೆ. ಈ ನೀರೂ, ಬೀದಿಯಲ್ಲಿ ಬೀಳುವ ನೀರೂ, ಸೇರಿ ನೆಲದಲ್ಲಿ ತಗ್ಗಾದಕಡೆ ಹರಿದುಹೋಗಿ ಒಂದು ಹಳ್ಳಕ್ಕೆ ಬೀಳುತ್ತವೆ. ನೆಲದಮೇಲೆ ಬಿದ್ದ ನೀರು ಸ್ವಲ್ಪಮಟ್ಟಿಗೆ ನೆಲದೊಳಕ್ಕೂ ಇಳಿಯುತ್ತದೆ.


ಹೀಗೆಯೇ ಬೆಟ್ಟಗಳಮೇಲೆಯೂ, ದೋರೆಗಳಮೇಲೆಯೂ, ಬೀಳುವ ಮಳೆಯ ನೀರಿನಲ್ಲಿ ಸ್ವಲ್ಪ ಭಾಗವು ಉರುಳಿ ಹಳ್ಳದಕಡೆಗೆ ಹರಿಯುತ್ತದೆ. ಈ ನೀರು ಕೆಲವುವೇಳೆ ಬಲು ದೊಡ್ಡದಾದ ಹಳ್ಳಗಳಲ್ಲಿ ತಂಗುತ್ತದೆ. ಅಂತಹವುಗಳಿಗೆ ಕೆಲವುಕಡೆ ಅನುಕೂಲವಾದ ಸೋಪಾನವನ್ನು ಕಟ್ಟುವರು. ಅದಕ್ಕೆ ಕೊಳಗಳೆಂದೂ, ಸರೋವರಗಳೆಂದೂ, ಹೆಸರು.

ಕೆಲವುವೇಳೆ ದೋರೆಗಳಿಂದ ಉರುಳಿಬರುವ ನೀರಿಗೆ ಅಡ್ಡವಾಗಿ ಏರಿಗಳನ್ನು ಕಟ್ಟಿ ಅದನ್ನು ತಡೆದು ನಿಲ್ಲಿಸುತ್ತಾರೆ. ಇವೇ ಕೆರೆಗಳು.

ಬೆಟ್ಟಗುಡ್ಡಗಳ ಮೇಲಿಂದ ಉರುಳಿ ಹೋಗುವ ನೀರು ಹೋಗುತ್ತ, ಉಳಿದ ಭಾಗವು ನಿಧಾನವಾಗಿ ನೆಲದ ಒಳಕ್ಕೆ ಇಳಿಯುತ್ತದೆ. ಈ ನೀರು ಸ್ವಲ್ಪದೂರ ಒಳಗಿಳಿದ ಬಳಿಕ ಒಂದೊಂದುಕಡೆ ಇದಕ್ಕೆ ಅಡ್ಡವಾಗಿ ಒಂದು ಪದರ ಬಂಡೆಯೋ ಮಣ್ಣೋ ಅಥವಾ

ಬಂಡೆಯೋ ಸಿಕ್ಕಿಬಿಡುತ್ತದೆ. ಆಗ ಆ ನೀರು ಅಲ್ಲಿಂದ ಕೆಳಕ್ಕೆ ಇಳಿಯಲಾರದೆ ಅಲ್ಲಿಯೇ ತಂಗುತ್ತದೆ. ಹೀಗೆ ತಂಗಿದ ನೀರು ಬೆಟ್ಟಗುಡ್ಡಗಳ ಪಕ್ಕಗಳಲ್ಲಿ ಕಲ್ಲು ಸಂದುಗಳಲ್ಲಿ ಹೊರಗೆ ಜಿನುಗುತ್ತಿರುವುದು. ಹೀಗೆ ಜಿನುಗಿ ಹರಿಯುವ ನೀರಿಗೆ ಬುಗ್ಗೆ ಎಂದು ಹೆಸರು. ಬುಗ್ಗೆಯ ನೀರು ಹಳ್ಳಕ್ಕೆ ಬಿದ್ದು ಹರಿಯುವಾಗ ಬೇರೆ ಬುಗ್ಗೆಗಳ ನೀರು ಬಂದು ಅದರೊಡನೆ ಸೇರುತ್ತದೆ. ಹೀಗೆ ಸೇರಿದ ನೀರು ಹೊಳೆಯಾಗಿ ಮುಂದೆ ಹರಿದು ಹೋಗುತ್ತದೆ.

ಎತ್ತರದಿಂದ ತಗ್ಗಿಗೆ ಹರಿಯುತ್ತಿರುವ ಇಂತಹ ಸಿಹಿನೀರಿನ ದೊಡ್ಡ ಪ್ರವಾಹಕ್ಕೆ ಹೊಳೆ ಅಥವಾ ನದಿ ಎಂದು ಹೆಸರು.




ನದೀ ಪಾತ್ರ.

ನದಿಯು ಹುಟ್ಟುವ ಸ್ಥಳಕ್ಕೆ ನದಿಯ ಉದ್ಗಮ ಅಥವಾ ಉತ್ಪತ್ತಿಸ್ಥಾನ ಎಂದು ಹೆಸರು. ‘ ಉದ್ಗಮ ’ ಎಂದರೆ ಮೇಲಕ್ಕೆ ಬರುವ ಸ್ಥಳ ಎಂದು ಅರ್ಥ.

ನದಿಯಲ್ಲಿ ನೀರು ಹರಿಯುವ ಹಳ್ಳಕ್ಕೆ ನದಿಯ ಪಾತ್ರ ಎಂದು ಹೆಸರು. ನದಿಗೆ ಸಮೀಪವಾಗಿ ಎರಡಂಚಿನಲ್ಲಿಯೂ ಇರುವ ಭೂಮಿಗೆ ನದಿಯ ದಡ ಅಥವಾ ತೀರ ಎಂದು ಹೆಸರು. ನದಿ ಹರಿಯುವ ಕಡೆಗೆ ಮುಖಮಾಡಿ ನಿಂತುಕೊಂಡು ನಾವು ನೋಡಿದರೆ, ನಮ್ಮ ಬಲಗಡೆಯೇ ನದಿಯ ಬಲಗಡೆ ; ನಮ್ಮ ಎಡಗಡೆಯೇ ನದಿಯ ಎಡಗಡೆ.

ಕೆಲವು ನದಿಗಳು ಇನ್ನೊಂದು ನದಿಗೆ ಹೋಗಿ ಬೀಳುವುದುಂಟು. ಇಂತಹವುಗಳಿಗೆ ಉಪನದಿಗಳೆಂದು ಹೆಸರು.

ಕೊಳ, ಕೆರೆ, ನದಿ, ಇವುಗಳಲ್ಲೆಲ್ಲಾ ಸಿಹಿನೀರು ಇರುತ್ತದೆ.

ಬೆಟ್ಟಗುಡ್ಡಗಳಿರುವ ಪ್ರಾಂತದ ನೆಲವು ಕಡಿದಾಗಿರುತ್ತದೆ; ಆದುದರಿಂದ ನದಿಯು ಅಲ್ಲಿ ಬಹು ವೇಗವಾಗಿ ಹರಿಯುತ್ತದೆ. ಅಲ್ಲಿ ಹರಿಯುವಾಗ ಅದು ಒಂದೊಂದುವೇಳೆ ಬಂಡೆಯ ಮೇಲೆ ಹರಿದು ಬಂದು, ಕಡಿದಾಗಿರುವ ಅದರ ಪಕ್ಕದಲ್ಲಿ ಕೆಳಕ್ಕೆ ಧುಮುಕುತ್ತದೆ.

ಹೀಗೆ ನೀರು ಎತ್ತರದಿಂದ ಕೆಳಕ್ಕೆ ಧುಮುಕುತ್ತಿದ್ದರೆ ಅದನ್ನು ಜಲಪಾತ ಎನ್ನುತ್ತಾರೆ. 'ಜಲಪಾತ' ಎಂದರೆ ನೀರಿನ ಬೀಳುವಿಕೆ ಎಂದು ಅರ್ಥ.



ನಮ್ಮ ಸೀಮೆಯಲ್ಲಿ ಶಿವನಸಮುದ್ರದ ಬಳಿಯಲ್ಲಿ ಗಗನಚುಕ್ಕಿ, ಭರಚುಕ್ಕಿಗಳೆಂಬ ಜಲಪಾತಗಳಿವೆ.

ಬೆಟ್ಟಗುಡ್ಡಗಳಿಂದ ಇಳಿದ ಬಳಿಕ ನದಿಯ ವೇಗವು ಸ್ವಲ್ಪ ಕಡಿಮೆಯಾಗುತ್ತದೆ; ಇಲ್ಲಿಯ ನೆಲವು ವಿಶೇಷವಾಗಿ ಇಳಿಜಾರಾಗಿಲ್ಲದೆ ಮಟ್ಟವಾಗಿದ್ದರೆ, ಇನ್ನೂ ಕಡಿಮೆಯಾಗುತ್ತದೆ. ನದಿಯು ಇಳಿಜಾರುಭೂಮಿಯನ್ನು ದಾಟಿ ಬಳಿಕ ಮಟ್ಟವಾದ ಭೂಮಿಗೆ ಬರುತ್ತದೆ. ಇಲ್ಲಿ ಅದು ಹಾವಿನಂತೆ ಡೊಂಕುಡೊಂಕಾಗಿ ಬಾಗಿಕೊಂಡು ನಿಧಾನವಾಗಿ ಹರಿಯುತ್ತದೆ. ಮಟ್ಟವಾದ ಭೂಮಿಯಲ್ಲಿ ನೀರು ನಿಧಾನವಾಗಿ ಹರಿಯುವುದರಿಂದ, ಇಳಿಜಾರಿನಲ್ಲಿ ಹರಿಯುವುದಕ್ಕಿಂತಲೂ ಹೆಚ್ಚಾಗಿ ಜನರಿಗೆ ಉಪಯೋಗಕರವಾಗಿರುವುದು. ಹೀಗೆ ಹರಿದು ಕೊನೆಗೆ ಅದು ಸಮುದ್ರಕ್ಕೆ ಹೋಗಿ ಸೇರುತ್ತದೆ.

ನದಿಯು ಸಮುದ್ರಕ್ಕೆ ಬೀಳುವ ಕಡೆಗೂ, ಒಂದು ನದಿಯೊಡನೆ ಇನ್ನೊಂದು ನದಿಯು ಸೇರುವ ಸ್ಥಳಕ್ಕೂ 'ಸಂಗಮ' ಎಂದು ಹೆಸರು.

ಮಳೆಗಾಲದಲ್ಲಿ ಎಲ್ಲಾ ಹೊಳೆಗಳಲ್ಲಿಯೂ ಪ್ರವಾಹ ಬರುತ್ತದೆ. ಆಗ ನೀರೆಲ್ಲಾ ಕದಡಿ ಕೆಂಪಾಗುತ್ತದೆ. ಮಳೆಗಾಲ ಕಳೆದ ಬಳಿಕ ನೀರು ತಿಳಿಯಾಗಿ ತಗ್ಗುತ್ತಾ ಹೋಗಿ ಬೇಸಿಗೆಯಲ್ಲಿ ಬಹಳ ಕಡಿಮೆಯಾಗುತ್ತದೆ.


ನದಿಗಳಿಂದ ಜನರಿಗೆ ಎಷ್ಟು ಪ್ರಯೋಜನವಾಗುತ್ತದೆ, ನೋಡಿರಿ. ಅವು ಬೆಟ್ಟದಿಂದ ವೇಗವಾಗಿ ಬರುವಾಗ ತಮ್ಮ ದಡದಲ್ಲಿಯೂ, ಪಾತ್ರದಲ್ಲಿಯೂ, ಇರುವ ಮಣ್ಣನ್ನು ಸಡಲಿಸಿ ಕಿತ್ತು, ಹೊತ್ತುಕೊಂಡುಬಂದು ಮೈದಾನದಲ್ಲಿ ಹರಡುತ್ತವೆ. ಈ ಹೊಸ ಗೋಡಿನಿಂದ ಭೂಮಿಯು ಬಹಳ ಫಲವತ್ತಾಗುತ್ತದೆ. ಅವು ತಮ್ಮ ದಡದಲ್ಲಿ ವಾಸ ಮಾಡುವ ಜನರಿಗೂ, ಅವರ ದನಕರುಗಳಿಗೂ, ಕುಡಿಯುವುದಕ್ಕೆ ಸಿಹಿನೀರನ್ನು ಕೊಡುತ್ತವೆ. ಅಲ್ಲದೆ, ಗದ್ದೆಗಳಿಗೂ, ತೋಟಗಳಿಗೂ, ಹಾಯಿಸಿಕೊಳ್ಳುವುದಕ್ಕೂ ನೀರನ್ನು ಒದಗಿಸಿಕೊಡುತ್ತವೆ. ನದಿಗಳು ಆಳವಾಗಿದ್ದು ನಿಧಾನವಾಗಿ ಹರಿಯುವ ಎಡೆಯಲ್ಲಿ ದೋಣಿ, ಹಡಗು, ಮೊದಲಾದುವನ್ನು ನಡೆಸಿಕೊಂಡುಹೋಗಲು ಅನುಕೂಲವಾಗಿರುತ್ತವೆ. ಈ ಹಡಗುಗಳಲ್ಲಿ ಜನರು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸರಾಗವಾಗಿ ಪಯಣ ಮಾಡಬಹುದು; ಬೇಕಾದ ಸರಕುಗಳನ್ನು ಸಾಗಿಸಲೂಬಹುದು. ಜಲಪಾತಗಳಲ್ಲಿ ಬೀಳುವ ನೀರಿನಿಂದ ಯಂತ್ರಗಳನ್ನು ತಿರುಗಿಸಿ ಅನೇಕ ಕಾರ್ಯಗಳನ್ನು ಮಾಡಿಸಿಕೊಳ್ಳಲೂ ಬಹುದು. ಶಿವನಸಮುದ್ರದ ಬಳಿ ಇರುವ ಜಲಪಾತದಲ್ಲಿ ಯಂತ್ರವಿಟ್ಟು ಅಲ್ಲಿ ಉಂಟಾಗುವ ಶಕ್ತಿಯಿಂದ ಕೋಲಾರದ ಚಿನ್ನದ ಗಣಿಗಳಲ್ಲಿ ಕೆಲಸ ಮಾಡಿಸುತ್ತಾ ಇದ್ದಾರೆ; ಮತ್ತು ಬೆಂಗಳೂರು, ಮೈಸೂರುಗಳಲ್ಲಿ ರಾತ್ರಿಯವೇಳೆ ದೀಪವನ್ನು ಹಚ್ಚುತ್ತಾರೆ.

## ಪ್ರಶ್ನೆಗಳು.

ನದಿಯು ಹುಟ್ಟುವ ಸ್ಥಳಕ್ಕೆ ಏನೆಂದು ಹೆಸರು? ನಮ್ಮ ಸೀಮೆಯಲ್ಲಿರುವ ಜಲಪಾತಗಳಾವುವು? ಜಲಪಾತವೆಂದರೇನು? ನದಿಗಳಿಂದ ಜನರಿಗೆ ಉಂಟಾಗುವ ಪ್ರಯೋಜನಗಳು ಯಾವುವು?

# ೨೦. ಭೂಗೋಳ.

ಹಿಂದೆ ಭೂಮಿಯಲ್ಲಿ ಮೂರು ಭಾಗ ನೀರು, ಒಂದು ಭಾಗ ನೆಲ ಎಂದು ನಾವು ಗೊತ್ತುಮಾಡಿಕೊಂಡೆವಲ್ಲವೆ; ಈ ನೆಲದ ಭಾಗವು ಎಲ್ಲಿ ಇದೆ? ಎಲ್ಲಾ ಒಟ್ಟಾಗಿ ಒಂದೇ ಕಡೆ ಇದೆಯೆ? ಇಲ್ಲವೆ ಅಲ್ಲಲ್ಲಿ ಚದುರಿ ಇದೆಯೆ? ಎಂಬುದನ್ನು ಈಗ ನೋಡೋಣ. ಇದು ಗೋಳಾಕಾರವಾದ ಭೂಮಿ. ಈ ಚಿತ್ರದಲ್ಲಿ ನೋಡಿ. ನೆಲವಿರುವ ಎಡೆಯನ್ನೂ, ನೀರಿರುವ ಸ್ಥಳವನ್ನೂ ಚೆನ್ನಾಗಿ ತೋರಿಸುವರು. ಈ ಗೋಳವನ್ನು ಮಧ್ಯಕ್ಕೆ ಸಮಭಾಜಕವೃತ್ತದಲ್ಲಿ ಸರಿಯಾಗಿ ಕೊಯ್ದು ಎರಡು ಹೋಳು ಮಾಡಿದರೆ, ಮೇಲಣ ಅರ್ಧದಲ್ಲಿ ಎಂದರೆ ಉತ್ತರಾರ್ಧದಲ್ಲಿ ಭೂಭಾಗವು ಹೆಚ್ಚಾಗಿಯೂ, ದಕ್ಷಿಣಾರ್ಧದಲ್ಲಿ ಭೂಭಾಗವು ಕಡಿಮೆಯಾಗಿಯೂ, ಇರುವುದು.




ಪಶ್ಚಿಮಾರ್ಧ ಪೂರ್ವಾರ್ಧ

ಗೋಳಗಳು.

ಗುಂಡಗಿರುವ ಗೋಳವನ್ನು ಬರೆದು ತೋರಿಸುವಾಗ ಹಿಂದುಗಡೆಯ ಅರ್ಧವನ್ನು ಎಡಗಡೆ ಬರೆದು ತೋರಿಸುವರು. ಹೀಗೆ ಬರೆದ ಭೂಪಟದಲ್ಲಿ ಬಲಗಡೆಯ ಭಾಗವನ್ನು ಪೂರ್ವಾರ್ಧಗೋಳವೆಂತಲೂ, ಎಡಗಡೆಯ ಭಾಗವನ್ನು ಪಶ್ಚಿಮಾರ್ಧಗೋಳವೆಂತಲೂ, ಕರೆಯುವರು. ಈಗ ನೋಡಿ ಹೇಳಿರಿ. ಭೂಭಾಗವು ಪೂರ್ವಾರ್ಧಗೋಳದಲ್ಲಿ ಹೆಚ್ಚಾಗಿರುವುದೋ, ಪಶ್ಚಿಮಾರ್ಧಗೋಳದಲ್ಲಿ ಹೆಚ್ಚಾಗಿರುವುದೋ?

ಈಗ ಪೂರ್ವಾರ್ಧಗೋಳದಲ್ಲಿರುವ ಭೂಭಾಗದಲ್ಲಿ ನಾಲ್ಕು ಖಂಡಗಳೂ, ಪಶ್ಚಿಮಾರ್ಧಗೋಳದಲ್ಲಿ ಒಂದು ಖಂಡವೂ ಇರುವುವು. ಇವುಗಳ ಹೆಸರು ಮುಂದಿನ ಪಾಠದಲ್ಲಿ ತಿಳಿಯಬರುವುದು.

ಈ ಗೋಳಗಳಲ್ಲಿ ದೊಡ್ಡ ಜಲಭಾಗವಾದ ಸಾಗರಗಳೂ ಕಾಣಬರುತ್ತಿರುವುವು. ಅವುಗಳು ಯಾವುವು ಎಂಬುದನ್ನು ಮುಂದೆ ತಿಳಿಯಬಹುದು.

---

## ೨೧. ಭೂಗೋಳ.

ಈಗ ಯಾವುದಾದರೊಂದು ಭೂಗೋಳದ ನಕ್ಷೆಯನ್ನು ಪರೀಕ್ಷಿಸೋಣ. ಗುಂಡಗಿರುವ ವಸ್ತುವನ್ನು ಬರೆದು ತೋರಿಸುವಾಗ ಹಿಂದುಗಡೆಯ ಅರ್ಧವು ಮರೆಸಿಹೋಗುತ್ತದೆಯಷ್ಟೆ; ಈ ಅರ್ಧವನ್ನು ತೋರಿಸುವುದಕ್ಕಾಗಿ ಭೂಮಿಯನ್ನು ಎರಡಾಗಿ ಕೊಯ್ದು ಹಾಗೆ ಮಾಡಿ ಹಿಂದುಗಡೆಯ ಅರ್ಧಗೋಳವನ್ನು ಎಡಗಡೆಯಲ್ಲಿ ಬರೆದಿರುತ್ತಾರೆ.

ಇವುಗಳಲ್ಲಿ ನಮ್ಮ ಬಲಗೈಕಡೆ ಕಾಣಿಸುವ ಅರ್ಧಕ್ಕೆ ಪೂರ್ವಾರ್ಧಗೋಳವೆಂದೂ, ಎಡಗೈಕಡೆ ಕಾಣಿಸುವ ಅರ್ಧಕ್ಕೆ ಪಶ್ಚಿಮಾರ್ಧಗೋಳವೆಂದೂ ಹೆಸರು.

ಭೂಪಟದಲ್ಲಿ ಸಾಮಾನ್ಯವಾಗಿ ನೀಲಿಯಬಣ್ಣ ಹಾಕಿರುವ ಭಾಗವು ಸಮುದ್ರವನ್ನು ತೋರಿಸುತ್ತದೆ. ಬೇರೆ ಬೇರೆ ಬಣ್ಣಗಳು ಹಾಕಿರುವ ಭಾಗಗಳು ಭೂಮಿಯನ್ನು ತೋರಿಸುತ್ತವೆ.

ಪೂರ್ವಾರ್ಧಗೋಳದಲ್ಲಿ ಏನೇನಿವೆ? ಉತ್ತರದಲ್ಲಿ ಎಡಗಡೆ ಯೂರೋಪ್, ಬಲಗಡೆ ಏಷ್ಯ; ದಕ್ಷಿಣದಲ್ಲಿ ಎಡಗಡೆ ಆಫ್ರಿಕ, ಬಲಗಡೆ ದೂರದಲ್ಲಿ ಆಸ್ಟ್ರೇಲಿಯ ಎಂಬ ಭೂಭಾಗಗಳಿವೆ.

ಪಶ್ಚಿಮಾರ್ಧಗೋಳದಲ್ಲಿ ಏನೇನಿವೆ? ಉತ್ತರದಲ್ಲಿ, ಉತ್ತರ ಅಮೇರಿಕ; ದಕ್ಷಿಣದಲ್ಲಿ, ದಕ್ಷಿಣ ಅಮೇರಿಕ ಎಂಬ ಭೂಭಾಗಗಳಿವೆ.

ಭೂಮಿಯ ಇಂತಹ ದೊಡ್ಡ ಭಾಗಗಳಿಗೆ ಖಂಡ ಎಂದು ಹೆಸರು. 'ಖಂಡ' ಎಂದರೆ ಭಾಗ ಎಂದು ಅರ್ಥ. ಆದುದರಿಂದ ಇವುಗಳಿಗೆ ಯೂರೋಪ್ ಖಂಡ, ಏಷ್ಯಾ ಖಂಡ, ಆಫ್ರಿಕಾ ಖಂಡ, ಆಸ್ಟ್ರೇಲಿಯ ಖಂಡ, ಅಮೇರಿಕಾ ಖಂಡ ಎಂದು ಹೆಸರಾಯಿತು. ಹೀಗೆ ಭೂಮಿಯಲ್ಲಿ ಐದು ಖಂಡಗಳಿವೆ.

ಭೂಮಿಯಲ್ಲಿ ಬೇರೆ ಬೇರೆ ಭಾಗ ಮಾಡಿ ಹೆಸರಿಟ್ಟಿರುವಂತೆ ನೀರಿನಲ್ಲಿಯೂ ಭಾಗ ಮಾಡಿ ಒಂದೊಂದು ಭಾಗಕ್ಕೂ ಬೇರೆ ಬೇರೆ ಹೆಸರಿಟ್ಟಿದ್ದಾರೆ.

ಭೂಗೋಳದ ಉತ್ತರದಲ್ಲಿರುವ ಸಮುದ್ರಕ್ಕೆ ಉತ್ತರಸಾಗರವೆಂದೂ, ದಕ್ಷಿಣದಲ್ಲಿ

ರುವುದಕ್ಕೆ ದಕ್ಷಿಣಸಾಗರವೆಂದೂ ಹೆಸರು. ಅಫ್ರಿಕಾ ಖಂಡಕ್ಕೂ, ಅಮೇರಿಕಾ ಖಂಡಕ್ಕೂ ನಡುವೆ ಅಟ್ಲಾಂಟಿಕ್ ಸಾಗರವಿದೆ. ಏಷ್ಯಾ ಖಂಡಕ್ಕೂ, ಅಮೇರಿಕಾ ಖಂಡಕ್ಕೂ ಮಧ್ಯೆ ವಿಶಾಲವಾದ ಪೆಸಿಫಿಕ್ ಸಾಗರವಿದೆ. ಏಷ್ಯಾ ಖಂಡಕ್ಕೆ ದಕ್ಷಿಣದಲ್ಲಿ ಅಫ್ರಿಕಾ ಖಂಡಕ್ಕೂ ಆಸ್ಟ್ರೇಲಿಯಾ ಖಂಡಕ್ಕೂ ನಡುವೆ ಹಿಂದೂಸಾಗರವಿದೆ. ಹೀಗೆ ಭೂಗೋಳದಲ್ಲಿರುವ ಜಲಭಾಗಗಳನ್ನು ಐದು ಸಾಗರಗಳಾಗಿ ವಿಂಗಡಿಸಿದ್ದಾರೆ.

ಸೂಚನೆ.—ಉಪಾಧ್ಯಾಯರು ಮಕ್ಕಳಿಗೆ ಈ ಪಾಠವನ್ನು ಭೂಪಟದಮೇಲೆ ಬೋಧಿಸಬೇಕು. ಖಂಡಗಳ ಮತ್ತು ಸಾಗರಗಳ ಹೆಸರುಗಳನ್ನೂ, ಅವು ಇರುವ ದಿಕ್ಕುಗಳನ್ನೂ, ಅವುಗಳ ಮೇರೆಗಳನ್ನೂ, ಮಕ್ಕಳಿಂದಲೇ ಹೇಳಿಸಬೇಕು.

## ಪ್ರಶ್ನೆಗಳು.

ಗುಂಡಾಗಿರುವ ಪದಾರ್ಥದ ಎಲ್ಲಾ ಭಾಗವನ್ನೂ ಚಿತ್ರದಲ್ಲಿ ಬರೆದು ತೋರಿಸಬಹುದೋ? ಹಾಗೆ ತೋರಿಸುವಾಗ ಯಾವ ಭಾಗವು ಮರೆಸಿಹೋಗುತ್ತದೆ? ಆ ಭಾಗವನ್ನು ಹೇಗೆ ತೋರಿಸಬಹುದು? ಅರ್ಧಗೋಳ ಎಂದರೇನು? ಎಷ್ಟು ಅರ್ಧಗೋಳಗಳಿವೆ? ಅವುಗಳಿಗೆ ಹೆಸರೇನು? ಪೂರ್ವಾರ್ಧಗೋಳವೆಂದರೇನು? ಪಶ್ಚಿಮಾರ್ಧಗೋಳವನ್ನು ತೋರಿಸಿರಿ. ಭೂಪಟದಲ್ಲಿ ಭೂಮಿ ಇರುವ ಭಾಗವನ್ನೂ, ಜಲವಿರುವ ಭಾಗವನ್ನೂ ತೋರಿಸಿರಿ. ಪೂರ್ವಾರ್ಧಗೋಳದಲ್ಲಿ ಎಷ್ಟು ಖಂಡಗಳಿವೆ? ಪಶ್ಚಿಮಾರ್ಧಗೋಳದಲ್ಲಿ ಯಾವ ಖಂಡವಿದೆ? ಏಷ್ಯಾ ಖಂಡದ ಮೇರೆಗಳನ್ನು ಹೇಳಿ. ಉತ್ತರಾರ್ಧಗೋಳ ಯಾವುದು? ಜಲಭಾಗ ಹೆಚ್ಚಾಗಿರುವುದು ಯಾವ ಗೋಳದಲ್ಲಿ?

---

# ೨೨. ಮೈಸೂರು ಸೀಮೆ.

ಈಗ ನಮ್ಮ ಸೀಮೆಯು ಯಾವ ಭೂಖಂಡದಲ್ಲಿ, ವಿಸ್ತಾರವಾದ ಯಾವ ದೇಶದಲ್ಲಿ ಇದೆ ಎಂಬುದನ್ನು ತಿಳಿದು, ಮುಂದೆ ಅಲ್ಲಿಯ ವಿಶೇಷ ವಿಷಯಗಳನ್ನು ತಿಳಿಯೋಣ.


ಪೂರ್ವಾರ್ಧಗೋಳದಲ್ಲಿ ಏಷ್ಯಾ ಖಂಡವಿರುವುದು. ಏಷ್ಯಾ ಖಂಡದ ದಕ್ಷಿಣ ಭಾಗದಲ್ಲಿ ಹಿಂದೂದೇಶ ಇರುವುದು. ಈ ದೇಶದ ದಕ್ಷಿಣಭಾಗದಲ್ಲಿ ನಾವು ವಾಸಮಾಡುವ ಮೈಸೂರು ಸೀಮೆ ಇದೆ.

೧. ಮೈಸೂರು ಸೀಮೆಯ ಮೇರೆಗಳು.—ಉತ್ತರದಲ್ಲಿ—ಧಾರವಾಡ, ಬಳ್ಳಾರಿ ಅನಂತಪುರ. ಪೂರ್ವದಲ್ಲಿ—ಕಡಪೆ, ಉತ್ತರ ಆರ್ಕಾಟು, ಶಾಲ್ಯ. ದಕ್ಷಿಣದಲ್ಲಿ—

ಕೊಯಮುತ್ತೂರು, ನೀಲಗಿರಿ, ಮೈನಾಡು. ಪಶ್ಚಿಮದಲ್ಲಿ—ಕೊಡಗು, ದಕ್ಷಿಣ ಕನ್ನಡ, ಉತ್ತರ ಕನ್ನಡ.

೨. ವಿಸ್ತೀರ್ಣ.—ಇದು ಪೂರ್ವಪಶ್ಚಿಮ ೨೯೦ ಮೈಲಿ ಉದ್ದವಾಗಿಯೂ, ದಕ್ಷಿಣೋತ್ತರ ೨೩೦ ಮೈಲಿ ಅಗಲವಾಗಿಯೂ ಇದೆ. ಇದರ ಚದರಳತೆ ೨೯,೪೭೫ ಚದರಮೈಲಿಗಳು.

೩. ಸ್ವಾಭಾವಿಕ ಲಕ್ಷಣಗಳು.—ಇದು ಮೆಟ್ಟಿ ಭೂಮಿ. ಸಮುದ್ರ ಮಟ್ಟದಿಂದ ಸುಮಾರು ೨,೦೦೦ ಅಡಿ ಎತ್ತರವಾಗಿದೆ. ಇದರ ಪಶ್ಚಿಮದಲ್ಲಿ ಬೆಟ್ಟಗಳು ಹೆಚ್ಚು.




ಏಷ್ಯಾ ಖಂಡದ ಭೂಪಟ.

ಈ ಭಾಗಕ್ಕೆ ಮಲೆನಾಡು ಎಂದು ಹೆಸರು. ಇಲ್ಲಿ ದೊಡ್ಡ ದೊಡ್ಡ ಕಾಡುಗಳಿವೆ. ಈ ಮಲೆನಾಡಿನಲ್ಲಿ ದೊಡ್ಡ ದೊಡ್ಡ ಗಿಡಗಾಡುಗಳಿರುವ ಎಡೆಯಲ್ಲಿ ಮಳೆ ಹೊಯ್ಯುವುದು ಹೆಚ್ಚು. ಈ ಭಾಗದಲ್ಲಿ ದೊಡ್ಡ ಪಟ್ಟಣಗಳೂ, ಜನರೂ ಇರುವುದು ಕಡಿಮೆ. ಈ ಸೀಮೆಯ ಉತ್ತರ, ಪೂರ್ವ, ದಕ್ಷಿಣಗಳಲ್ಲಿ ಬೆಟ್ಟಗಳು ಕಡಿಮೆ. ಸುಮಾರಾಗಿ ಮೈದಾನವಾಗಿರುವ ಈ ಭಾಗಕ್ಕೆ ಬಯಲುಸೀಮೆ ಎಂದು ಹೆಸರು. ಇಲ್ಲಿ ಜನರಿಗೆ ವಸತಿಯು

ಹೆಚ್ಚು, ಆದುದರಿಂದ ಜನರೂ ಬಲುಮಂದಿ. ಕೆಲವು ದೊಡ್ಡ ದೊಡ್ಡ ಪಟ್ಟಣಗಳೂ ಇರುವುವು.

೪. ಪರ್ವತಗಳು.—ಈ ದೇಶದ ಬೆಟ್ಟಗಳು ದಕ್ಷಿಣೋತ್ತರವಾಗಿ ಸಾಲು ಸಾಲಾಗಿ ಹಬ್ಬಿಕೊಂಡಿವೆ. ಇವುಗಳನ್ನು ಪಶ್ಚಿಮದ ಸಾಲು, ಮಧ್ಯದ ಸಾಲು, ಪೂರ್ವದ ಸಾಲು ಎಂದು ಮೂರು ವಿಭಾಗ ಮಾಡಬಹುದು.

ಪಶ್ಚಿಮದ ಸಾಲೂ, ಅದಕ್ಕೆ ಸ್ವಲ್ಪ ಪೂರ್ವಕ್ಕೆ ಇನ್ನೊಂದು ಸಾಲೂ, ಕಡೂರು ಶಿವಮೊಗ್ಗೆ ಡಿಸ್ಟ್ರಿಕ್ಟುಗಳಲ್ಲಿ ದಕ್ಷಿಣೋತ್ತರವಾಗಿ ಹಬ್ಬಿವೆ. ಇವುಗಳಲ್ಲಿ ಕುದುರೆಮುಖ, ಬಾಬಾಬುಡನ್ ಬೆಟ್ಟ, ಮುಳ್ಳಯ್ಯನಗಿರಿ, ಕಲ್ಹತ್ತಗಿರಿ, ಇವು ಮುಖ್ಯವಾದುವು. ಮುಳ್ಳಯ್ಯನಗಿರಿಯೇ ಮೈಸೂರು ದೇಶದಲ್ಲಿ ಬಲು ಎತ್ತರವಾದ ಶಿಖರ. ಇದು ೬,೩೧೭ ಅಡಿ ಎತ್ತರವಿರುವುದು.

ಮಧ್ಯದಲ್ಲಿಯೂ ಎರಡು ಸಾಲು ಬೆಟ್ಟಗಳಿವೆ. ಇವು ದಕ್ಷಿಣೋತ್ತರವಾಗಿ ಮೈಸೂರು, ತುಮಕೂರು, ಚಿತ್ರದುರ್ಗ, ಡಿಸ್ಟ್ರಿಕ್ಟುಗಳ ಮೂಲಕ ಹಬ್ಬಿಕೊಂಡಿವೆ. ಇವುಗಳಲ್ಲಿ ಮೊದಲನೆಯ ಸಾಲಿನಲ್ಲಿ ಶಕುನಗಿರಿ, ಬೆಟ್ಟದಪುರದ ಗುಡ್ಡ; ಎರಡನೆಯ ಸಾಲಿನಲ್ಲಿ ಯದುಗಿರಿ ಅಥವಾ ಮೇಲುಕೋಟೆ, ಚಾಮುಂಡಿ ಬೆಟ್ಟ, ಗೋಪಾಲಸ್ವಾಮಿಯ ಬೆಟ್ಟ, ಇವು ಮುಖ್ಯವಾದುವು.

ಪೂರ್ವದ ಸಾಲು ಮೈಸೂರು ಡಿಸ್ಟ್ರಿಕ್ಟಿನ ಪೂರ್ವಭಾಗದಿಂದ ದಕ್ಷಿಣೋತ್ತರವಾಗಿ ಬೆಂಗಳೂರು, ಕೋಲಾರ, ಮತ್ತು ತುಮಕೂರು, ಈ ಡಿಸ್ಟ್ರಿಕ್ಟುಗಳಲ್ಲಿ ಹಬ್ಬಿಕೊಂಡಿವೆ. ಇದರಲ್ಲಿ ಶಿವಗಂಗೆ, ಸಾವನದುರ್ಗ, ನಂದಿದುರ್ಗ (೪,೮೫೧ ಅಡಿ ಎತ್ತರ), ಬ್ರಹ್ಮಗಿರಿ, ಅಂಬಾಜಿದುರ್ಗ, ಮುಡಿಮಡಗು (೪,೫೨೮ ಅಡಿ ಎತ್ತರ), ಇವು ಮುಖ್ಯವಾದುವು.

ಸೂಚನೆ.—(೧) ಮೈಸೂರು ಸೀಮೆಯ ಮೇರೆಗಳಲ್ಲಿ ಯಾವ ಯಾವುವು ಯಾವಯಾವ ಬ್ರಿಟಿಷ್ ಅಧಿಪತ್ಯಗಳಿಗೆ ಸೇರಿರುವುವು ಎಂಬುದನ್ನು ಬಾಲಕರಿಂದ ಉಪಾಧ್ಯಾಯರು ಹೇಳಿಸಬೇಕು.

(೨) ಸಮುದ್ರದ ಮಟ್ಟಕ್ಕಿಂತ ಈ ಸೀಮೆಯು ಸಾಮಾನ್ಯವಾಗಿ ೨,೦೦೦ ಅಡಿ ಎತ್ತರ ಎಂಬುದರ ಅಭಿಪ್ರಾಯವನ್ನು ಬಾಲಕರಿಗೆ ಗೊತ್ತುಮಾಡಿಕೊಡಬೇಕು.

---

## ೨೩. ಮೈಸೂರು ಸೀಮೆ.

೪. ನದಿಗಳು.—ಈ ದೇಶದ ನದಿಗಳೆಲ್ಲಾ ಪ್ರಾಯಶಃ ಪಶ್ಚಿಮದಿಂದ ಪೂರ್ವಕ್ಕೆ ಹರಿದು ಸಮುದ್ರಕ್ಕೆ ಹೋಗಿ ಬೀಳುತ್ತವೆ. ಇವುಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಬಹುದು. ಉತ್ತರದ ಗುಂಪಿನಲ್ಲಿ ತುಂಗಭದ್ರೆ ಮುಖ್ಯವಾದುದು; ಪೂರ್ವದ ಗುಂಪಿನಲ್ಲಿ ಉತ್ತರಪಿನಾಕಿನಿ, ಪಾಲಾರು, ದಕ್ಷಿಣಪಿನಾಕಿನಿ, ಎಂಬ ಮೂರು ನದಿಗಳು; ದಕ್ಷಿಣದಲ್ಲಿ ಕಾವೇರಿಯೇ ಮುಖ್ಯವಾದುದು. ಈ ನದಿಗಳಲ್ಲಿ ಮಳೆಗಾಲದಲ್ಲಿಯೇ ನೀರು ಹೆಚ್ಚು. ಬೇಸಿಗೆಯಲ್ಲಿ ಅನೇಕ ನದಿಗಳು ಬತ್ತಿಹೋಗುವುವು. ಸಾಮಾನ್ಯವಾಗಿ ಈ




ಮಾರೀಕಣಿವೆಯ ಕೆರೆ.

ನದಿಗಳು ಆಳವಾಗಿಲ್ಲ; ನಿಧಾನವಾಗಿ ಹರಿಯುವುವುಗಳಾಗಿಲ್ಲ. ಆದುದರಿಂದ ಇವು ವ್ಯಾಪಾರಾಭಿವೃದ್ಧಿಯಾಗುವಂತೆ ಹಡಗಿನ ಸಂಚಾರಕ್ಕೆ ಉಪಯೋಗವಾಗಿಲ್ಲ. ಕಡೆಗೆ ವ್ಯವಸಾಯಕ್ಕೆ ಅನುಕೂಲಿಸುವಂತೆ ಕಾಲುವೆಗಳನ್ನು ವಿಶೇಷವಾಗಿ ಕೊಡುವಂತೆಯೂ ಇಲ್ಲ. ಶರಾವತಿಯು ವಾಯುವ್ಯದಲ್ಲಿ ಹರಿದು ಗೇರುಸೊಪ್ಪೆಯಲ್ಲಿ ದೊಡ್ಡ ಜಲಪಾತವಾಗಿ ಕೆಳಗೆ ಧುಮುಕಿ ಮುಂದೆ ಪ್ರವಹಿಸಿ ಸಮುದ್ರಕ್ಕೆ ಹೋಗಿ ಸೇರುತ್ತದೆ.

ಉತ್ತರದಿಕ್ಕಿನ ನದಿಗಳು.— ತುಂಗಭದ್ರೆ–ತುಂಗ, ಭದ್ರಾ, ಎಂಬ ಎರಡು ನದಿಗಳು ಕಡೂರು ಡಿಸ್ಟ್ರಿಕ್ಟಿನಲ್ಲಿರುವ ವರಹಾಪರ್ವತದಲ್ಲಿ ಗಂಗಾಮೂಲವೆಂಬ ಸ್ಥಳದಲ್ಲಿ ಹುಟ್ಟಿ

ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಹರಿದು, ಕೂಡಲಿ ಎಂಬ ಕಡೆ ಒಂದಾಗಿ ಸೇರುತ್ತವೆ ; ಅಲ್ಲಿಂದ ಮುಂದೆ ಈ ಒಂದಾದ ನದಿಗೆ ತುಂಗಭದ್ರೆ ಎಂಬ ಹೆಸರು ಬರುತ್ತದೆ. ತುಂಗಭದ್ರೆಯು ಹರಿಹರದ ಬಳಿಯಲ್ಲಿ ಮೈಸೂರು ದೇಶವನ್ನು ಬಿಟ್ಟು ಮುಂದೆ ಹರಿದುಹೋಗಿ ಕೃಷ್ಣಾ ನದಿಯನ್ನು ಸೇರುತ್ತದೆ.

ವೇದಾವತಿ.—ಇದಕ್ಕೆ ಹಗರಿ ಎಂಬ ಹೆಸರೂ ಉಂಟು. ಇದು ಕಡೂರು ಡಿಸ್ಟ್ರಿಕ್ಟಿನಲ್ಲಿ ಬಾಬಾಬುಡನ್ ಬೆಟ್ಟದಲ್ಲಿ ಹುಟ್ಟಿ ಮಾರೀಕಣಿವೆಯ ಮೂಲಕ ಹರಿಯುತ್ತದೆ. ಈ ಕಣಿವೆಯಲ್ಲಿ ಸರ್ಕಾರದವರು ಲಕ್ಷಾಂತರ ರೂಪಾಯಿಗಳನ್ನು ಮುಚ್ಚಿಸಿ ಇದಕ್ಕೆ ಅಣೆಯನ್ನು ಕಟ್ಟಿಸಿರುವರು. ಇಲ್ಲಿ ತಡೆದು ಬಿಟ್ಟ ನೀರು ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಹರಿದು ಮೈಸೂರು ದೇಶವನ್ನು ಬಿಟ್ಟು ಮುಂದೆ ಹೋಗಿ, ತುಂಗಭದ್ರೆಗೆ ಸೇರುತ್ತದೆ.

ಪೂರ್ವದಿಕ್ಕಿನ ನದಿಗಳು.—ಈ ದಿಕ್ಕಿನಲ್ಲಿ ಮೂರು ನದಿಗಳಿವೆ. ಇವು ಮೂರೂ ಕೋಲಾರದ ಡಿಸ್ಟ್ರಿಕ್ಟಿನ ನಂದೀಬೆಟ್ಟದಲ್ಲಿ ಹುಟ್ಟಿ, ಪೂರ್ವಾಭಿಮುಖವಾಗಿ ಹರಿದು ಸಮುದ್ರಕ್ಕೆ ಸೇರುತ್ತವೆ.

ಉತ್ತರಪಿನಾಕಿನಿ.—ಇದು ನಂದೀದುರ್ಗದ ಬಳಿಯಲ್ಲಿ ಹುಟ್ಟಿ, ತುಮಕೂರು ಡಿಸ್ಟ್ರಿಕ್ಟಿನಲ್ಲಿ ಹರಿದು, ಮೈಸೂರು ಸೀಮೆಯನ್ನು ದಾಟಿ, ಕಣಿವೆಯ ಕೆಳಗೆ ಹರಿದುಹೋಗಿ ಸಮುದ್ರಕ್ಕೆ ಬೀಳುತ್ತದೆ. ಇದಕ್ಕೆ ಪೆನ್ನಾರ್ ಎಂದೂ ಹೆಸರುಂಟು.

ಪಾಲಾರ್.—ಇದಕ್ಕೆ ಕ್ಷೀರನದಿ ಎಂದೂ ಹೆಸರುಂಟು. ಇದು ನಂದೀಬೆಟ್ಟದಲ್ಲಿ ಹುಟ್ಟಿ, ಕೋಲಾರ ಡಿಸ್ಟ್ರಿಕ್ಟು ಮಾರ್ಗವಾಗಿ ಹರಿದು, ಮೈಸೂರು ಸೀಮೆಯನ್ನು ದಾಟಿ, ಕಣಿವೆಯ ಮಾರ್ಗವಾಗಿ ಹರಿದು, ಸಮುದ್ರಕ್ಕೆ ಸೇರುತ್ತದೆ.

ದಕ್ಷಿಣಪಿನಾಕಿನಿ.—ಇದಕ್ಕೆ ಪೊನ್ನಾರ್ ಎಂದು ಹೆಸರು. ಇದೂ ನಂದೀಬೆಟ್ಟದಿಂದ ಹೊರಟು, ಬೆಂಗಳೂರು, ಡಿಸ್ಟ್ರಿಕ್ಟು ಮಾರ್ಗವಾಗಿ ಹರಿದು, ಕಣಿವೆಯ ಕೆಳಗೆ ಹೋಗಿ ಸಮುದ್ರವನ್ನು ಸೇರುವುದು.

ನಂದೀಬೆಟ್ಟವು ಬಹಳ ಎತ್ತರವಾಗಿಯೂ ಇಲ್ಲ ; ಅದರಲ್ಲಿ ದಟ್ಟವಾದ ಕಾಡೂ ಇಲ್ಲ. ಆದುದರಿಂದ ಅಲ್ಲಿ ಹುಟ್ಟುವ ನದಿಗಳಲ್ಲಿ ಯಾವಾಗಲೂ ನೀರು ಹರಿಯುವ ಅನುಕೂಲತೆ ಸಾಲದು. ಇದರಿಂದ ಬೇಸಿಗೆಯ ಕಾಲದಲ್ಲಿ ಈ ನದಿಗಳಲ್ಲಿ ನೀರು ಬಹಳ ಕಡಿಮೆ.

ದಕ್ಷಿಣದಿಕ್ಕಿನ ನದಿಗಳು.—ಕಾವೇರಿ—ಇದು ಕೊಡಗು ಸೀಮೆಯ ಬ್ರಹ್ಮಗಿರಿಯಲ್ಲಿ ಹುಟ್ಟುತ್ತದೆ. ಇದೇ ತಲಕಾವೇರಿ ; ಬಳಿಕ ಅಲ್ಲಿಂದ ಹರಿದು, ಮೈಸೂರು ಸೀಮೆಗೆ

ಬಂದು ಚುಂಚನಕಟ್ಟೆಯ ಹತ್ತಿರ ೮೦ ಅಡಿ ಎತ್ತರದಿಂದ ಧುಮುಕುತ್ತದೆ; ಅಲ್ಲಿಂದ ಮುಂದೆ ಹರಿದು ಶ್ರೀರಂಗಪಟ್ಟಣದ ಬಳಿಯಲ್ಲಿ ಎರಡಾಗಿ ಕವಲೊಡೆದು, ಆ ಊರನ್ನು ಬಳಸಿ, ಪುನಃ ಒಂದಾಗಿ ಸೇರುತ್ತದೆ. ಬಳಿಕ ಮುಂದೆ ಹರಿದು, ಶಿವನಸಮುದ್ರದ ಹತ್ತಿರ ಪುನಃ ಕವಲೊಡೆದು, ಗಗನಚಕ್ಕಿ, ಭರಚಕ್ಕಿ ಎಂಬ ಎರಡುಕಡೆ ೩೦೦ ಅಡಿ ಎತ್ತರದಿಂದ ಕೆಳಕ್ಕೆ ಬಿದ್ದು, ಮೈಸೂರು ಸೀಮೆಯನ್ನು ದಾಟಿ ಹೋಗುತ್ತದೆ. ಅಲ್ಲಿಂದ ಮುಂದೆ ಮಟ್ಟವಾದ ಬಯಲು ಭೂಮಿಯಮೇಲೆ ಹರಿದು, ಅದನ್ನು ಫಲವತ್ತಾಗಿ ಮಾಡಿ ಸಮುದ್ರವನ್ನು ಸೇರುವುದು. ಇದಕ್ಕೆ ಮೈಸೂರು ದೇಶದಲ್ಲಿ ಬಲಗಡೆ ಲಕ್ಷ್ಮಣತೀರ್ಥ, ಕಪಿಲೆ, ಹೊನ್ನುಹೊಳೆ, ಎಂಬ ಉಪನದಿಗಳೂ; ಎಡಗಡೆಯಲ್ಲಿ ಹೇಮಾವತಿ, ಲೋಕಪಾವನಿ, ಕಡಂಬನದಿ, ಅರ್ಕಾವತಿ ಎಂಬ ಉಪನದಿಗಳೂ ಬಂದು ಬೀಳುತ್ತವೆ. ಇದಕ್ಕೆ ಅಲ್ಲಲ್ಲಿ ಅಣೆಗಳನ್ನು ಕಟ್ಟಿ ಕಾಲುವೆಗಳನ್ನು ತೆಗೆದಿರುವರು. ಈ ಅಣೆಗಳಲ್ಲಿ ಅತ್ಯಂತ ಪ್ರಸಿದ್ಧವಾದುದು ಕನ್ನಂಬಾಡಿ ಅಣೆ.

ಶರಾವತಿ.—ಇದು ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಹುಟ್ಟಿ ಮೈಸೂರು ಸೀಮೆಯ ಸರಹದ್ದಿನಲ್ಲಿ ಗೇರುಸೊಪ್ಪೆ ಎಂಬ ಕಡೆ ಸುಮಾರು ೯೦೦ ಅಡಿಯಷ್ಟು ಕೆಳಕ್ಕೆ ಧುಮುಕಿ, ಮುಂದೆ ಹರಿದು ಸಮುದ್ರಕ್ಕೆ ಹೋಗಿ ಸೇರುತ್ತದೆ.

ಸೂಚನೆ.—(೧) ಹಿಮ ಮುಸುಕಿದ ಬಲು ಎತ್ತರವಾದ ಪರ್ವತದಲ್ಲಿ ಹುಟ್ಟುವ ನದಿಗಳಲ್ಲಿ (ಹಿಮ ಕರಗಿ ನೀರಾಗಿ ಹರಿಯುವುದರಿಂದ) ಬೇಸಿಗೆಯಲ್ಲಿಯೂ ನೀರು ವಿಶೇಷವಾಗಿ ಹರಿಯುವುದೆಂಬುದನ್ನೂ, ಗಿಡಸೀಮೆಯಲ್ಲಿ ಮಳೆಯ ನೀರು ಭೂಮಿಯಲ್ಲಿ ನಿಧಾನವಾಗಿ ಇಳಿದು, ತಗ್ಗಾದ ಪ್ರದೇಶಗಳಲ್ಲಿ ಬುಗ್ಗೆಯಾಗಿ ಹೊರಟು, ಉಪನದಿಯಾಗಿ ದೊಡ್ಡ ನದಿಯನ್ನು ಸೇರುವುದರಿಂದ, ಗಿಡಸೀಮೆಗೆ ಸಮೀಪದಲ್ಲಿ ಹರಿಯುವ ನದಿಗಳಲ್ಲಿ ಬೇಸಿಗೆಯಲ್ಲಿಯೂ ನೀರು ಇರಬಹುದೆಂಬುದನ್ನೂ ಬಾಲಕರಿಗೆ ತಿಳಿಸಬೇಕು.

(೨) ಕನ್ನಡ ಎರಡನೆಯ ಪುಸ್ತಕದಲ್ಲಿ ಕೊಟ್ಟಿರುವ 'ಕಾವೇರಿ' ಎಂಬ ಪಾಠವನ್ನು ಓದಿ ಹೇಳುವುದು.

---


## ೨೪. ಮೈಸೂರು ಸೀಮೆ.

೬. ಜಲಪಸತಿ.—ಈ ದೇಶದಲ್ಲಿ ಕಾಲುವೆ, ಕೆರೆ, ತಲಪರಿಗೆ, ಬಾವಿ, ಇವುಗಳ ಮೂಲಕ ನೀರನ್ನು ಒದಗಿಸಿಕೊಳ್ಳುತ್ತಾರೆ.

ಕಾಲುವೆಗಳು.—ನದಿಗಳಿಗೆ ಅಲ್ಲಲ್ಲಿ ಅಣಕಟ್ಟುಗಳನ್ನು ಕಟ್ಟಿ ಕಾಲುವೆಗಳ

ಮೂಲಕ ನೀರನ್ನು ತೆಗೆದುಕೊಂಡು ಹೋಗಿ, ಗದ್ದೆಗಳಿಗೂ, ತೋಟಗಳಿಗೂ, ನೀರು ಹಾಯಿಸುತ್ತಾರೆ. ಇಂತಹ ಕಾಲುವೆಗಳು ಹಲವಿವೆ. ಇವುಗಳಿಗೆ ನಾಲೆಗಳೆಂದೂ ಹೆಸರು. ಮೈಸೂರು ಸೀಮೆಯು ಹಳ್ಳತಿಟ್ಟಾದ ಪ್ರದೇಶವಾದುದರಿಂದ ಕಾಲುವೆಗಳನ್ನು ಬಹುವಾಗಿ ತೆಗೆದು ಹೆಚ್ಚಾದ ಪ್ರಯೋಜನವನ್ನು ಪಡೆಯಲು ಅವಕಾಶವಿಲ್ಲ.

ಕೆರೆಗಳು.—ಈ ಸೀಮೆಯಲ್ಲಿ ಸುಮಾರು ೩೦,೦೦೦ ಕೆರೆಗಳಿವೆ. ಇವುಗಳಿಂದ ನೀರು ಹಾಯಿಸಿ ಪೈರು ಪಚ್ಚೆಗಳನ್ನು ಬೆಳೆಯುತ್ತಾರೆ. ಜಲವಸತಿ ಕಡಿಮೆಯಾದ ಬೆಂಗಳೂರು, ಕೋಲಾರ, ತುಮಕೂರು, ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿ ಇಂತಹ ಕೆರೆಗಳು ಬಹಳ ಉಪಯೋಗಕರವಾಗಿವೆ. ಈ ಸೀಮೆಯ ಕೆರೆಗಳಲ್ಲಿ ಮಾರೀಕಣಿವೆ ಕೆರೆ, ಸೂಳೆ ಕೆರೆ, ಮೋತೀ ತಲಾವ್, ಮುಂತಾದುವು ಮುಖ್ಯವಾದುವು.




ಸರಾಸರಿ ಮಳೆ.

ತಲಪರಿಗೆ.—ಕೆಲವು ಕಡೆಗಳಲ್ಲಿ ನೆಲವನ್ನು ತೋಡಿದರೆ ಮೇಲುಗಡೆಯಲ್ಲಿಯೇ ನೀರು ಉಕ್ಕಿಬರುತ್ತದೆ. ಇವುಗಳಿಗೆ ತಲಪರಿಗೆ ಎಂದು ಹೆಸರು. ಇವುಗಳ ನೀರನ್ನು ಕಾಲುವೆಗಳ ಮೂಲಕ ಸಾಗಿಸಿ ಗದ್ದೆಗಳಿಗೆ ಬಿಟ್ಟುಕೊಳ್ಳುತ್ತಾರೆ.

ಬಾವಿಗಳು.—ಕೆಲವುಕಡೆ ನೆಲವನ್ನು ಸ್ವಲ್ಪ ಆಳವಾಗಿ ತೋಡಿದ್ದರೆ ನೀರು ಬರುತ್ತದೆ. ಇವುಗಳಿಗೆ ಬಾವಿಗಳೆಂದು ಹೆಸರು. ಇವುಗಳ ನೀರನ್ನು ಕಪಿಲೆಗಳ ಅಥವಾ ಏತಗಳ ಮೂಲಕ ಎತ್ತಿ ನೀರು ಹಾಯಿಸಿಕೊಂಡು ಭೂಮಿಯನ್ನು ಸಾಗುವಳಿ ಮಾಡುವುದೂ ಉಂಟು.

೭. ವಾಯುಗುಣ.—ಮೈಸೂರು ದೇಶವು ಎತ್ತರವಾಗಿರುವುದರಿಂದ ಇಲ್ಲಿ ಸೆಕೆ ಕಡಿಮೆ. ಇಲ್ಲಿ ಮಳೆಗಾಲ, ಚಳಿಗಾಲ, ಬಿಸಿಲುಗಾಲ, ಎಂದು ವರುಷವನ್ನು ಮೂರು ವಿಭಾಗ ಮಾಡಬಹುದು, ಜೂನ್ ತಿಂಗಳಿಂದ ನವೆಂಬರ್ ವರೆಗೂ ಮಳೆಗಾಲ;

ಡಿಸೆಂಬರ್ ತಿಂಗಳಿಂದ ಫೆಬ್ರವರಿ ತಿಂಗಳ ಕೊನೆಯವರೆಗೂ ಚಳಿಗಾಲ; ಮಾರ್ಚಿ ಯಿಂದ ಮೇ ತಿಂಗಳ ಕೊನೆಯವರೆಗೂ ಬಿಸಿಲುಕಾಲ. ಮಲೆನಾಡುಗಳಲ್ಲಿ ಮಳೆ ಹೆಚ್ಚು. ಬಾಬಾಬುಡರ್ ಬೆಟ್ಟದಿಂದ ಈಶಾನ್ಯಕ್ಕೆ ಬರುತಬರುತ ಮಳೆ ಕಡಿಮೆ. ವೇದಾವತೀ ನದಿಯ ಎರಡು ಪಕ್ಕಗಳಲ್ಲಿಯೂ, ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿಯೂ, ಮಳೆ ಬಹಳ ಕಡಿಮೆ; ಉಳಿದ ಭಾಗಗಳಲ್ಲೆಲ್ಲಾ ತಕ್ಕಷ್ಟು ಮಳೆಯಾಗುತ್ತದೆ.

ಈ ದೇಶದ ಮಲೆನಾಡು ಸೀಮೆಯು ಪಶ್ಚಿಮಘಟ್ಟಕ್ಕೆ ಅತ್ಯಂತ ಸಮೀಪವಾಗಿರುವುದು. ಪಶ್ಚಿಮಘಟ್ಟದ ಶ್ರೇಣಿಯು ಎತ್ತರವಾಗಿರುವುದರಿಂದ ಬಿಸಿಲುಕಾಲದಲ್ಲಿ ಸಮುದ್ರದ ಮೇಲಿನಿಂದ ಬೀಸಿಕೊಂಡು ಬರುವ ಗಾಳಿಯನ್ನು ತಡೆದು, ಆ ಗಾಳಿಯಲ್ಲಿರುವ ನೀರಿನ ಆವಿಯನ್ನು ಮೋಡವಾಗಿ ಮಾಡಿ ಆಮೇಲೆ ಮಳೆಯಾಗಿ ಬೀಳಿಸುವುದು. ಮೋಡಗಳು ಈ ಬೆಟ್ಟಗಳನ್ನು ದಾಟಿ, ಬಯಲುಸೀಮೆಗೆ ಬರುವುದರೊಳಗಾಗಿ ಮಳೆಯೂ, ಗಾಳಿಯೂ ಬಹಳ ಕಡಿಮೆಯಾಗುವುವು.

೮. ವೃಕ್ಷಗಳು.—ಕಾಡುಗಳಲ್ಲಿ ತೇಗ, ಬೀಟೆ, ಮೊದಲಾದ ಮರಗಳೂ, ಬಿದಿರ ಹಿಂಡಲುಗಳೂ, ಅಲ, ಅರಳಿ, ಹಲಸು, ನೇರಳೆ, ಮುಂತಾದುವೂ ಬೆಳೆಯುತ್ತವೆ. ಶ್ರೀಗಂಧದ ಮರವೂ ವಿಶೇಷವಾಗಿದೆ.

೯. ಪ್ರಾಣಿಗಳು.—ಹುಲಿ, ಚಿರತೆ, ಕಾಡುಕೋಣ, ಆನೆ, ಮೊದಲಾದ ಮೃಗಗಳೂ, ಗಿಣಿ, ನವಿಲು, ಪಾರಿವಾಳ, ಮೊದಲಾದ ಹಕ್ಕಿಗಳೂ, ಬಗೆಬಗೆಯ ಹಾವುಗಳೂ, ದೊರಕುತ್ತವೆ. ಮೈಸೂರು ಸೀಮೆಯ ಅಮೃತಮಹಲ್ ದನಗಳು ಪ್ರಸಿದ್ಧವಾದುವು.

೧೦. ಬೆಳೆಗಳು.—ಗದ್ದೆಗಳಲ್ಲಿ ಬತ್ತ, ಕಬ್ಬು, ಇವುಗಳನ್ನು ಬೆಳೆಯುತ್ತಾರೆ. ಹೊಲಗಳಲ್ಲಿ ರಾಗಿ, ಜೋಳ, ಹುರುಳಿ, ಮೊದಲಾದುವನ್ನು ಪೈರುಮಾಡುತ್ತಾರೆ; ತೋಟಗಳಲ್ಲಿ ಬಾಳೆ, ತೆಂಗು, ಅಡಿಕೆ, ಕಾಫಿ, ಏಲಕ್ಕಿ, ಮೆಣಸು, ಮೊದಲಾದುವು ಆಗುತ್ತವೆ. ಹತ್ತಿ, ಹರಳು, ಹೊಗೆಯಸೊಪ್ಪು, ಹಿಪ್ಪಲಿನೇರಳೆ, ವೀಳೆಯದೆಲೆ, ಕಾಯಿಪಲ್ಯ, ರುಚಿಕರವಾದ ಫಲಗಳು, ಸುವಾಸನೆಯಾದ ಪುಷ್ಪಗಳು, ಇವೇ ಮೊದಲಾದುವನ್ನು ಬೆಳೆಯುತ್ತಾರೆ.

ಇಲ್ಲಿ ಜನರಿಗೆ ಅಕ್ಕಿ, ರಾಗಿ, ಜೋಳ, ಇವೇ ಮುಖ್ಯವಾದ ಆಹಾರವಾಗಿವೆ.

ಸೂಚನೆ.—ಮೈಸೂರು ಉಷ್ಣವಲಯದಲ್ಲಿದೆ ಎಂಬುದನ್ನು ತಿಳಿಸಿ ಅಲ್ಲಿಯ ಪ್ರಾಣಿಗಳನ್ನೂ, ಬೆಳೆಗಳನ್ನೂ ತಿಳಿಯಪಡಿಸುವುದು.

೧೧. ಖನಿಜಗಳು.—ಕೋಲಾರದ ಚಿನ್ನದ ಗಣಿಗಳಲ್ಲಿ ಚಿನ್ನವು ದೊರೆಯುತ್ತದೆ. ಇದಲ್ಲದೆ ಒಂದೆರಡುಕಡೆ ಕಬ್ಬಿಣದ ಅದಿರೂ, ಕಬ್ಬಿಣಕ್ಕೆ ಹದಕೊಟ್ಟು ಉಕ್ಕು ಮಾಡಲು ಅನುಕೂಲಸುವ 'ಮ್ಯಾಂಗನೀಸ್' ಎಂಬುದೂ, ಅಲ್ಪಸ್ವಲ್ಪ ಬೆಳ್ಳಿಯೂ ಸಹ ಸಿಕ್ಕುತ್ತವೆ.

---

## ೨೫. ಮೈಸೂರು ಸೀಮೆ.

೧೨. ಜನರು.—ಈ ರಾಜ್ಯದಲ್ಲಿ ಸುಮಾರು ೫೯ ಲಕ್ಷ ಪ್ರಜೆಗಳಿದ್ದಾರೆ. ಇವರಲ್ಲಿ ಹಿಂದೂ ಜನರೇ ವಿಶೇಷವಾಗಿದ್ದಾರೆ. ಉಳಿದವರಲ್ಲಿ ಮಹಮ್ಮದೀಯರೇ ಹೆಚ್ಚಾಗಿದ್ದಾರೆ. ಇವರಲ್ಲದೆ ಕಾಡುಗಳಲ್ಲಿ ಬೆಟ್ಟದ ಕುರುಬರು, ಜೇನುಕುರುಬರು, ಸೋಲಿಗರು, ಮೊದಲಾದ ಕಾಡುಜನಗಳಿದ್ದಾರೆ.

ಸೂಚನೆ.—ಕಾಡುಕುರುಬರ, ಲಂಬಾಣಿಯವರ ಉಡಿಗೆ ತೊಡಿಗೆಯ ಭಾವಚಿತ್ರಗಳನ್ನು ತೋರಿಸುವುದು.

೧೩. ಜೀವನ.—ಇಲ್ಲಿಯ ಜನರು ಮುಖ್ಯವಾಗಿ ವ್ಯವಸಾಯದಿಂದ ಜೀವನ ಮಾಡುತ್ತಾರೆ. ಪಟ್ಟಣಗಳಲ್ಲಿರುವವರಿಗೆ ವ್ಯಾಪಾರ, ಕೂಲಿ, ಇವುಗಳಿಂದ ಜೀವನ ನಡೆಯುತ್ತದೆ. ಇದಲ್ಲದೆ ಕೆಲವರು ಸೀರೆ, ಧೋತ್ರ, ಕಂಬಳಿ, ಮೊದಲಾದುವುಗಳ ನೆಯ್ಗೆ, ಕಿತ್ತಾಳೆ, ತಾಮ್ರದ ಕೆಲಸಗಳು, ಬಣ್ಣದ ಸಾಮಾನುಗಳು, ಗಂಧದಮರದ ಸಾಮಾನುಗಳು, ಇವುಗಳನ್ನು ಮಾಡಿ ಜೀವನ ಮಾಡುತ್ತಾರೆ. ಕೆಲವರು ರೇಷ್ಮೆ ಹುಳುಗಳನ್ನು ಸಾಕಿ ರೇಷ್ಮೆ ತಯಾರುಮಾಡುತ್ತಾರೆ. ಕೆಲವು ಮಂದಿ ಸರ್ಕಾರದ ನೌಕರಿಯಿಂದ ಜೀವಿಸುವರು.

೧೪. ಮಾರ್ಗಗಳು.—ಈ ದೇಶದಲ್ಲಿ ಮಾರ್ಗಗಳು ಚೆನ್ನಾಗಿವೆ. ದೊಡ್ಡ ದೊಡ್ಡ ಊರುಗಳಿಗೆ ಹೋಗುವ ಮಾರ್ಗಗಳಿಗೆ ಜಲ್ಲಿಹಾಕಿ ಗಟ್ಟನೆ ಮಾಡಿಸಿದ್ದಾರೆ. ಹಾದಿಯುದ್ದಕ್ಕೂ ಎರಡು ಕಡೆಯೂ ಸಾಲುಮರಗಳನ್ನು ಹಾಕಿಸಿದ್ದಾರೆ. ಪ್ರಯಾಣಿಕರು ಅಲ್ಲಲ್ಲಿ ಇಳಿದುಕೊಳ್ಳುವುದಕ್ಕಾಗಿ ಸತ್ರವೇ ಮೊದಲಾದ ಕಟ್ಟಡಗಳನ್ನು ಕಟ್ಟಿಸಿದ್ದಾರೆ. ಇದಲ್ಲದೆ ರೈಲುಮಾರ್ಗಗಳು ಇವೆ. ಬೆಂಗಳೂರು ಈ ರೈಲು ಮಾರ್ಗಗಳಿಗೆ ಮುಖ್ಯಸ್ಥಳವಾಗಿದೆ. ಒಂದು ಮೈಸೂರು ಮಾರ್ಗವಾಗಿ ಚಾಮರಾಜನಗರಕ್ಕೆ ಹೋಗುತ್ತದೆ; ಇನ್ನೊಂದು ಹಿಂದೂಪುರದ ಮಾರ್ಗವಾಗಿ ಹೋಗುತ್ತದೆ; ಮತ್ತೊಂದು ತುಮ

ಕೂರು, ಹುಬರ, ಇವುಗಳ ಮಾರ್ಗವಾಗಿ ಹೋಗುತ್ತದೆ. ಇದರ ಒಂದು ಶಾಖೆಯು ಬೀರೂರಿಂದ ಶಿವಮೊಗ್ಗೆಗೆ ಹೋಗುತ್ತದೆ. ಮದ್ರಾಸು ರೈಲು ಬೆಂಗಳೂರಿಂದ ಹೊರಟು ಕೋಲಾರ ಡಿಸ್ಟ್ರಿಕ್ಟಿನ ಬೌರಿಂಗ್‌ಪೇಟೆಯು ಮಾರ್ಗವಾಗಿ ಹೋಗುತ್ತದೆ. ಇವಲ್ಲದೆ ಮತ್ತೊಂದು ಬೌರಿಂಗ್‌ಪೇಟೆಯಿಂದ ಕೋಲಾರಕ್ಕೂ, ಬೌರಿಂಗ್‌ಪೇಟೆಯಿಂದ ಚಿನ್ನದ ಗಣಿಗೂ ಹೋಗುತ್ತದೆ.

೧೫. ವ್ಯಾಪಾರ.—ಈ ದೇಶದ ವ್ಯಾಪಾರವು ವಿಶೇಷವಾಗಿ ರೈಲು ಮೂಲಕ ನಡೆಯುತ್ತದೆ. ಇಲ್ಲಿಂದ ಹೊರಕ್ಕೆ ಅಕ್ಕಿ, ರಾಗಿ, ಆಲೂಗಡ್ಡೆ, ಅಡಿಕೆ, ಕೊಬ್ಬರಿ, ಕಾಫಿ, ಏಲಕ್ಕಿ, ಮೆಣಸು, ಶ್ರೀಗಂಧ, ಚಿನ್ನ, ರೇಷ್ಮೆಯ ನೂಲು, ಇವುಗಳು ಸಾಗುತ್ತವೆ. ಹೊರಗಿನಿಂದ ಈ ಸೀಮೆಗೆ ಹತ್ತಿಯ ಬಟ್ಟೆ, ಉಣ್ಣೆಯ ಬಟ್ಟೆ, ಕಬ್ಬಿಣದ ಸಾಮಾನು, ಯಂತ್ರಗಳು, ಗಾಜಿನ ಸಾಮಾನು, ಉಪ್ಪು, ಹೊಗೆಸೊಪ್ಪು, ಕಾಗದ, ಮುಂತಾದುವು ಭರ್ತಿಯಾಗುತ್ತವೆ. ಈ ದೇಶಕ್ಕೆ ಸಮುದ್ರತೀರವಿಲ್ಲದುದರಿಂದ ವ್ಯಾಪಾರ ಕಡಿಮೆ.

೧೬. ಭಾಷೆ, ವಿದ್ಯಾಭ್ಯಾಸ.—ಈ ದೇಶದಲ್ಲಿ ಕನ್ನಡವೇ ಮುಖ್ಯ ಭಾಷೆಯಾಗಿದೆ. ಈಗ ಇಂಗ್ಲೀಷು ಭಾಷೆಯು ಹೆಚ್ಚುಹೆಚ್ಚಾಗಿ ಪ್ರಚಾರಕ್ಕೆ ಬರುತ್ತಿದೆ.

ಪ್ರಜೆಗಳಿಗೆ ಓದುಬರೆಹವನ್ನು ಕಲಿಸಿಕೊಡುವುದಕ್ಕೆ ಸರ್ಕಾರದವರು ಅನೇಕ ಸ್ಥಳಗಳಲ್ಲಿ ವಿಲೇಜ್ ಎಲಿಮೆಂಟರಿ ಸ್ಕೂಲುಗಳನ್ನು ಸ್ಥಾಪಿಸಿದ್ದಾರೆ. ಈ ಸ್ಕೂಲುಗಳಲ್ಲಿ ಮಕ್ಕಳಿಗೆ ಫೀಜಿಲ್ಲದೆ ಧರ್ಮಾರ್ಥವಾಗಿ ಓದಿಸುತ್ತಾರೆ. ಕೆಲ ಕೆಲ ಸ್ಥಳಗಳಲ್ಲಿ ಬಾಲಕರೆಲ್ಲರೂ ಓದುಬರಹವನ್ನು ಕಲಿಯಬೇಕೆಂದು ಕಡ್ಡಾಯಮಾಡಿರುವರು. ಎಲಿಮೆಂಟರಿ ಸ್ಕೂಲಿನಲ್ಲಿ ಹುಡುಗರು ನಾಲ್ಕು ವರ್ಷಕಾಲ ಓದಬಹುದು. ತರುವಾಯ ತಾಲ್ಲೂಕು ಸ್ಕೂಲುಗಳಿಗೆ ಸೇರಿ ಲೋಅರ್ ಸೆಕೆಂಡರಿ ಪರೀಕ್ಷೆಯುವರೆಗೆ ಓದಬಹುದು. ಇವರು ಮುಂದೆ ನಾರ್ಮಲ್ ಸ್ಕೂಲುಗಳಿಗೆ ಸೇರಿ ಅಪ್ಪರ್ ಸೆಕೆಂಡರಿ ಪರೀಕ್ಷೆಗೂ, ಮುಂದೆ ಕನ್ನಡ ಪಂಡಿತ ಪರೀಕ್ಷೆಯುವರೆಗೂ ಓದಬಹುದು. ಹಿಂದುಸ್ಥಾನಿಯನ್ನು ಕಲಿಯುವವರಿಗೂ ಇದೇ ವಿಧವಾದ ಏರ್ಪಾಡಿದೆ. ಇಂಗ್ಲಿಷನ್ನು ಕಲಿಯಲು ಅಪೇಕ್ಷಿಸುವವರು ನಾಲ್ಕು ವರ್ಷಕಾಲ ಕನ್ನಡವನ್ನು ಕಲಿತ ಬಳಿಕ, ಮಿಡ್ಲ್ ಸ್ಕೂಲಿಗೆ ಹೋಗಬಹುದು. ಆ ಸ್ಕೂಲುಗಳಲ್ಲಿ ಇಂಗ್ಲಿಷನ್ನು ಹೇಳಿಕೊಡುವಂತೆ ಏರ್ಪಡಿಸಿದ್ದಾರೆ. ಮುಂದೆ ಇಂಗ್ಲಿಷನ್ನು ಓದಲಪೇಕ್ಷೆಯುಳ್ಳವರು ಹೈಸ್ಕೂಲುಗಳಿಗೆ ಸೇರಿ ಓದಬಹುದು.

ಅಲ್ಲಿಂದ ಮುಂದೆ ಬೆಂಗಳೂರಿನಲ್ಲಾಗಲಿ, ಮೈಸೂರಿನಲ್ಲಾಗಲಿ, ಕಾಲೇಜಿಗೆ ಸೇರಿ ದೊಡ್ಡ ದೊಡ್ಡ ಪರೀಕ್ಷೆಗಳಿಗೆ ಓದಬಹುದು. ಮೈಸೂರಿನಲ್ಲಿ ಒಂದು ವಿಶ್ವವಿದ್ಯಾನಿಲಯವೂ ಇದೆ.

ಸಂಸ್ಕೃತ ಭಾಷೆಯನ್ನು ಸಾಮಾನ್ಯವಾಗಿ ಬೋಧಿಸುವುದಕ್ಕಾಗಿ ಕೆಲವು ಸಾಧಾರಣ ಪಾಠಶಾಲೆಗಳೂ, ಶಾಸ್ತ್ರಗಳಲ್ಲ ಪ್ರೌಢಪಾಠಗಳನ್ನು ಹೇಳುವುದಕ್ಕಾಗಿ ಮೈಸೂರು, ಬೆಂಗಳೂರು, ಮೇಲುಕೋಟೆಗಳಲ್ಲಿ, ಮೂರು ಕಾಲೇಜುಗಳೂ ಸ್ಥಾಪಿತವಾಗಿವೆ.

ಹೆಣ್ಣುಮಕ್ಕಳಿಗೆ ಪಾಠಹೇಳುವುದಕ್ಕಾಗಿ ಹಲವು ಬಾಲಿಕಾ ಪಾಠಶಾಲೆಗಳೂ, ಅವರಿಗೆ ಇಂಗ್ಲಿಷಿನಲ್ಲಿ ಪ್ರೌಢವಿದ್ಯಾಭ್ಯಾಸ ಮಾಡಿಸುವುದಕ್ಕಾಗಿ ಮೈಸೂರಿನಲ್ಲಿ ಮಹಾರಾಣಿ ಕಾಲೇಜೂ, ಸ್ಥಾಪಿತವಾಗಿದೆ.

ನೆಯ್ಗೆ, ಮರಗೆಲಸ, ಮೊದಲಾದ ಕೈಗಾರಿಕೆಗಳನ್ನು ಕಲಿಸುವುದಕ್ಕಾಗಿ ಅಲ್ಲಲ್ಲಿ ಕೆಲವು ಕೈಗಾರಿಕೆ ಪಾಠಶಾಲೆಗಳೂ, ವ್ಯಾಪಾರಕ್ರಮವನ್ನು ಬೋಧಿಸುವುದಕ್ಕೆ ವಾಣಿಜ್ಯ ಪಾಠಶಾಲೆಗಳೂ, ಪಾಠಕ್ರಮವನ್ನು ತಿಳಿಯುವದಕ್ಕೆ ನಾರ್ಮಲ್ ಸ್ಕೂಲುಗಳೂ, ವ್ಯವಸಾಯ ಮಾರ್ಗವನ್ನು ಕಲಿಸುವುದಕ್ಕೆ ಅಗ್ರಿಕಲ್ಚರಲ್ ಪಾಠಂಗಳೂ, ಶಿಲ್ಪಶಾಸ್ತ್ರವನ್ನು ಬೋಧಿಸುವುದಕ್ಕೆ ಇಂಜನಿಯರಿಂಗ್ ಸ್ಕೂಲೂ, ಆರ್ಯವೈದ್ಯಶಾಲೆಯೂ ಏರ್ಪಟ್ಟಿವೆ.

ಓದುಬರೆಹ ಬಾರದೆ ಇರುವ ಕೈಗಾರಿಕೆಯವರು, ಕೆಲಸಗಾರರು, ಕೂಲಿಗಳು, ಮೊದಲಾದವರಿಗೆ ಓದುಬರೆಹ ಕಲಿಸುವುದಕ್ಕಾಗಿ ಹಲವು ರಾತ್ರಿಸ್ಕೂಲುಗಳನ್ನು ಇಟ್ಟಿದ್ದಾರೆ.

ಇವಲ್ಲದೆ ಕಿವುಡಮೂಗರ ಮತ್ತು ಕುರುಡರ ವಿದ್ಯಾಭ್ಯಾಸಕ್ಕಾಗಿ ಮೈಸೂರಿನಲ್ಲಿ ಒಂದು ಪಾಠಶಾಲೆಯು ಸ್ಥಾಪಿತವಾಗಿದೆ.

೧೭. ರಾಜ್ಯಭಾರ.—ಈ ಸಂಸ್ಥಾನವು ಬ್ರಿಟಿಷ್ ರಾಜ್ಯದ ಸಂರಕ್ಷಣೆಗೆ ಒಳಪಟ್ಟಿದೆ. ಆದರೂ ಸಂಸ್ಥಾನದ ಪರಿಪಾಲನೆಯು ಮುಖ್ಯವಾಗಿ ಶ್ರೀಮನ್ಮಹಾರಾಜರವರ ಆಜ್ಞಾನುಸಾರವಾಗಿ ನಡೆಯುತ್ತಿದೆ. ಶ್ರೀಮನ್ಮಹಾರಾಜರವರು ದಿವಾನರವರನ್ನೂ, ಕೌನ್ಸಿಲರುಗಳನ್ನೂ, ತಮ್ಮ ಮಂತ್ರಾಲೋಚನಾ ಸಭೆಗೆ ನೇಮಿಸಿಕೊಂಡು ಇವರುಗಳ ಮೂಲಕ ರಾಜಕಾರ್ಯಗಳನ್ನು ನೆರವೇರಿಸುತ್ತಾ ರಾಜ್ಯಪರಿಪಾಲನೆ ಮಾಡುತ್ತಿದ್ದಾರೆ.

ಇಲ್ಲಿನ ರಾಜ್ಯಭಾರಕ್ರಮವು ಅನೇಕವಾಗಿ ಬ್ರಿಟಿಷ್ ಇಂಡಿಯದಲ್ಲಿಯ ರಾಜ್ಯಭಾರಕ್ರಮದ ಆಧಾರದಮೇಲೆ ಏರ್ಪಟ್ಟಿದೆ. ಮುಖ್ಯವಾದ ಇಲಾಖೆಗಳಿಗೆಲ್ಲಾ ಬೇರೆ ಬೇರೆ ಮುಖ್ಯಾಧಿಕಾರಿಗಳಿದ್ದಾರೆ. ರಾಜ್ಯಕಾರ್ಯಕ್ಕಾಗಿ ಸಂಸ್ಥಾನವು ಎಂಟು ಡಿಸ್ಟ್ರಿಕ್ಟು

ಗಳಾಗಿಯೂ, ೬೯ ತಾಲ್ಲೂಕುಗಳಾಗಿಯೂ ವಿಂಗಡಿಸಲ್ಪಟ್ಟಿದೆ. ಒಂದೊಂದು ಡಿಸ್ಟ್ರಿಕ್ಟಿನಲ್ಲಿಯೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಅಧಿಕಾರವುಳ್ಳ ಒಬ್ಬೊಬ್ಬ ಡೆಪ್ಯುಟಿಕಮಿಷನರೂ, ಒಂದೊಂದು ತಾಲ್ಲೂಕಿನಲ್ಲಿಯೂ ಸಬಾರ್ಡಿನೇಟ್ ಮ್ಯಾಜಿಸ್ಟ್ರೇಟ್ ಅಧಿಕಾರವುಳ್ಳ ಒಬ್ಬೊಬ್ಬ ಅಮಲ್ದಾರರೂ, ಸಬ್ ತಾಲ್ಲೂಗಳಲ್ಲಿ ಒಬ್ಬೊಬ್ಬ ಡೆಪ್ಯುಟಿ ಅಮಲ್ದಾರರೂ ಇದ್ದಾರೆ ; ಇವರಲ್ಲದೆ ಆ ಒಂದೊಂದು ಡಿಸ್ಟ್ರಿಕ್ಟಿನಲ್ಲಿಯೂ ಖಜಾನೆಗಳನ್ನು ನೋಡಿಕೊಳ್ಳುವುದಕ್ಕಾಗಿಯೂ, ಡಿಸ್ಟ್ರಿಕ್ಟಿಗೆ ಸೇರಿದ ಎರಡು ಅಥವಾ ಮೂರು ತಾಲ್ಲೂಕು ರೆವಿನ್ಯೂ ಆಡಳಿತವನ್ನು ನೋಡಿಕೊಂಡು, ಹೆಚ್ಚಿಗೆ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ನಡೆಯಿಸುವುದಕ್ಕಾಗಿಯೂ, ಇಬ್ಬರು ಅಥವಾ ಹೆಚ್ಚು ಮಂದಿ ಅಸಿಸ್ಟೆಂಟ್ ಕಮಿಷನರುಗಳೂ ಇದ್ದಾರೆ. ಹೊಡೆದಾಟ, ಕಳವು, ಮೋಸ, ಹಿಂಸೆ, ಕೊಲೆ, ಮುಂತಾದುವುಗಳನ್ನು ವಿಚಾರಮಾಡಿ ತಪ್ಪಿತಸ್ಥರನ್ನು ಶಿಕ್ಷಿಸುವುದಕ್ಕೆ ಮ್ಯಾಜಿಸ್ಟ್ರೇಟರು ಇರುವರು.

ಹಣಕಾಸು, ಆಸ್ತಿ, ಇವುಗಳ ವಿಚಾರವಾದ ವ್ಯಾಜ್ಯಗಳನ್ನು ತೀರಿಸುವುದಕ್ಕೋಸ್ಕರ ಮುನ್ಸೀಫ್ ಕೋರ್ಟುಗಳೂ, ಸಬ್‌ಜಡ್ಜ್ ಮತ್ತು ಡಿಸ್ಟ್ರಿಕ್ಟ್‌ಜಡ್ಜ್ ಕೋರ್ಟುಗಳೂ, ಇವುಗಳಮೇಲೆಲ್ಲಾ ಅಧಿಕಾರವುಳ್ಳ ಒಂದು ಚೀಫ್ ಕೋರ್ಟೂ ಏರ್ಪಡಿಸಲ್ಪಟ್ಟಿವೆ.

ಸರ್ಕಾರದವರು ಹಿಂದಿನ ವರ್ಷ ನಡೆಯಿಸಿದ ಆಡಳಿತಗಳನ್ನೂ, ಮುಂದೆ ನಡೆಯಿಸಬೇಕೆಂದಿರುವ ನಡವಳಿಕೆಗಳನ್ನೂ, ಪ್ರಜೆಗಳಿಗೆ ತಿಳಿಯಪಡಿಸುವುದಕ್ಕಾಗಿ ಪ್ರಜಾಪ್ರತಿನಿಧಿ ಸಭೆ ಎಂಬ ಸಭೆಯು ಸ್ಥಾಪಿಸಲ್ಪಟ್ಟಿದೆ. ಈ ಸಭೆಯು ಪ್ರತಿ ವರ್ಷವೂ ನವರಾತ್ರಿ, ಮಹಾರಾಜರವರ ವರ್ಧಂತಿ ಇವುಗಳಾದಕೂಡಲೆ ಮೈಸೂರಿನಲ್ಲಿ ಸೇರುತ್ತದೆ.

ಇದಲ್ಲದೆ, ಈ ಸಂಸ್ಥಾನಕ್ಕೆ ಬೇಕಾದ ನ್ಯಾಯನಿಬಂಧನೆಗಳನ್ನು ಏರ್ಪಡಿಸುವುದಕ್ಕಾಗಿ ಶ್ರೀಮನ್ಮಹಾರಾಜರವರು ಲೆಜಿಸ್ಲೇಟಿವ್ ಕೌನ್ಸಿಲ್ ಎಂಬ ಒಂದು ನ್ಯಾಯನಿಬಂಧನ ರಚನಾ ಸಭೆಯನ್ನೂ, ಮತ್ತು ಐಶ್ವರ್ಯಾಭಿವೃದ್ಧಿ ಕ್ರಮವನ್ನು ಪರ್ಯಾಲೋಚಿಸುವುದಕ್ಕಾಗಿ ಎಕನಾಮಿಕ್ ಕಾನ್‌ಫರೆನ್ಸ್ ಎಂಬ ಒಂದು ಸಭೆಯನ್ನೂ ಏರ್ಪಡಿಸಿದ್ದಾರೆ.

ಈ ಸಂಸ್ಥಾನದಲ್ಲಿ ವರ್ಷ ಒಂದಕ್ಕೆ ೩ ಕೋಟಿ ರೂಪಾಯಿ ಹುಟ್ಟುವಳಿಯಾಗುತ್ತದೆ. ಅದರಲ್ಲಿ ಪ್ರತಿ ಸಂವತ್ಸರವೂ ಇಂಡಿಯಾ ಸರ್ಕಾರಕ್ಕೆ ೩೫ ಲಕ್ಷ ರೂಪಾಯಿಗಳ ಪಗದಿ ಸಲ್ಲುತ್ತದೆ. ಈ ಸಂಸ್ಥಾನದ ರಕ್ಷಣೆಗಾಗಿ ಇಂಡಿಯಾ ಸರ್ಕಾರದವರು ಬೆಂಗಳೂರು ಲಷ್ಕರಿನಲ್ಲಿ ಒಂದು ಸೇನೆಯನ್ನು ಇಟ್ಟಿದ್ದಾರೆ.

———

# ೨೬. ಡಿಸ್ಟ್ರಿಕ್ಟುಗಳು.

## ೧. ಮೈಸೂರು ಡಿಸ್ಟ್ರಿಕ್ಟು.

ಮೇರೆಗಳು.—ಪೂರ್ವದಲ್ಲಿ-ಬೆಂಗಳೂರು ಡಿಸ್ಟ್ರಿಕ್ಟು, ಕೊಯಮುತ್ತೂರು. ದಕ್ಷಿಣದಲ್ಲಿ—ನೀಲಗಿರಿ, ಮಲಬಾರ್ ಪಶ್ಚಿಮದಲ್ಲಿ—ಕೊಡಗು. ಉತ್ತರದಲ್ಲಿ—ಹಾಸನ, ತುಮಕೂರು ಮತ್ತು ಬೆಂಗಳೂರು.

ಈ ಡಿಸ್ಟ್ರಿಕ್ಟು ೫,೪೮೮ ಚದರಮೈಲಿ ವಿಸ್ತೀರ್ಣವುಳ್ಳದ್ದಾಗಿದೆ. ಇದರ ಪಶ್ಚಿಮದಲ್ಲೂ, ದಕ್ಷಿಣದಲ್ಲೂ ಬೆಟ್ಟಗಳಿವೆ; ದಕ್ಷಿಣದಲ್ಲಿ ಕಾಡುಗಳಿವೆ. ಬೆಟ್ಟಗಳಲ್ಲಿ ಬಿಳಗಿರಿ ರಂಗನ ಬೆಟ್ಟ, ಗೋಪಾಲಸ್ವಾಮಿ ಬೆಟ್ಟ, ಚಾಮುಂಡಿ ಬೆಟ್ಟ, ಮೇಲುಕೋಟೆ ಬೆಟ್ಟ, ಇವು ಮುಖ್ಯವಾದುವು.




ಮೈಸೂರು ಹೊಸ ಅರಮನೆ.

ಈ ಡಿಸ್ಟ್ರಿಕ್ಟಿನಲ್ಲಿ ಕಾವೇರಿಯೂ, ಇದರ ಉಪನದಿಗಳಾದ ಹೇಮಾವತಿ, ಶಿಂಶ (ಕದಂಬ ನದಿ), ಅರ್ಕಾವತಿ, ಕಪಿಲ, ಲಕ್ಷ್ಮಣತೀರ್ಥ, ಇವುಗಳೂ ಪ್ರವಹಿಸುತ್ತವೆ ಈ ನದಿಗಳಿಗೆ ಅಣೆಕಟ್ಟು ಕಟ್ಟಿ, ಕಾಲುವೆಗಳ ಮೂಲಕ ನೀರು ಸಾಗಿಸಿ ಸಾಗುವಳಿ ಮಾಡುತ್ತಾರೆ. ಇಲ್ಲಿ ಹಲವು ಕೆರೆಗಳು ಇವೆ. ನೀರಿನ ಆಸರೆ ಇರುವ ಕಡೆಗಳಲ್ಲಿ ಬತ್ತವೂ, ಕಬ್ಬೂ, ಬೆಳೆಯುತ್ತವೆ; ಉಳಿದಕಡೆ ರಾಗಿ, ಜೋಳ, ಉದ್ದು, ಹೆಸರು, ಎಳ್ಳು, ಇವು ಬೆಳೆಯಾಗುತ್ತವೆ. ತೋಟಗಳಲ್ಲಿ ಅಡಿಕೆ, ತೆಂಗು, ಹಲಸು, ಮೊದಲಾದುವನ್ನು ಬೆಳೆಯು

ತ್ತಾರೆ. ಕೆಲವುಕಡೆ ಹೊಗೆಸೊಪ್ಪೂ, ಹತ್ತಿಯೂ, ಬೆಳೆಯಾಗುತ್ತವೆ. ಕಾಡುಗಳಲ್ಲಿ ತೇಗ, ಹೊನ್ನೆ ಮೊದಲಾದ ಮರಗಳು ಬೆಳೆಯುತ್ತವೆ.

ಮಳವಳ್ಳಿ ತಾಲ್ಲೂಕಿನಲ್ಲಿ ಕಬ್ಬಿಣವೂ, ಚಾಮರಾಜನಗರದ ತಾಲ್ಲೂಕಿನಲ್ಲಿ ಕರ್ಪೂರವೂ, ದೊರೆಯುತ್ತವೆ. ಮಳವಳ್ಳಿಯಲ್ಲಿ ಸಿಕ್ಕುವ ಅಲ್ಪಸ್ವಲ್ಪ ಕಬ್ಬಿಣವನ್ನೂಕೂಡ ಈಗ ಉಪಯೋಗಕ್ಕೆ ಅಣಿಮಾಡುತ್ತಾ ಇಲ್ಲ.

ಬಿಸಿಲುಕಾಲದಲ್ಲಿ ಸೆಕೆಯೂ, ಹಿಮಗಾಲದಲ್ಲಿ ಚಳಿಯೂ ಸ್ವಲ್ಪ ಹೆಚ್ಚು. ಈ ಡಿಸ್ಟ್ರಿಕ್ಟಿನಲ್ಲಿ ೧೧,೭೧,೦೦೦ ಜನರು ವಾಸವಾಗಿರುವರು.



ಶ್ರೀರಂಗಪಟ್ಟಣ — ದಿಡ್ಡೀಬಾಗಿಲು.

ಮುಖ್ಯಸ್ಥಳಗಳು.—೧. ಮೈಸೂರು—ಇದು ಸಂಸ್ಥಾನದ ರಾಜಧಾನಿ. ಇಲ್ಲಿ ಶ್ರೀಮನ್ಮಹಾರಾಜರವರ ಅರಮನೆ ಇದೆ. ಕುಶಲರಾದ ಶಿಲ್ಪಿಗಳಿಂದ ಹೊಸದಾಗಿಯೂ, ಚಿತ್ರಮಯವಾಗಿಯೂ, ಕಟ್ಟಿಸಿದ ಈ ಅರಮನೆಯು ಬಹು ರಮಣೀಯವಾಗಿದೆ. ಶ್ರೀಮನ್ಮಹಾರಾಜರವರ ಪ್ರೋತ್ಸಾಹದಿಂದ ಕುಶಲತೆಯಿಂದ ದಂತದ ಕೆಲಸ ಮಾಡುವವರು ಇಲ್ಲಿ ಅನೇಕರಿರುತ್ತಾರೆ. ಬತ್ತವು ಹೆಚ್ಚು ಬೆಳೆಯುವ ಗ್ರಾಮಗಳ ಸಮೀಪದಲ್ಲಿ ಈ ಪಟ್ಟಣವು ಇರುವುದರಿಂದ ಇಲ್ಲಿ ಬತ್ತದ ಮತ್ತು ಅಕ್ಕಿಯ ವ್ಯಾಪಾರವು ಹೆಚ್ಚು. ಇಲ್ಲಿ ಬತ್ತ ಕುಟ್ಟುವ ಯಂತ್ರಗಳಿವೆ. ಈ ಊರಿನ ಹತ್ತಿರ ಚಾಮುಂಡಿಬೆಟ್ಟವು ಇದೆ.

೨. ಶ್ರೀರಂಗಪಟ್ಟಣ.—ಇದು ಮೈಸೂರಿಗೆ ಉತ್ತರದಲ್ಲಿದೆ. ಇಲ್ಲಿ ಕಾವೇರಿಯು ಎರಡಾಗಿ ಕವಲೊಡೆದು ಇದನ್ನು ಬಳಸಿಕೊಂಡಿದೆ. ಇದರಲ್ಲಿ ಒಂದು ಬಲವಾದ ಕೋಟೆ ಇದೆ. ಇದು ಹಿಂದೆ ಹೈದರ್ ಮತ್ತು ಟಿಪ್ಪೂಸುಲ್ತಾನರ ಕಾಲದಲ್ಲಿ ರಾಜಧಾನಿಯಾಗಿತ್ತು. ಇದರ ಕೋಟೆ ಕೊತ್ತಲಗಳನ್ನೂ, ನೂರು ವರ್ಷಕ್ಕೆ ಮುಂಚೆಯೇ ಕಟ್ಟಿದ 'ದರಿಯಾ ದವಲತ್' ಎಂಬ ತೋಟದ ಬಂಗಲೆಯನ್ನೂ, ಹೈದರ್ ಟಿಪ್ಪುಸುಲ್ತಾನರ ಗೋರಿಗಳಿರುವ 'ಲಾಲ್‌ಬಾಗ್' ಎಂಬ ತೋಟವನ್ನೂ, ನೋಡಲು ಅನೇಕರು ಬರುತ್ತಾರೆ. ಕಾವೇರಿಯ ನಾಲೆಗಳು ಈ ತಾಲ್ಲೂಕಿನಲ್ಲಿ ಹರಿಯುವುದರಿಂದ ಈ ನಾಲೆಗಳ ಕೆಳಗಣ ಭೂಮಿಯಲ್ಲಿ ಬತ್ತವೂ, ಕಬ್ಬೂ, ವಿಶೇಷವಾಗಿ ಬೆಳೆಯುತ್ತವೆ.

೩. ಮೇಲುಕೋಟೆ.—ಇದು ಒಂದು ಯಾತ್ರಾಸ್ಥಳ. ಇಲ್ಲಿಯೂ, ಇದರ ಸುತ್ತು ಮುತ್ತಲೂ, ಸ್ವಲ್ಪಮಟ್ಟಿಗೆ ಜವಳಿ ತಯಾರಾಗುವುದು.

೪. ನಾಗಮಂಗಲ.—ಇಲ್ಲಿ ಚಿತ್ರಕೆಲಸದ ಹಿತ್ತಾಳೆ ಸಾಮಾನುಗಳು ತಯಾರಾಗುತ್ತವೆ.

೫. ನಂಜನಗೂಡು.—ಇದು ಮೈಸೂರಿಗೆ ದಕ್ಷಿಣದಲ್ಲಿ ಕಪಿಲಾನದಿಯ ದಡದ ಮೇಲಿದೆ; ಯಾತ್ರಾಸ್ಥಳ.

೬. ಹುಣಸೂರು.—ಇದು ಮೈಸೂರಿಗೆ ಪಶ್ಚಿಮದಲ್ಲಿ ಲಕ್ಷ್ಮಣತೀರ್ಥದ ತೀರದಲ್ಲಿದೆ. ಇಲ್ಲಿ ಅಮೃತಮಹಲ್ ಇಲಾಖೆಯ ದನಗಳಿವೆ. ದನ, ಕುರಿಗಳು, ಹೆಚ್ಚಾಗಿರುವುದರಿಂದ ಇಲ್ಲಿ ಒಳ್ಳೆಯ ಕಂಬಳಿಗಳೂ, ಜೋಡುಗಳೂ, ತಯಾರಾಗುತ್ತಲವೆ. ಕಾಫಿ ಬೆಳೆಯುವ ಕೊಡಗು ಸೀಮೆಗೆ ಇದು ಸಮೀಪವಾಗಿರುವುದರಿಂದ ಇಲ್ಲಿ ಒಂದು ಕಾಫಿಯ ಕಾರ್ಖಾನೆ ಇದೆ.

೭. ಶಿವನಸಮುದ್ರ.—ಇದರ ಬಳಿ ಕಾವೇರಿಯು ಎರಡಾಗಿ ಕವಲೊಡೆದು ಕೆಳಗೆ ಧುಮುಕುತ್ತದೆ. ಇವುಗಳಿಗೆ ಗಗನಚಕ್ಕಿ, ಭರಚಕ್ಕಿ ಎಂದು ಹೆಸರು. ಇಲ್ಲಿ ಮೈಸೂರು ಸರ್ಕಾರದವರು ವೈದ್ಯುತ ಶಕ್ತಿಯನ್ನು ಉಂಟುಮಾಡುವ ಯಂತ್ರಗಳನ್ನು ಇಟ್ಟಿದ್ದಾರೆ; ಮತ್ತು ಈ ಶಕ್ತಿಯ ಸಹಾಯದಿಂದ ಮೈಸೂರು, ಬೆಂಗಳೂರು ಪಟ್ಟಣದಲ್ಲಿ ತಂತಿಯ ಮೂಲಕ ಎಲೆಕ್ಟ್ರಿಕ್ ದೀಪಗಳನ್ನು ಹಚ್ಚುವರು. ಚಿನ್ನದ ಗಣಿಗಳಲ್ಲಿರುವ ಯಂತ್ರಗಳನ್ನು ಈ ಶಕ್ತಿಯಿಂದಲೇ ಕೆಲಸಮಾಡುವಂತೆ ಮಾಡುವರು.

೮. ತಲಕಾಡು.—ಇದು ಪೂರ್ವದಲ್ಲಿ ಒಂದು ದೊಡ್ಡ ಪಟ್ಟಣವಾಗಿತ್ತು. ಈ

ಪಟ್ಟಣವು ಮುಕ್ಕಾಲುಪಾಲೆಲ್ಲಾ ಮರಳಲ್ಲಿ ಹೂತುಹೋಗಿದೆ. ಮರಳು ಮುಚ್ಚಿಕೊಂಡು ಬರುತ್ತಿರುವುದನ್ನು ತಡೆಯಲು ಈಚೆಗೆ ನಾನಾತೆರನಾದ ಬಳ್ಳಿಗಳನ್ನು ಮರಳಲ್ಲಿ ಹುಟ್ಟು ಹಾಕಿರುವರು.

೯. ತಿರುಮಕೂಡಲು ನರಸೀಪುರ.—ಇದು ಕಾವೇರಿ, ಕಪಿಲಾ, ಸಂಗಮದಲ್ಲಿರುವುದು ; ಯಾತ್ರಾಸ್ಥಳ.

ಮೈಸೂರು ಡಿಸ್ಟ್ರಿಕ್ಟಿನಲ್ಲಿ ಮರಹಳ್ಳಿಯಲ್ಲಿ ನಡೆಯುವ ದಿನಸಿ ಸಂತೆಯೂ, ಚುಂಚನಕಟ್ಟೆ ಜಾತ್ರೆಯಲ್ಲಿ ನಡೆಯುವ ದನದ ಸಂತೆಯೂ, ಬಹು ಪ್ರಸಿದ್ಧವಾದುವು.

ಸೂಚನೆ.—ಉಪಾಧ್ಯಾಯರು ಶಿವನಸಮುದ್ರಕ್ಕೆ ಸಂಬಂಧಪಟ್ಟ ಗಂಗಾರಾಜರ ಕಥೆಯನ್ನು ಹೇಳುವುದು. ಅಲ್ಲಲ್ಲಿ ಸಂತೆ ಕಟ್ಟುವುದಕ್ಕೆ ಕಾರಣವನ್ನೂ, ಅವುಗಳಿಂದ ಜನಗಳಿಗೆ ಅಲ್ಲಿಯ ಪ್ರಯೋಜನಗಳನ್ನೂ ತಿಳಿಸುವುದು. ಒಳ್ಳೆಯ ಜಾತಿಯ ದನದ ಸಂತೆಯು ಜಾತ್ರೆಯ ವೇಳೆಯಲ್ಲೇ ಕೂಡುವುದು ; ಈ ತೆರನಾದ ಸಂತೆಯು ಎಲ್ಲೆಲ್ಲಿ ಸೇರುವುದೆಂಬುದನ್ನು ತಿಳಿಸುವುದು. ಮೈಸೂರು, ಎಡತೊರೆ, ಹುಣಸೂರು. ಹೆಗ್ಗಡದೇವನಕೋಟೆ, ಗುಂಡ್ಲುಪೇಟೆ, ಚಾಮರಾಜನಗರ, ನಂಜನಗೂಡು, ತಿರುಮಕೂಡಲು ನರಸೀಪುರ, ಶ್ರೀರಂಗಪಟ್ಟಣ, ಮಂಡ್ಯ, ನಾಗಮಂಗಲ, ಕೃಷ್ಣರಾಜಪೇಟೆ, ಮಳವಳ್ಳಿ, ಫ್ರೆಂಚ್‌ರಾಕ್ಸ್ (ಸಬ್ ತಾಲ್ಲೂಕು), ಯಳಂದೂರು (ಜಹಗೀರು), ಇವು ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ತಾಲ್ಲೂಕುಗಳೆಂದು ತಿಳಿಸಿ ಅವುಗಳನ್ನು ಭೂಪಟದಮೇಲೆ ತೋರಿಸುವುದು.

## ೨. ಹಾಸನ ಡಿಸ್ಟ್ರಿಕ್ಟು.

ಮೇರೆಗಳು.—ಪೂರ್ವದಲ್ಲಿ–ತುಮಕೂರು, ಮೈಸೂರು ಡಿಸ್ಟ್ರಿಕ್ಟುಗಳು. ದಕ್ಷಿಣದಲ್ಲಿ–ಕೊಡಗು ಪಶ್ಚಿಮದಲ್ಲಿ–ದಕ್ಷಿಣಕನಡ. ಉತ್ತರದಲ್ಲಿ ಕಡೂರು ಡಿಸ್ಟ್ರಿಕ್ಟು.

ಇದು ೨,೬೭೭ ಚದರಮೈಲಿ ವಿಸ್ತಾರವುಳ್ಳದಾಗಿದೆ. ಈ ಡಿಸ್ಟ್ರಿಕ್ಟಿನ ಮಂಜರಾಬಾದು ಸೀಮೆಯೆಲ್ಲಾ ಮಲೆನಾಡಾಗಿದೆ. ಈ ಡಿಸ್ಟ್ರಿಕ್ಟಿನ ಉತ್ತರಭಾಗದಲ್ಲಿ ತಗ್ಗಾಗಿರುವ ಬೆಟ್ಟಗಳಿವೆ. ಸುಬ್ರಹ್ಮಣ್ಯದೇವರ ಬೆಟ್ಟ, ಜೇನುಕಲ್ಲುಗುಡ್ಡ, ಜೇನ್‌ಕಲ್ ಬೆಟ್ಟ, ಇವು ಮುಖ್ಯವಾದ ಶಿಖರಗಳು.

ಇಲ್ಲಿಂದ ಪಶ್ಚಿಮತೀರಕ್ಕೆ ಹೋಗುವುದಕ್ಕೆ ಮೂರು ಕಣಿವೆ ದಾರಿಗಳಿವೆ. ಇವುಗಳಿಗೆ ಸೀಸಕಲ್ಲು, ಮಂಜರಾಬಾದು, ಬಿಸಿಲೇಘಾಟಿ ಎಂದು ಹೆಸರು.

ಈ ಡಿಸ್ಟ್ರಿಕ್ಟಿನ ಇನ್ನೂ ಕೆಲವು ಭಾಗವು ಮಲೆನಾಡಾಗಿದೆ. ಆದರೆ ಅಲ್ಲಿ ದೊಡ್ಡ ಬೆಟ್ಟಗಳಿಲ್ಲ.

ಹೇಮಾವತಿಯೂ, ಅದಕ್ಕೆ ಸೇರುವ ಯಗಚಿಯೂ, ಈ ಡಿಸ್ಟ್ರಿಕ್ಟಿನಲ್ಲಿ ಹರಿಯುವ

ನದಿಗಳು. ಅಣೆಕಟ್ಟುಗಳ ಮೂಲಕ ಇವುಗಳ ನೀರನ್ನು ವ್ಯವಸಾಯಕ್ಕೆ ಉಪಯೋಗಿಸುತ್ತಾರೆ.

ಇಲ್ಲಿ ಬತ್ತ, ಕಬ್ಬು, ರಾಗಿ, ಜೋಳ, ಹೊಗೆಸೊಪ್ಪು, ಇವುಗಳನ್ನು ಬೆಳೆಯುತ್ತಾರೆ. ಮಲೆನಾಡಿನ ಭಾಗದಲ್ಲಿ ಕಾಫಿ, ಏಲಕ್ಕಿ, ಮೆಣಸು, ಅರಿಸಿನ, ಇವು ಬೆಳೆಯಾಗುತ್ತವೆ ಇಲ್ಲಿ ೫,೮೦,೨೦೦ ಪ್ರಜೆಗಳಿರುವರು.



ಗೋಮಟೇಶ್ವರ

ಮುಖ್ಯಪಟ್ಟಣಗಳು :—

೧. ಹಾಸನ.-ಇದು ಈ ಡಿಸ್ಟ್ರಿಕ್ಟಿನ ಮುಖ್ಯಪಟ್ಟಣ.


೨. ಅರಸೀಕೆರೆ.— ವ್ಯಾಪಾರಸ್ಥಳ.

೩. ಶ್ರವಣಬೆಳಗೊಳ.—ಜೈನರ ಯಾತ್ರಾಸ್ಥಳ. ಇಲ್ಲಿ ೫೭ ಅಡಿ ಎತ್ತರವಿರುವ ಗೋಮಟೇಶ್ವರ ಸ್ವಾಮಿಯ ಒಂದು ಶಿಲಾಪ್ರತಿಮೆಯು ಚಂದ್ರಬೆಟ್ಟದ ಮೇಲೆ ಇದೆ. ಈ ಊರಿನಲ್ಲಿ ತಾಮ್ರದ ಪಾತ್ರೆಗಳು ತಯಾರಾಗುತ್ತವೆ.

೪. ಹೊಳೆನರಸೀಪುರ.—ಇದು ಹೇಮಾವತಿಯ ದಡದಲ್ಲಿದೆ. ಇಲ್ಲಿ ಉತ್ತರಾದಿ ಸ್ವಾಮಿಗಳ ಮಠವಿದೆ. ಈ ಊರಿನಲ್ಲಿ ಒಳ್ಳೆಯ ಬಟ್ಟೆಗಳೂ, ಗೋಣೀ ಚೀಲಗಳೂ, ತಯಾರಾಗುತ್ತವೆ.

೫. ಸಕಲೇಶಪುರ.—ಇದು ಹೇಮಾವತಿಯ ತೀರದಲ್ಲಿದೆ; ಕಾಫಿ ವ್ಯಾಪಾರಕ್ಕೆ ಪ್ರಸಿದ್ಧವಾದ ಸ್ಥಳ.

೬. ಬೇಲೂರು.—ಇದು ಯಗಚೀನದಿಯ ದಡದಲ್ಲಿದೆ. ಇಲ್ಲಿ ಚನ್ನಕೇಶವ



ಶ್ರವಣಬೆಳಗೊಳ-ಚಂದ್ರ ಬೆಟ್ಟ.



ಹಳೆಯಬೀಡು ದೇವಸ್ಥಾನ.

ಸ್ವಾಮಿಯ ಸೊಗಸಾದ ಒಂದು ದೇವಸ್ಥಾನವಿದೆ. ಈ ಊರಿನಲ್ಲಿ ತಾಮ್ರದ ಮತ್ತು ಹಿತ್ತಾಳೆಯ ಪಾತ್ರೆಗಳು ತಯಾರಾಗುತ್ತವೆ.

೭. ಹಳೆಯಬೀಡು.—ಪೂರ್ವದಲ್ಲಿ ಇದಕ್ಕೆ ದ್ವಾರಸಮುದ್ರವೆಂದು ಹೆಸರು ಇತ್ತು. ಇದು ಹಿಂದೆ ಹೊಯ್ಸಳ ಬಲ್ಲಾಳರ ರಾಜಧಾನಿಯಾಗಿತ್ತು. ಇದರಲ್ಲಿರುವ ದೇವಸ್ಥಾನಗಳು ಈಗಲೂ ಶಿಲ್ಪಕಲಾಕುಶಲತೆಗೆ ಪ್ರಸಿದ್ಧವಾಗಿವೆ.

ಸೂಚನೆ.—ಹೊಯ್ಸಳರ ಕಥೆಯನ್ನು ಬಾಲಕರಿಗೆ ಹೇಳುವುದು. ಒಂದು ಊರಿನಿಂದ ಇನ್ನೊಂದೂರಿಗೆ ಹೋಗುವ ದಾರಿಯನ್ನು ಗುರ್ತು ಮಾಡಿಸುವುದು. ಡಿಸ್ಟ್ರಿಕ್ಟಿನ ನಕ್ಷೆಯನ್ನು ಬರೆಯಿಸುವುದು. ಈ ಡಿಸ್ಟ್ರಿಕ್ಟಿಗೆ ಸೇರಿದ ಹಾಸನ, ಆಲೂರು (ಸಬ್ ತಾಲ್ಲೂಕು), ಅರಸೀಕೆರೆ, ಬೇಲೂರು, ಮಂಜರಾಬಾದು, ಅರಕಲಗೂಡು, ಹೊಳೇನರಸೀಪುರ, ಚನ್ನರಾಯಪಟ್ಟಣ ತಾಲ್ಲೂಕುಗಳ ಸ್ಥಳಗಳನ್ನು ಗುರ್ತುಮಾಡಿಸುವುದು.

## ೩. ಕಡೂರು ಡಿಸ್ಟ್ರಿಕ್ಟು.

ಮೇರೆಗಳು.—ಉತ್ತರದಲ್ಲಿ—ಶಿವಮೊಗ್ಗೆ, ಚಿತ್ರದುರ್ಗ ಡಿಸ್ಟ್ರಿಕ್ಟುಗಳು. ಪೂರ್ವದಲ್ಲಿ—ತುಮಕೂರು ಡಿಸ್ಟ್ರಿಕ್ಟು. ದಕ್ಷಿಣದಲ್ಲಿ—ಹಾಸನ ಡಿಸ್ಟ್ರಿಕ್ಟು. ಪಶ್ಚಿಮದಲ್ಲಿ—ದಕ್ಷಿಣಕನ್ನಡ.

ಇದು ಸುಮಾರು ೨,೭೮೯ ಚದರವೈಲಿ ವಿಸ್ತೀರ್ಣವುಳ್ಳುದಾಗಿದೆ. ಈ ಡಿಸ್ಟ್ರಿಕ್ಟಿನಲ್ಲಿ ಬಾಬಾಬುಡನ್ ಬೆಟ್ಟವಿದೆ. ಈ ಬೆಟ್ಟದಲ್ಲಿ ಕಲ್ಹತ್ತಗಿರಿ, ಮುಳ್ಳಯ್ಯನಗಿರಿ, ಎಂಬಿವು ಮುಖ್ಯವಾದ ಶಿಖರಗಳು. ಕುದುರೆಮುಖ, ವರಾಹಪರ್ವತ, ಬಲ್ಲಾಳರಾಯನದುರ್ಗ, ಇವು ಮುಖ್ಯವಾದ ಬೆಟ್ಟಗಳು. ಗಂಟೇವಿನಾಯಕ, ಸಿದ್ಧಮಲ್ಲಪ್ಪ, ಬೀರನಹಳ್ಳಿ, ಎಂಬಿವು ದೊಡ್ಡ ಕಣಿವೆಗಳು. ಈ ಡಿಸ್ಟ್ರಿಕ್ಟು ತೀರ ಮಲೆನಾಡಾಗಿದೆ. ಇಲ್ಲಿ ಕಾಡುಗಳು ಹೆಚ್ಚು. ಇವುಗಳಲ್ಲಿ ಲಕ್ಕುವಳ್ಳಿಕಾಡು ಬಹಳ ದೊಡ್ಡದು.

ಇಲ್ಲಿ ತುಂಗ, ಭದ್ರ, ವೇದಾವತಿ, ಹೇಮಾವತಿ, ಈ ನದಿಗಳೂ, ಐಯ್ಯನಕೆರೆ, ಮದಗಕೆರೆ, ಎಂಬ ದೊಡ್ಡ ಕೆರೆಗಳೂ ಇವೆ. ಇಲ್ಲಿ ಭತ್ತ, ಕಾಫಿ, ಅಡಿಕೆ, ಏಲಕ್ಕಿ, ವಿಶೇಷವಾಗಿ ಬೆಳೆಯಾಗುತ್ತವೆ.

ವಾಯುಗುಣವು ಅಷ್ಟು ಆರೋಗ್ಯಕರವಲ್ಲ. ಕಲ್ಹತ್ತಗಿರಿ, ಬೇಸಿಗೆಯಲ್ಲಿ ವಾಸಕ್ಕೆ ಯೋಗ್ಯವಾಗಿರುವುದು. ಈ ಡಿಸ್ಟ್ರಿಕ್ಟಿನಲ್ಲಿ ಒಟ್ಟು ೩,೩೮,೪೫೭ ಮಂದಿ ಜನರು ವಾಸವಾಗಿರುವರು.

ಮುಖ್ಯಪಟ್ಟಣಗಳು.—೧. ಚಿಕ್ಕಮಗಳೂರು.—ಈ ಡಿಸ್ಟ್ರಿಕ್ಟಿಗೆ ಮುಖ್ಯಪಟ್ಟಣ.

೨. ಕಳಸ—ಇಲ್ಲಿ ಉತ್ಕೃಷ್ಟವಾದ ಅಡಿಕೆ ಬೆಳೆಯುತ್ತದೆ. ಇಲ್ಲಿ ಮಳೆಯು ಹೆಚ್ಚಾಗಿ ಬೀಳುವುದು.

೩. ಬೀರೂರು—ಇಲ್ಲಿ ತೆಂಗಿನಕಾಯಿಯು ಮತ್ತು ಅಡಿಕೆಯು ವ್ಯಾಪಾರ ನಡೆಯುತ್ತದೆ.

೪. ಕಡೂರು.—ಹಿಂದೆ ಇದು ಈ ಡಿಸ್ಟ್ರಿಕ್ಟಿಗೆ ಮುಖ್ಯಪಟ್ಟಣವಾಗಿತ್ತು.

೫. ಶೃಂಗೇರಿ—ಇದು ತುಂಗಾ ನದಿಯ ತೀರದಲ್ಲಿದೆ. ಇಲ್ಲಿ ಶ್ರೀ ಶೃಂಗೇರಿ ಸ್ವಾಮಿಗಳವರ ಮಠವಿದೆ.

೬. ತರೀಕೆರೆ.—ಇಲ್ಲಿ ಒಳ್ಳೆಯ ಜೋಡುಗಳು ತಯಾರಾಗುತ್ತವೆ.

ಸೂಚನೆ.—ಶೃಂಗೇರಿ ಮಠಸ್ಥಾಪಕರ ಕಥೆಯನ್ನು ಬಾಲಕರಿಗೆ ತಿಳಿಸುವುದು. ಕಡೂರ ಡಿಸ್ಟ್ರಿಕ್ಟಿನಲ್ಲಿರುವ ತಾಲ್ಲೂಕುಗಳು, ಚಿಕ್ಕಮಗಳೂರು, ಕಡೂರು, ತರೀಕೆರೆ, ಕೊಪ್ಪ, ನರಸಿಂಹರಾಜಪುರ, (ಎಡೆಹಳ್ಳಿ ಸಬ್ ತಾಲ್ಲೂಕು), ಮೂಡಗೆರೆ, ಶೃಂಗೇರಿ (ಜಹಗೀರು), ಎಂಬವುಗಳನ್ನು ಭೂಪಟದಮೇಲೆ ತೋರಿಸುವುದು.

## ೪. ಶಿವಮೊಗ್ಗಾ ಡಿಸ್ಟ್ರಿಕ್ಟು.

ಮೇರೆಗಳು.—ಉತ್ತರದಲ್ಲಿ-ಧಾರವಾಡ. ಪೂರ್ವದಲ್ಲಿ ಚಿತ್ರದುರ್ಗ ಡಿಸ್ಟ್ರಿಕ್ಟು. ದಕ್ಷಿಣದಲ್ಲಿ-ಕಡೂರು ಡಿಸ್ಟ್ರಿಕ್ಟು. ಪಶ್ಚಿಮದಲ್ಲಿ ದಕ್ಷಿಣಕನಡ.

ಇದು ೪,೦೩೦ ಚದರಮೈಲಿಗಳ ವಿಸ್ತಾರವುಳ್ಳುದಾಗಿದೆ.

ಕೊಡಚಾದ್ರಿ ಎಂಬುದು ಇಲ್ಲಿನ ಮುಖ್ಯಪರ್ವತ. ಇದರ ಶಿಖರದಮೇಲೆ ನಿಂತು ನೋಡಿದರೆ ಪಶ್ಚಿಮಸಮುದ್ರವು ಕಾಣಬರುತ್ತದೆ. ಆಗುಂಬೆಘಾಟಿ, ಹೈದರುಘಾಟಿ, ಕೊಲ್ಲೂರುಘಾಟಿ, ಎಂಬ ಕಣಿವೆಯ ದಾರಿಗಳಿವೆ. ತುಂಗ, ಭದ್ರ, ಎಂಬ ನದಿಗಳು ಕಡೂರು ಡಿಸ್ಟ್ರಿಕ್ಟಿನಲ್ಲಿ ಹುಟ್ಟಿ, ಈ ಡಿಸ್ಟ್ರಿಕ್ಟಿನಲ್ಲಿರುವ ಕೂಡಲಿ ಎಂಬಲ್ಲಿ ಸೇರುತ್ತವೆ. ಶರಾವತಿಯು ಈ ಡಿಸ್ಟ್ರಿಕ್ಟಿನಲ್ಲಿ ಹರಿದುಹೋಗಿ ಗೇರುಸೊಪ್ಪೆಯಲ್ಲಿ ೬೦೦ ಅಡಿ ಎತ್ತರದಿಂದ ಕಣಿವೆಯ ಕೆಳಕ್ಕೆ ಬೀಳುತ್ತದೆ. ಪ್ರಸಿದ್ಧವಾದ ಸೂಳೇಕೆರೆಯು ಈ ಡಿಸ್ಟ್ರಿಕ್ಟಿನಲ್ಲಿ ಇದೆ.

ಈ ಡಿಸ್ಟ್ರಿಕ್ಟಿನಲ್ಲಿ ಬತ್ತವನ್ನೂ, ಕಬ್ಬನ್ನೂ, ಪೈರುಮಾಡುತ್ತಾರೆ. ಮೆಣಸೂ, ಏಲ

ಕ್ಕಿಯೂ, ಬಹಳವಾಗಿ ಬೆಳೆಯುತ್ತವೆ. ಗಂಧದ ಮರವೂ, ತೇಗವೂ, ವಿಶೇಷವಾಗಿವೆ. ಇದ ಗಿಡಸೀವೆ. 'ಮ್ಯಾಂಗನೀಸ್' ಎಂಬ ಲೋಹವು ಇಲ್ಲಿ ಹೇರಳವಾಗಿ ಸಿಕ್ಕುವುದು ಇಲ್ಲಿ ೫,೧೬,೭೧೬ ಮಂದಿ ಪ್ರಜೆಗಳಿರುವರು.

ಮುಖ್ಯಪಟ್ಟಣಗಳು.—೧ ಶಿವಮೊಗ್ಗೆ.—ಮುಖ್ಯಪಟ್ಟಣ, ತುಂಗಾ ನದಿಯ ತೀರದಲ್ಲಿದೆ.



ಗೇರುಸೊಪ್ಪೆ ಜಲಪಾತ.

೨. ಕೂಡಲಿ.—ತುಂಗ, ಭದ್ರ ಸಂಗಮವಾಗುವ ಕಡೆ ಇದೆ.

೩. ಬೆಳಗಾಮಿ.—ಹಳೆಯ ಪಟ್ಟಣ. ಪೂರ್ವದಲ್ಲಿ ಇದು ಬನವಾಸಿ ಸಂಸ್ಥಾನಕ್ಕೆ ರಾಜಧಾನಿಯಾಗಿದ್ದಿತು.

೪. ನ್ಯಾಮತಿ.—ಇಲ್ಲಿ ಬೆಲ್ಲ, ಅಡಿಕೆ, ಇವುಗಳ ವ್ಯಾಪಾರ ಹೆಚ್ಚು.

೫. ತೀರ್ಥಹಳ್ಳಿ — ಇದು ತುಂಗಾ ನದಿಯ ದಡದಲ್ಲಿರುವ ಪುಣ್ಯಕ್ಷೇತ್ರ.

೬. ನಗರ —ಇದಕ್ಕೆ ಬಿದನೂರು ಎಂದು ಹೆಸರಿದ್ದಿತು. ಇದು ಹಿಂದೆ ಶಿವಪ್ಪ ನಾಯಕನೆಂಬ ಅರಸನಿಗೆ ರಾಜಧಾನಿಯಾಗಿದ್ದಿತು.

೭. ಸಾಗರ —ಇಲ್ಲಿ ಅಡಿಕೆಯ ವ್ಯಾಪಾರ ನಡೆಯುತ್ತದೆ. ಇದರ ಸಮೀಪದಲ್ಲಿ ಪ್ರಸಿದ್ಧವಾದ ಇಕ್ಕೇರಿಯ ಹಾಳು ಗ್ರಾಮವಿರುವುದು. ಇಕ್ಕೇರಿಯಲ್ಲಿರುವ ಅಘೋರೇಶ್ವರಸ್ವಾಮಿಯ ದೇವಸ್ಥಾನದಲ್ಲಿ ಶಿವಪ್ಪನಾಯಕನು ನಿರ್ಮಾಯಿಸಿದ್ದ ಶಿಸ್ತಿನ ಕಲ್ಲುಚೌಕವು ಈಗಲೂ ಇರುವುದು.

೮. ಸೊರಬ —ಇಲ್ಲಿಯ ಗುಡಿಗಾರರು ಗಂಧದಮರದಲ್ಲಿ ಮಾಡುವ ಚಿತ್ರದ ಕೆಲಸವು ಪ್ರಸಿದ್ಧವಾಗಿದೆ.

೯, ಕುಂಸಿ.—ಇಲ್ಲಿ ಮ್ಯಾಂಗನೀಸ್ ಗಣಿಯೊಂದು ಇರುವುದು. ಈ ಕಡೆ ದೊರೆಯುವ ಸಾಗುವಾನಿಮರದ ವ್ಯಾಪಾರಾಭಿವೃದ್ಧಿಗೆ ಅನುಕೂಲವಾಗಿ 'ಸಾ ಮಿಲ್' (ಗರಗಸದ ಕಾರ್ಖಾನೆ) ಒಂದು ಸ್ಥಾಪಿತವಾಗಿದೆ.

೧೦. ಕೆಳದಿ.—ಇದು ಪೂರ್ವದಲ್ಲಿ ಒಂದು ಸಂಸ್ಥಾನವಾಗಿದ್ದಿತು. ಇಲ್ಲಿಯ ಅರಸರ ಬಿರುದಾಂಕಿತವಾದ ಗಂಡಭೇರುಂಡಪಕ್ಷಿಯ ಆಕೃತಿಯನ್ನು ಅಲ್ಲಿಯ ದೇವಸ್ಥಾನದ ಒಳಭಾಗದ ಭುವನೇಶ್ವರಿಯಲ್ಲಿ ದೊಡ್ಡದಾಗಿ ಕೆತ್ತಿರುವುದು. ಮೈಸೂರು ರಾಜರು ಕೆಳದಿಯ ಬಿರುದಾಂಕಿತವನ್ನು ತಾಳಿ ಪ್ರಖ್ಯಾತಿಗೊಂಡರು.

ಸೂಚನೆ.—ಶಿವಪ್ಪನಾಯಕನ ಕಥೆಯನ್ನು ಹೇಳುವುದು. ಮಲೆನಾಡು, ಬಯಲು ಸೀಮೆ, ಇವುಗಳಿಗಿರುವ ವ್ಯತ್ಯಾಸವನ್ನು ಮಕ್ಕಳಿಂದಲೇ ಹೇಳಿಸಬೇಕು; ಮತ್ತು ಮಲೆನಾಡಿನಲ್ಲಿ ವಾಸಮಾಡುವವರಿಗೆ ಮಳೆಗಾಳಿಗಳ ಹೊಡೆತವನ್ನು ತಡೆಯುವಂತ ಮನೆಗಳನ್ನು ಕಟ್ಟುವುದೂ, ಮಳೆಗಾಲ ಬರುವುದಕ್ಕೆ ಮುಂಚೆಯೇ ಬೇಕಾದ ಸಾಮಗ್ರಿಗಳನ್ನು ಒದಗಿಸಿ ಇಟ್ಟುಕೊಳ್ಳುವುದೂ, ಅವಶ್ಯಕವೆಂಬುದನ್ನು ತಿಳಿಸುವುದು. ಶಿವಮೊಗ್ಗೆ, ಕುಂಸಿ (ಸಬ್ ತಾಲ್ಲೂಕು), ಚನ್ನಗಿರಿ, ಹೊನ್ನಾಳಿ ಶಿಕಾರಿಪುರ, ಸೊರಬ, ಸಾಗರ, ನಗರ, ತೀರ್ಥಹಳ್ಳಿ, ಇವೇ ಈ ಡಿಸ್ಟ್ರಿಕ್ಟಿನ ತಾಲ್ಲೂಕುಗಳು.

## ೫. ಚಿತ್ರದುರ್ಗದ ಡಿಸ್ಟ್ರಿಕ್ಟು.

ಮೇರೆಗಳು.—ಉತ್ತರದಲ್ಲಿ—ಬಳ್ಳಾರಿಜಿಲ್ಲೆ. ಪೂರ್ವದಲ್ಲಿ—ಅನಂತಪುರದಜಿಲ್ಲೆ. ತುಮಕೂರು ಡಿಸ್ಟ್ರಿಕ್ಟು. ದಕ್ಷಿಣದಲ್ಲಿ—ತುಮಕೂರು ಮತ್ತು ಕಡೂರು ಡಿಸ್ಟ್ರಿಕ್ಟುಗಳು. ಪಶ್ಚಿಮದಲ್ಲಿ—ಶಿವಮೊಗ್ಗೆ ಡಿಸ್ಟ್ರಿಕ್ಟು, ಧಾರ್ವಾಡಜಿಲ್ಲೆ.

ಇದು ೪,೧೭೦ ಚದರಮೈಲಿ ವಿಸ್ತಾರವುಳ್ಳುದಾಗಿದೆ. ಇದರಲ್ಲಿ ಜೋಗಿಮರಡಿ, ಜಟ್ಟಂಗರಾಮೇಶ್ವರ, ಚಿತ್ರದುರ್ಗ, ಹೊಸದುರ್ಗ, ಎಂಬುವು ಮುಖ್ಯವಾದ ಬೆಟ್ಟಗಳು. ಇಲ್ಲಿ ತುಂಗಭದ್ರೆ, ಹರಿದ್ರೆ, ವೇದಾವತಿ, ಈ ನದಿಗಳು ಹರಿಯುತ್ತವೆ. ವೇದಾವತಿಯಲ್ಲಿ ಬಿಸಲುಕಾಲದಲ್ಲಿ ನೀರು ಇರ ವುದಿಲ್ಲ. ಆದರೂ ಆಗ ಅದರಲ್ಲಿ ಬಾವಿ ತೋಡಿದರೆ ನೀರು ಬರುವುದು ; ಈ ನೀರನ್ನು ವ್ಯವಸಾಯಕ್ಕೆ ಉಪಯೋಗಿಸಿಕೊಳ್ಳುತ್ತಾರೆ. ಇಲ್ಲಿ ದೊಡ್ಡ ಕೆರೆಗಳಿಲ್ಲ. ಈಚೆಗೆ ಸರ್ಕಾರದವರು ಮಾರಿಕಣಿವೆಯ ಕೆರೆ ಎಂಬ ಬಲು ದೊಡ್ಡ ಕೆರೆಯನ್ನು ಕಟ್ಟಿಸಿದ್ದಾರೆ. ಈ ಕೆರೆಯ ಕೆಳಗೆ ಸಾವಿರಾರು ಎಕರೆ ಜಮೀನು ಸಾಗುವಳಿಗೆ ಬರುತ್ತಿದೆ. ಈ ಡಿಸ್ಟ್ರಿಕ್ಟಿನ ಜನಸಂಖ್ಯೆಯು ೫,೬೪,೨೪೩.

ಅರಳೆ, ಬತ್ತ, ಜೋಳ, ಇವೇ ಮುಖ್ಯವಾದ ಬೆಳೆಗಳು. ಈ ಡಿಸ್ಟ್ರಿಕ್ಟಿನ ಎಮ್ಮೆಗಳು ಉತ್ಕೃಷ್ಟವಾದುವು.

ಮುಖ್ಯಪಟ್ಟಣಗಳು.—೧. ಚಿತ್ರದುರ್ಗ.—ಮುಖ್ಯಪಟ್ಟಣ. ಇಲ್ಲಿ ಏಳುಸುತ್ತಿನ ಕೋಟೆ ಇದೆ. ಇಲ್ಲಿ ಮದಕರಿನಾಯಕನೆಂಬ ಪಾಳೆಯಗಾರನಿದ್ದನು. ಇಲ್ಲಿ ಸೊಗಸಾದ ಸೀರೆ, ಧೋತ್ರಗಳು ತಯಾರಾಗುತ್ತವೆ.

೨. ಮೊಳಕಾಲ್ಮುರು.—ಇಲ್ಲಿ ಸೊಗಸಾದ ರೇಷ್ಮೆ ಬಟ್ಟೆಗಳು ತಯಾರಾಗುತ್ತವೆ. ಈ ತಾಲ್ಲೂಕಿನಲ್ಲಿ ಅಶೋಕಮಹಾರಾಜನ ಶಿಲಾಶಾಸನಗಳು ಸಿಕ್ಕಿವೆ. ಇದರ ಸಮೀಪದಲ್ಲಿ ಎದುರುಧ್ವನಿ ಕೊಡುವ ಕೂಗುಬಂಡೆ ಇದೆ.

೩. ಹಿರಿಯೂರು. ಇದು ವೇದಾವತಿಯ ದಡದಲ್ಲಿದೆ. ಇದರ ಸಮೀಪದಲ್ಲಿ ವೇದಾವತಿಗೆ ಅಣೆಕಟ್ಟು ಹಾಕಿ, ಮಾರಿಕಣಿವೆಯ ಕೆರೆಯನ್ನು ಕಟ್ಟಿದ್ದಾರೆ.

೪. ಮತ್ತೋಡು.—ಇಲ್ಲಿ ಗಾಜಿನ ಬಳೆಗಳೂ, ಉಂಗುರಗಳೂ, ತಯಾರಾಗುತ್ತವೆ.

೫. ದಾವಣಗೆರೆ.—ಇದು ಒಂದು ದೊಡ್ಡ ವ್ಯಾಪಾರಸ್ಥಳ ; ಇಲ್ಲಿಯ ಕಂಬಳಿಗಳು ಪ್ರಸಿದ್ಧವಾದುವು. ಇಲ್ಲಿ ಹತ್ತಿಯನ್ನು ಎಕ್ಕುವ ಯಂತ್ರಗಳುಳ್ಳ ಕಾರ್ಖಾನೆಗಳಿವೆ.

೬. ಹರಿಹರ.—ತುಂಗಭದ್ರಾ ತೀರದಲ್ಲಿದೆ. ಇದು ಮೈಸೂರು ರೈಲಿನ ಕೊನೆಯ ಸ್ಟೇಷನ್. ಇಲ್ಲಿ ಒಂದು ಪುರಾತನ ದೇವಸ್ಥಾನವೂ, ಅನೇಕ ಶಿಲಾಶಾಸನಗಳೂ ಇವೆ.

ಸೂಚನೆ.—ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಕಂಬಳಿ ವಿಶೇಷವಾಗಿ ತಯಾರಾಗಲು ಕಾರಣವೇನೆಂಬುದನ್ನು ಬಾಲಕರಿಂದ ಹೇಳಿಸಬೇಕು. ಹೆಚ್ಚಾಗಿ ಬೆಳೆಯುವ ಅಥವಾ ತಯಾರುಮಾಡುವ ಪದಾರ್ಥಗಳನ್ನು ಇತರ ಸ್ಥಳಗಳಿಗೆ ಲಾಭವಿಟ್ಟು ಮಾರುತ್ತಾರೆ ಎಂಬುದನ್ನು ತಿಳಿಸಿ, ಯಾವ ಯಾವ ಊರಿಂದ ಯಾವ ಯಾವ ಪದಾರ್ಥಗಳನ್ನು ಬೇರೆ ಸ್ಥಳಕ್ಕೆ ಕಳುಹಿಸುತ್ತಾರೆಂಬುದನ್ನೂ ಹೇಳಿಸ

ದೇಕು. ಚಿತ್ರದುರ್ಗ, ಚಳ್ಳಕೆರೆ, ಮೊಳಕಾಲ್ಮೂರು, ಜಗಳೂರು, ದಾವಣಗೆರೆ, ಹರಿಹರ (ನಡ' ತಾಲ್ಲೂಕು), ಹೊಳಲಕೆರೆ, ಹೊಸದುರ್ಗ, ಹಿರಿಯೂರು, ಈ ಡಿಸ್ಟ್ರಿಕ್ಟಿನ ತಾಲ್ಲೂಕುಗಳು; ಇವು ಗಳನ್ನು ಭೂಪಟದ ಮೇಲೆ ಗುರ್ತಿಸಿ.

## ೬. ತುಮಕೂರು ಡಿಸ್ಟ್ರಿಕ್ಟು.

ಮೇರೆಗಳು.—ಉತ್ತರದಲ್ಲಿ-ಅನಂತಪುರ ಜಿಲ್ಲೆ, ಪೂರ್ವದಲ್ಲಿ-ಕೋಲಾರ ಮತ್ತು ಬೆಂಗಳೂರು ಡಿಸ್ಟ್ರಿಕ್ಟುಗಳು. ದಕ್ಷಿಣದಲ್ಲಿ-ಮೈಸೂರು ಡಿಸ್ಟ್ರಿಕ್ಟು. ಪಶ್ಚಿಮದಲ್ಲಿ-ಹಾಸನ, ಕಡೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳು.

ಇದು ೪,೦೬೨ ಚದರಮೈಲಿ ವಿಸ್ತಾರವಾಗಿದೆ. ಇಲ್ಲಿನ ಪ್ರಜಾಸಂಖ್ಯೆಯು ೬,೩೫,೩೪೬.

ಪಾವುಗಡದ ಬೆಟ್ಟ, ಮಧ್ದಗಿರಿದುರ್ಗ, ದೇವರಾಯದುರ್ಗ, ಹುಲಿಯೂರುದುರ್ಗ ಇವು ಮುಖ್ಯವಾದ ದುರ್ಗಗಳು.

ಇಲ್ಲಿ ಹರಿಯುವ ಜಯಮಂಗಲಾ ನದಿಯು ಉತ್ತರಪಿನಾಕಿನಿಗೂ, ಶಿಂಶಾ ನದಿಯು ಕಾವೇರಿಗೂ ಹೋಗಿ ಬೀಳುತ್ತವೆ. ಇಲ್ಲಿ ತಲಪರಿಕೆಗಳೆಂಬ ನೀರಿನ ಊಟೆ ಗಳು ಹೇರಳವಾಗಿವೆ. ಇಲ್ಲಿನ ಕೆರೆಗಳಲ್ಲೆಲ್ಲಾ ಕುಣಿಗಲುಕೆರೆಯೇ ದೊಡ್ಡದು. ಇಲ್ಲಿಯ ವಾಯುಗುಣವು ಆರೋಗ್ಯವಾದುದು.

ಇಲ್ಲಿ ಬತ್ತ, ಕಬ್ಬು, ತೆಂಗು, ಅಡಿಕೆ, ಇವು ವಿಶೇಷವಾಗಿ ಬೆಳೆಯಾಗುತ್ತವೆ. ಹೊಗೆಸೊಪ್ಪು, ಹಿಪ್ಪಲಿನೇರಳೆ, ಇವನ್ನೂ ಬೆಳೆಯುತ್ತಾರೆ.

ಚಿಕ್ಕನಾಯಕನಹಳ್ಳಿಯ ಸಮೀಪದಲ್ಲಿ ಉತ್ಕೃಷ್ಟವಾದ ಕಬ್ಬಿಣವೂ, ತುರುವೇಕೆರೆ ಯಲ್ಲಿ ಕರಿಯ ಕಲ್ಲುಗಳೂ, ದೊರೆಯುತ್ತವೆ. ಇಲ್ಲಿ ನವಾರ, ಕಂಬಳಿ, ನಾರಿನ ಹಗ್ಗ ರೇಷ್ಮೆಬಟ್ಟೆ, ಇವೇ ಮೊದಲಾದ ಕೈಗಾರಿಕೆಗಳು ಹೆಚ್ಚಾಗಿವೆ.

ಮುಖ್ಯಪಟ್ಟಣಗಳು.—೧. ತುಮಕೂರು.— ಮುಖ್ಯಪಟ್ಟಣ, ವ್ಯಾಪಾರಸ್ಥಳ.

೨. ಬೆಳ್ಳಾವಿ.—ಇಲ್ಲಿ ದೊಡ್ಡ ಸಂತೆ ಕೂಡುತ್ತದೆ.

೩. ಕೈದಾಳ.—ಇಲ್ಲಿ ಪ್ರಸಿದ್ಧ ಶಿಲ್ಪಿಯಾದ ಜಕಣಾಚಾರಿ ಹುಟ್ಟಿದನೆಂದು ಹೇಳುತ್ತಾರೆ.

೪. ಮಧ್ದಗಿರಿ.—ಇದರ ಸಮೀಪದಲ್ಲಿ ಮಧ್ದಗಿರಿ ಎಂಬ ಬಲವಾದ ದುರ್ಗವಿದೆ.

ಇಲ್ಲಿ ದಾಳಿಂಬದ ಹಣ್ಣನ್ನೂ, ಅಂಜೂರವನ್ನೂ, ಹೆಚ್ಚಾಗಿ ಬೆಳೆಯುತ್ತಾರೆ. ಇಲ್ಲಿ ತಾಮ್ರದ ಪಂಚಪಾತ್ರೆಗಳು ತಯಾರಾಗುತ್ತವೆ.

೫. ಗುಬ್ಬಿ.—ವ್ಯಾಪಾರಸ್ಥಳ. ಇಲ್ಲಿ ಅಡಿಕೆ, ಕೊಬ್ಬರಿ, ತೆಂಗಿನಕಾಯಿ ಇವುಗಳ ವ್ಯಾಪಾರ ಹೆಚ್ಚು.

೬. ಕುಣಿಗಲು.—ಇಲ್ಲಿ ಮೈಸೂರು ಸರ್ಕಾರದ ಕುದುರೆ ಸಾಕುವ ಇಲಾಖೆ ಇದೆ.

೭. ತಿಪಟೂರು.—ಇಲ್ಲಿ ಶನಿವಾರದ ದಿವಸ ದೊಡ್ಡ ಸಂತೆ ಕೂಡುತ್ತದೆ. ಇಲ್ಲಿಯೂ ತೆಂಗಿನಕಾಯಿ, ಕೊಬ್ಬರಿಗಳ ವ್ಯಾಪಾರವು ಹೆಚ್ಚು.

೮. ಹೊನ್ನವಳ್ಳಿ.—ಇಲ್ಲಿಯ ಗಂಗಪಾಣಿ ಎಂಬ ಎಳನೀರು ಪ್ರಸಿದ್ಧವಾದುದು.

೯. ಚಿಕ್ಕನಾಯಕನಹಳ್ಳಿ.—ಇಲ್ಲಿ ಅಡಿಕೆ, ತೆಂಗು, ವಿಶೇಷವಾಗಿ ಬೆಳೆಯುತ್ತವೆ. ಇದು ವ್ಯಾಪಾರಸ್ಥಳ; ಇಲ್ಲಿ ಹತ್ತಿಯ ಬಟ್ಟೆ, ರೇಷ್ಮೆಯ ಸೀರೆ, ವಸ್ತ್ರ, ಮುಗುಟಗಳು, ತಯಾರಾಗುತ್ತವೆ.

೧೦. ಸಿರಾ.—ಹಿಂದೆ ಇದು ದೊಡ್ಡ ಪಟ್ಟಣವಾಗಿದ್ದಿತು. ಶಿಥಿಲವಾದ ಕೋಟೆ ಇದೆ.

೧೧. ಸೀಬಿ.—ಇಲ್ಲಿ ಜಾತ್ರೆ ನಡೆಯುತ್ತದೆ. ಆ ಕಾಲದಲ್ಲಿ ವಿಶೇಷವಾಗಿ ವ್ಯಾಪಾರವಾಗುತ್ತದೆ.

೧೨. ಪಾವುಗಡ.—ಇಲ್ಲಿ ಹೈದರನ ಕಾಲದಲ್ಲಿ ಕಟ್ಟಿದ ಕೋಟೆ ಇದೆ.

ಸೂಚನೆ.—ಉಪಾಧ್ಯಾಯರು ದುರ್ಗವೆಂದರೆ ಏನೆಂಬುದನ್ನು ವಿವರಿಸುವುದು. ಪೂರ್ವ ಕಾಲದ ರಾಜರು ಶತ್ರುಗಳು ಬರಲು ಸಾಧ್ಯವಲ್ಲದ ಸ್ಥಳಗಳಲ್ಲಿ ಕೋಟೆಕೊತ್ತಲುಗಳನ್ನು ಕಟ್ಟುತ್ತಿದ್ದರು. ಬಾಲಕರಲ್ಲಿ ಯಾರಾದರೂ ದುರ್ಗವನ್ನು ನೋಡಿದ್ದರೆ, ಅವರಿಂದಲೇ ಅದರ ರೀತಿಯನ್ನು ಹೇಳಿಸುವುದು. ಹಿಪ್ಪಲಿನೇರಳೆಯನ್ನು ಏತಕ್ಕೆ ಬೆಳೆಯುವರು? ರೇಷ್ಮೆಯನ್ನು ಹೇಗೆ ತೆಗೆಯುವರು? ಎಂಬುದನ್ನು ತಿಳಿಸುವುದು. ಅನ್ಯದೇಶಗಳಲ್ಲಿ ಈಚೆಗೆ ಕೊಬ್ಬರಿಯ ತುಪ್ಪದಿಂದ ಮೇಣದಬತ್ತಿ, ಸಾಬೂನು, ಮಿಠಾಯಿಗಳನ್ನು ತಯಾರು ಮಾಡುವುದರಿಂದ ಆ ದೂರದೇಶಗಳಿಗೆ ಕೊಬ್ಬರಿಯನ್ನು ಲಾಭವಿಟ್ಟು ಕಳುಹಿಸುವರು, ತುಮಕೂರು ಡಿಸ್ಟ್ರಿಕ್ಟಿಗೆ ಸೇರಿದ ತಾಲ್ಲೂಕುಗಳು-ತುಮಕೂರು, ಮದ್ದಗಿರಿ, ಕೊರಟಗೆರೆ, ಸಿರಾ, ಪಾವುಗಡ, ಚಿಕ್ಕನಾಯಕನಹಳ್ಳಿ, ಗುಬ್ಬಿ, ತಿಪಟೂರು, ತುರುವೇಕೆರೆ (ಸಬ್ ತಾಲ್ಲೂಕು), ಕುಣಿಗಲು.

## ೭. ಕೋಲಾರ ಡಿಸ್ಟ್ರಿಕ್ಟು.

ಮೇರೆಗಳು.—ಉತ್ತರದಲ್ಲಿ-ಅನಂತಪುರ ಜಿಲ್ಲೆ. ಪೂರ್ವದಲ್ಲಿ-ಕಡಪ. ಉತ್ತರ

ಆರ್ಕಾಟು ಜಿಲ್ಲೆಗಳು. ದಕ್ಷಿಣದಲ್ಲಿ—ಸೇಲಂ ಜಿಲ್ಲೆ. ಪಶ್ಚಿಮದಲ್ಲಿ—ಬೆಂಗಳೂರು, ತುಮಕೂರು ಡಿಸ್ಟ್ರಿಕ್ಟುಗಳು.

ಇದು ೩,೧೮೮ ಚದರಮೈಲಿ ವಿಸ್ತೀರ್ಣವುಳ್ಳುದಾಗಿದೆ. ಇಲ್ಲಿನ ಜನಸಂಖ್ಯೆ ೭,೮೦,೦೦೦. ಇಲ್ಲಿನ ವಾಯುಗುಣವು ಆರೋಗ್ಯವಾದುದು. ಇದರಲ್ಲಿ ಮೂರು ಸಾಲು ಬೆಟ್ಟಗಳಿವೆ. ಶತಶೃಂಗಪರ್ವತವೂ, ನಂದಿದುರ್ಗವೂ, ಮುಖ್ಯವಾದ ಬೆಟ್ಟಗಳು ನಂದಿಬೆಟ್ಟದಲ್ಲಿ ಉತ್ತರಪಿನಾಕಿನಿ, ಪಾಲಾರ್. ದಕ್ಷಿಣಪಿನಾಕಿನಿ, ಅರ್ಕಾವತಿ, ಪಾಪಘ್ನಿ, ಎಂಬ ನದಿಗಳೂ, ಇವುಗಳ ಉಪನದಿಗಳೂ, ಹುಟ್ಟುತ್ತವೆ. ಇಲ್ಲಿ ಹಲವು ಸಾಲು ಕೆರೆಗಳಿವೆ. ಇಲ್ಲಿ ಕಬ್ಬು, ಬತ್ತ, ರಾಗಿ, ಆಲೂಗೆಡ್ಡೆ, ಹಿಪ್ಪಲನೇರಳೆ, ಮೊದಲಾದುವನ್ನು ಬೆಳೆಯುತ್ತಾರೆ. ಇಲ್ಲಿ ಹೊಂಗೆಮರಗಳು ಹೆಚ್ಚು. ಉರಿಗ, ಮಾರಿಕೊಪ್ಪ, ಮುಂತಾದ ಸ್ಥಳಗಳಲ್ಲಿ ಚಿನ್ನದ ಗಣಿಗಳಿವೆ. ಇವುಗಳಿಂದ ಚಿನ್ನವನ್ನು ತೆಗೆಯುತ್ತಾರೆ. ಈ ಡಿಸ್ಟ್ರಿಕ್ಟಿನಲ್ಲಿ ಬೆಲ್ಲ, ಸಕ್ಕರೆಗಳೂ, ಕಂಬಳಿ, ಚಕ್ಕು, ಮೊದಲಾದುವೂ, ರೇಷ್ಮೆಯೂ ತಯಾರಾಗುತ್ತವೆ. ಇಲ್ಲಿ ದನಗಳ ಮಾರಾಟವು ಹೆಚ್ಚು.

ಮುಖ್ಯಪಟ್ಟಣಗಳು.—೧. ಕೋಲಾರ.—ಮುಖ್ಯಪಟ್ಟಣ. ಇಲ್ಲಿ ಕಂಬಳಿಗಳು ತಯಾರಾಗುತ್ತವೆ.

೨. ಗೌರಿಬಿದನೂರು.—ಇಲ್ಲಿ ಒಂದು ಸಕ್ಕರೆ ಕಾರ್ಖಾನೆ ಇದೆ.

೩. ಚಿಕ್ಕಬಳ್ಳಾಪುರ.—ಇಲ್ಲಿ ಒಂದು ಕಬ್ಬಿನ ಗಾಣದ ಕಾರ್ಖಾನೆ ಇದೆ. ಇಲ್ಲಿ ರೇಷ್ಮೆಯನ್ನು ತಯಾರುಮಾಡುತ್ತಾರೆ.

೪. ನಂದಿದುರ್ಗ.—ಇದು ಚಿಕ್ಕಬಳ್ಳಾಪುರದ ಸಮೀಪದಲ್ಲಿದೆ. ಬೇಸಿಗೆಯಲ್ಲಿ ವಾಸಕ್ಕೆ ಅನುಕೂಲವಾಗಿರುತ್ತದೆ. ಇದರಮೇಲೆ ಅಮೃತಸರೋವರವೆಂಬ ಒಂದು ಪುಷ್ಕರಣಿ ಇದೆ. ಇದಲ್ಲದೆ ಇಲ್ಲಿ ಒಂದು ಕೋಟೆಯೂ ಇದೆ.

೫. ಶಿಡ್ಲಘಟ್ಟ.—ಇಲ್ಲಿ ಉರುಳುಗೆಡ್ಡೆ ಚೆನ್ನಾಗಿ ಬೆಳೆಯುತ್ತದೆ.

೬. ಚಿಂತಾಮಣಿ.—ವ್ಯಾಪಾರಸ್ಥಳ. ಇಲ್ಲಿಯ ದಾಳಿಂಬದ ಹಣ್ಣುಗಳು ಪ್ರಸಿದ್ಧವಾಗಿವೆ.

೭. ಶ್ರೀನಿವಾಸಪುರ.—ಇಲ್ಲಿ ಕಬ್ಬಿಣದ ಚಿಲ್ಲರೆ ಸಾಮಾನುಗಳು ತಯಾರಾಗುತ್ತವೆ.

೮. ಉರಿಗ.—ಇಲ್ಲಿ ಚಿನ್ನದ ಗಣಿಗಳಿವೆ. ಇವುಗಳಲ್ಲಿ ಕೆಲಸಮಾಡಲು ನಾನಾ ದೇಶದ ಜನರು ಬಂದಿರುವರು. ಈಚೆಗೆ ರಾಬರ್ಟ್‌ಸನ್‌ಪೇಟೆ ಎಂಬುದು ಒಂದು ಪಟ್ಟಣವಾಗಿದೆ.

ಸೂಚನೆ.—ಈ ಪ್ರಾಂತ್ಯ ಚಿನ್ನದಗಣಿ ಸಿಕ್ಕಿದುದರಿಂದ ಇಲ್ಲಿ ಈಗ ಬಹುಜನರು ಬಂದು ಸೇರಿರುವರು. ಸಣ್ಣ ಸಣ್ಣ ಊರುಗಳು ಏರ್ಪಟ್ಟು ಇರುವುವು. ಜೀವನೋಪಾಯ ಇದ್ದೆಡೆಯಲ್ಲಿ ಜನಬಾಹುಳ್ಯ ಉಂಟೆಂಬುದನ್ನು ನಿದರ್ಶಿಸುವುದು. ಕೋಲಾರ, ಮುಳಬಾಗಲು, ಶ್ರೀನಿವಾಸಪುರ, ಚಿಂತಾಮಣಿ, ಶಿಡ್ಲಘಟ್ಟ, ಬಾಗೇಪಲ್ಲಿ, ಗುಡಿಬಂಡೆ (ಸಬ್ ತಾಲ್ಲೂಕು), ಗೋರಿಬಿದನೂರು, ಚಿಕ್ಕಬಳ್ಳಾಪುರ, ಮಾಲೂರು, ಬೌರಿಂಗ್‌ಪೇಟೆ ಇವು ಈ ಡಿಸ್ಟ್ರಿಕ್ಟಿನ ತಾಲ್ಲೂಕುಗಳು.

## ೮. ಬೆಂಗಳೂರು ಡಿಸ್ಟ್ರಿಕ್ಟು.

ಮೇರೆಗಳು.—ಉತ್ತರದಲ್ಲಿ-ತುಮಕೂರು, ಕೋಲಾರ ಡಿಸ್ಟ್ರಿಕ್ಟುಗಳು. ಪೂರ್ವದಲ್ಲಿ-ಕೋಲಾರ ಡಿಸ್ಟ್ರಿಕ್ಟು, ಸೇಲಂ ಜಿಲ್ಲೆ. ದಕ್ಷಿಣದಲ್ಲಿ-ಕೊಯಮುತ್ತೂರು ಜಿಲ್ಲೆ. ಪಶ್ಚಿಮದಲ್ಲಿ-ಮೈಸೂರು, ತುಮಕೂರು ಡಿಸ್ಟ್ರಿಕ್ಟುಗಳು.



ಬೆಂಗಳೂರು ದೊಡ್ಡಪೇಟೆ.

ಈ ಡಿಸ್ಟ್ರಿಕ್ಟು ವಿಸ್ತಾರದಲ್ಲಿ ೩,೧೭೮ ಚದರಮೈಲಿಗಳಷ್ಟಿದೆ. ಇದರ ಪ್ರಜಾಸಂಖ್ಯೆ, ೮,೪೮,೧೭೩. ಇದರ ನೆಲಮಟ್ಟವು ಇತರ ಡಿಸ್ಟ್ರಿಕ್ಟುಗಳ ಮಟ್ಟಕ್ಕಿಂತ ಎತ್ತರವಾಗಿದೆ. ಶಿವಗಂಗೆ, ಸಾವನದುರ್ಗ, ಇವು ಮುಖ್ಯವಾದ ಬೆಟ್ಟಗಳು. ಇಲ್ಲಿ ದಕ್ಷಿಣಪಿನಾಕಿನೀ, ಅರ್ಕಾವತಿ, ಕಣ್ವನದಿ, ಮೊದಲಾದ ನದಿಗಳು ಹರಿಯುತ್ತವೆ. ಅರ್ಕಾವತಿಯಿಂದ ನೀರನ್ನು ನಲ್ಲಿಗಳಮೂಲಕ ತಂದು ಬೆಂಗಳೂರಿಗೂ, ನಂದಿಗೂ, ಒದಗಿಸುತ್ತಾರೆ.

ಇಲ್ಲಿಯ ಕೆರೆಗಳಲ್ಲಿ ಅಗರದ ಕೆರೆಯೇ ದೊಡ್ಡದು. ಕಾನಕಾನಹಳ್ಳಿ, ಮಾಗಡಿ ತಾಲ್ಲೂಕುಗಳು ವಿನಾ ಉಳಿದ ಭಾಗಗಳು ಆರೋಗ್ಯಕರವಾಗಿವೆ.

ಇಲ್ಲಿ ರಾಗಿ, ಅವರೆ, ಜೋಳ, ತೊಗರಿ, ಮುಂತಾದುವು ಬೆಳೆಯಾಗುತ್ತವೆ. ಹರಳು, ಎಳ್ಳು, ಉರಳುಗೆಡ್ಡೆ, ಇವುಗಳನ್ನು ವಿಶೇಷವಾಗಿ ಪೈರುಮಾಡುತ್ತಾರೆ. ಭೂಗುಣವೂ, ವಾಯುಗುಣವೂ, ತಕ್ಕಮಟ್ಟಿಗೆ ಅನುಕೂಲವಾಗಿರುವ ಬೆಂಗಳೂರಿನ ಬಳಿ ಸಮಶೀತೋಷ್ಣವಲಯದಲ್ಲಿ ಬೆಳೆಯುವ ಕೋಸುಗೆಡ್ಡೆ, ನವಿಲ್‌ಕೋಸು, ಮುಂತಾದ ಕಾಯಿಪಲ್ಯಗಳೂ, ಸೇಬು, ಪೀಚಸ್, ಮುಂತಾದ ಹಣ್ಣು ಹಂಪಲೂ, ಹೇರಳವಾಗಿ ಬೆಳೆಯುತ್ತವೆ

ಮುಖ್ಯಪಟ್ಟಣಗಳು.—೧. ಬೆಂಗಳೂರು.—ಮೈಸೂರು ಸಂಸ್ಥಾನದಲ್ಲೆಲ್ಲಾ ದೊಡ್ಡ ಪಟ್ಟಣ. ಇದು ಪೇಟೆ ಎಂದೂ, ಲಷ್ಕರ್ ಅಥವಾ ದಂಡು ಎಂದೂ, ಎರಡು




ಭಾಗವಾಗಿದೆ. ಪೇಟೆಯಲ್ಲಿ ನೂಲಿನ ಕಾರ್ಖಾನೆಯೂ, ನೆಯಿಗೆಯ ಕಾರ್ಖಾನೆಯೂ, ಎಣ್ಣೆಯ ಗಾಣಗಳೂ, ಇವೆ. ಜಂಖಾನೆಗಳು, ರತ್ನಕಂಬಳಿಗಳೂ, ರೇಷ್ಮೆಯ ಬಟ್ಟೆಗಳೂ, ತಯಾರಾಗುತ್ತವೆ. ಇಲ್ಲಿ ಅಠಾರಾಕಚೇರಿಯೂ, 'ಮ್ಯೂಸಿಯಂ' ಎಂಬ ತಮಾಷೆಬಂಗಲೆಯೂ, 'ಲಾಲ್‌ಬಾಗ್' ಎಂಬ ಮನೋಹರವಾದ ತೋಟವೂ, ಇವೆ. ದಂಡಿನಲ್ಲಿ ಇಂಗ್ಲೀಷರ ಸೇನೆ ಇದೆ; ಇಲ್ಲಿ ಅನೇಕ ಷಾಪುಗಳಿವೆ; ಇಂಗ್ಲೀಷು

ಜನರನೇಕರು ವಾಸವಾಗಿದ್ದಾರೆ. ದಂಡಿಗೆ ಸಮೀಪದಲ್ಲಿಯೇ ಒಂದು ವಿದ್ಯಾನಿಲಯವು ಏರ್ಪಟ್ಟಿದೆ.

೨. ದೊಡ್ಡಬಳ್ಳಾಪುರ.—ಇದು ಅರ್ಕಾವತೀ ತೀರದಲ್ಲಿದೆ. ಇಲ್ಲಿ ನಾನಾವಿಧವಾದ ಸೀರೆಗಳು ತಯಾರಾಗುತ್ತವೆ.

೩. ದೇವನಹಳ್ಳಿ.—ಇದು ಟಿಪ್ಪುಸುಲ್ತಾನನು ಹುಟ್ಟಿದ ಸ್ಥಳವು. ಇಲ್ಲಿ ಒಂದು ಕೋಟೆ ಇದೆ.

೪. ಹೊಸಕೋಟೆ.—ಇದು ದಕ್ಷಿಣಪಿನಾಕಿನಿಯ ತೀರದಲ್ಲಿದೆ. ಇಲ್ಲಿ ದೊಡ್ಡ ಹುಲ್ಲುಗಾವಲುಗಳಿವೆ.

೫. ಚನ್ನಪಟ್ಟಣ.—ಇಲ್ಲಿ ಬಣ್ಣದ ಸಾಮಾನುಗಳೂ, ವೀಣೆ ತಂತಿಗಳೂ, ರೇಷ್ಮೆಯೂ ತಯಾರಾಗುತ್ತವೆ.

೬. ಕ್ಲೋಸ್‌ಪೇಟೆ.—ಇಲ್ಲಿ ರೇಷ್ಮೆಯ ಹುಳುಗಳನ್ನು ವಿಶೇಷವಾಗಿ ಸಾಕುತ್ತಾರೆ.

೭. ಮಾಗಡಿ.—ಇದು ಇಮ್ಮಡಿ ಕೆಂಪೇಗೌಡನ ಸ್ಥಳ. ಕಂಚಿನ ಸಾಮಾನುಗಳೂ, ತಂಬೂರಿ, ವೀಣೆ ಮೊದಲಾದುವೂ ತಯಾರಾಗುತ್ತವೆ.

ಸೂಚನೆ.—ದೊಡ್ಡಬಳ್ಳಾಪುರ, ದೇವನಹಳ್ಳಿ, ಕಾನಕಾನಹಳ್ಳಿ, ಇವು ಫಲವತ್ತಾದ ಪ್ರದೇಶಗಳು. ಇಲ್ಲಿ ಒಳ್ಳೆಯ ರಾಗಿ, ಉರುಳುಗೆಡ್ಡೆ, ಹೇರಳವಾಗಿ ಬೆಳೆಯುತ್ತವೆ. ಬೆಂಗಳೂರು, ಹೊಸಕೋಟೆ, ದೇವನಹಳ್ಳಿ, ದೊಡ್ಡಬಳ್ಳಾಪುರ, ನೆಲಮಂಗಲ, ಮಾಗಡಿ, ಚೆನ್ನಪಟ್ಟಣ, ಕ್ಲೋಸ್‌ಪೇಟೆ (ಸಬ್ ತಾಲ್ಲೂಕು), ಕಾನಕಾನಹಳ್ಳಿ, ಆನೆಕಲ್ಲು, ಈ ಡಿಸ್ಟ್ರಿಕ್ಟಿಗೆ ಸೇರಿದ ತಾಲ್ಲೂಕುಗಳು.


---

## ೨೭. ಮದ್ರಾಸು ಅಧಿಪತ್ಯ.

ಮೈಸೂರು ದೇಶದ ಎಲ್ಲೆಯಲ್ಲಿ ಬಳ್ಳಾರಿ, ಅನಂತಪುರ, ಉತ್ತರ ಆರ್ಕಾಟು, ಇವೇ ಮೊದಲಾದ ಜಿಲ್ಲೆಗಳು ಇವೆಯಷ್ಟೆ; ಇಂತಹ ೨೩ ಜಿಲ್ಲೆಗಳು ಸೇರಿ ಮದ್ರಾಸು ಅಧಿಪತ್ಯವೆನಿಸಿಕೊಂಡಿವೆ.

ಮೇರೆಗಳು.—ಪೂರ್ವ, ದಕ್ಷಿಣ, ಪಶ್ಚಿಮಗಳಲ್ಲಿ ಸಮುದ್ರವೂ, ಉತ್ತರದಲ್ಲಿ ಬೊಂಬಾಯಿ ಅಧಿಪತ್ಯ, ಹೈದರಾಬಾದು, ಮಧ್ಯಪ್ರಾಂತ್ಯ, ನಿಮ್ನಪ್ರಾಂತ್ಯಗಳು, ಮೈಸೂರು.

ಇದು ಒಟ್ಟು ೧,೫೦,೦೦೦ ಚದರಮೈಲಿ ವಿಸ್ತೀರ್ಣವುಳ್ಳುದಾಗಿದೆ. ಇದು


ಮಧ್ಯಪ್ರಾಂತ್ಯಗಳು
ಹೈದರಾಬಾದ್
ಗಂಜಾಂ
ವೈಶಾಖಪಟ್ಟಣ
ಕರ್ನೂಲ್
ಮಚಲಿಬಂದರ್
ನೆಲ್ಲೂರು
ತಿರುಪತಿ
ಪುಲಿಕಾಟ್
ಮದರಾಸು
ಚೆಂಗಲ್ಪಟ್ಟು
ಉಡುಪಿ
ಮಂಗಳೂರು
ಸೇಲಂ
ನೀಲಗಿರಿ
ಮಧುರೆ
ರಾಮೇಶ್ವರ
ಲಂಕ


ಮದ್ರಾಸು ಅಧಿಪತ್ಯ.

ಬಯಲುಸೀಮೆ. ಇದರ ಪಶ್ಚಿಮದಲ್ಲಿರುವ ಪಶ್ಚಿಮಘಟ್ಟಗಳೂ, ಪೂರ್ವದಲ್ಲಿರುವ ಪೂರ್ವ ಘಟ್ಟಗಳೂ, ನೀಲಗಿರಿಯು ಹತ್ತಿರ ಸೇರುತ್ತವೆ. ದೊಡ್ಡಬೆಟ್ಟವೂ, ಆನೆಮುಡಿಯೂ, ಬಹಳ ಎತ್ತರವಾದ ಪರ್ವತ ಶಿಖರಗಳು.

ಸೂಚನೆ.—ಪೂರ್ವಘಟ್ಟಗಳು ಸಮುದ್ರತೀರಕ್ಕೆ ಎಷ್ಟು ದೂರದಲ್ಲಿವೆ ಎಂಬುದನ್ನೂ, ಪಶ್ಚಿಮ ಘಟ್ಟಗಳು ಎಷ್ಟು ಹತ್ತಿರದಲ್ಲಿವೆ ಎಂಬುದನ್ನೂ ಭೂಪಟವನ್ನು ತೋರಿಸಿ ಬಾಲಕರಿಂದ ಹೇಳಿಸ ಬೇಕು.

ಈ ಅಧಿಪತ್ಯದಲ್ಲಿ ಗೋದಾವರಿ, ಕೃಷ್ಣ, ಉತ್ತರಪಿನಾಕಿನಿ, ಪಾಲಾರು, ದಕ್ಷಿಣ ಪಿನಾಕಿನಿ, ಕಾವೇರಿ, ತಾಮ್ರಪರ್ಣಿ, ಇವೇ ಮೊದಲಾದ ನದಿಗಳು ಹರಿದು ಪೂರ್ವ ಸಮುದ್ರಕ್ಕೆ ಸೇರುತ್ತವೆ.

ಸೂಚನೆ.—ನದಿಗಳಿಗೆ ಪೂರ್ವಘಟ್ಟಗಳು ದಾರಿಕೊಟ್ಟಿರುವುದನ್ನು ತೋರಿಸಬೇಕು.



ಮದ್ರಾಸು ಬಂದರು.

ಮದ್ರಾಸು ಅಧಿಪತ್ಯದಲ್ಲಿ ಸಾಮಾನ್ಯವಾಗಿ ಬಿಸಿಲತಾಪ ಹೆಚ್ಚು ; ವಾಯುಗುಣವು ಸ್ವಲ್ಪಮಟ್ಟಿಗೆ ಆರೋಗ್ಯಕರವಾಗಿದೆ. ಇಲ್ಲಿಯ ಜನಸಂಖ್ಯೆಯು ೪,೨೪,೦೦,೦೦೦. ವ್ಯವಸಾಯವೇ ಇವರ ಮುಖ್ಯ ಕಸಬು. ಕೆಲವರು ವ್ಯಾಪಾರದಿಂದ ಜೀವಿಸುವರು. ಸಮುದ್ರದ ಕರೆಯ ಮೇಲಣ ಹಳ್ಳಿಗಳಲ್ಲಿರುವವರನೇಕರು ಮೀನು ಹಿಡಿದು ಜೀವಿಸುವರು.

ಈ ಅಧಿಪತ್ಯದಲ್ಲಿ ಒಳ್ಳೆಯ ರಸ್ತೆಗಳು ಇವೆ ; ಅಲ್ಲದೆ ಮದ್ರಾಸು ರೈಲ್ವೆ, ಸೌತ್

ಇಂಡಿಯನ್ ರೈಲ್ವೆ, ಸದರ್ನ್ ಮರಾಟಾ ರೈಲ್ವೆ, ಈಸ್ಟ್ ಕೋಸ್ಟ್ ರೈಲ್ವೆ, ಎಂಬ ರೈಲುಹಾದಿಗಳೂ ಇವೆ.

ಸೂಚನೆ.—ಈ ರೈಲುದಾರಿಗಳನ್ನು ಬಾಲಕರಿಗೆ ತೋರಿಸಬೇಕು.

ಮದ್ರಾಸು ಅಧಿಪತ್ಯವು ಬ್ರಿಟಿಷ್ ಸರ್ಕಾರಕ್ಕೆ ಸೇರಿದೆ. ಇಲ್ಲಿಯ ರಾಜ್ಯಕಾರ್ಯವನ್ನು ಗವರ್ನರವರು ಕೌನ್ಸಿಲ್ ಎಂಬ ಸಭೆಯ ಸಹಾಯದಿಂದ ನಿರ್ವಹಿಸುತ್ತಾರೆ.

ರಾಜಕೀಯ ಕಾರ್ಯಗಳಿಗಾಗಿ ಈ ಅಧಿಪತ್ಯವನ್ನು ೨೩ ಜಿಲ್ಲೆಗಳಾಗಿ ವಿಭಾಗಿಸಿದ್ದಾರೆ. ಇವುಗಳಲ್ಲಿ ೧೨ ಪೂರ್ವಸಮುದ್ರತೀರದಲ್ಲಿಯೂ, ೨ ಪಶ್ಚಿಮಸಮುದ್ರತೀರದಲ್ಲಿಯೂ, ೯ ಮಧ್ಯಪ್ರದೇಶದಲ್ಲಿಯೂ ಇವೆ.

ಮದ್ರಾಸು ಅಧಿಪತ್ಯದ ಮುಖ್ಯಪಟ್ಟಣಗಳು.—೧. ಮದ್ರಾಸು.—ಈ ಅಧಿಪತ್ಯಕ್ಕೆ ಮುಖ್ಯಪಟ್ಟಣ; ಸಮುದ್ರತೀರದಲ್ಲಿದೆ; ಗವರ್ನರು ಇಲ್ಲಿ ವಾಸಮಾಡುತ್ತಾರೆ. ಇದು ವಿದ್ಯಾಭ್ಯಾಸಕ್ಕೆ ಮುಖ್ಯಸ್ಥಳ. ದೊಡ್ಡ ವ್ಯಾಪಾರಸ್ಥಳ; ಇಲ್ಲಿ ಹಡಗು ನಿಲ್ಲಲು ಬಂದರನ್ನು ಕಟ್ಟಿರುವರು.

೨. ವಿಶಾಖಪಟ್ಟಣ.—ಜಿಲ್ಲೆಯ ಮುಖ್ಯಪಟ್ಟಣ. ಇಲ್ಲಿ ಸೊಗಸಾದ ದಂತದ ಮತ್ತು ಕೊಂಬಿನ ಸಾಮಾನುಗಳು ತಯಾರಾಗುತ್ತವೆ.

ಇಲ್ಲಿ ಕೊಲೇರು, ಪುಲಿಕಾಡು, ಚಿಲಕ ಎಂಬ ಸರೋವರಗಳಿವೆ. ಈ ದೇಶದ ಉತ್ತರದಲ್ಲಿ ತೆಲುಗನ್ನೂ, ಮಧ್ಯದಲ್ಲಿಯೂ, ದಕ್ಷಿಣದಲ್ಲಿಯೂ, ಅರವವನ್ನೂ ಮತ್ತು ಮಲೆಯಾಳವನ್ನೂ, ಪಶ್ಚಿಮದಲ್ಲಿ ಕೆಲವುಕಡೆ ಕನ್ನಡವನ್ನೂ, ಮಾತನಾಡುತ್ತಾರೆ. ರಾಜಭಾಷೆಯಾದ ಇಂಗ್ಲೀಷು ಎಲ್ಲೆಲ್ಲಿಯೂ ಹರಡಿಕೊಳ್ಳುತ್ತಿದೆ.

ಇಲ್ಲಿ ನೀರಾವರಿ ಚೆನ್ನಾಗಿರುವ ಕಡೆ ಬತ್ತ, ಕಬ್ಬು, ಹತ್ತಿ, ನೀಲಿ, ಹೊಗೆಯಸೊಪ್ಪು, ಹರಳು ಮತ್ತು ಎಳ್ಳು ಬೆಳೆಯಾಗುತ್ತವೆ; ಪರ್ವತಪ್ರಾಂತ್ಯಗಳಲ್ಲಿ ಕಾಫಿ, ಟೀ, ಸಿಂಕೋನಾ (ಇದರಿಂದ ಜ್ವರಹರಿಯಾದ ಕ್ವಿನೈನ್ ತಯಾರಾಗುತ್ತದೆ); ಮಲೆಯಾಳದಲ್ಲಿ ಏಲಕ್ಕಿ, ಮೆಣಸು, ಬೆಳೆಯುತ್ತವೆ. ಸಮುದ್ರತೀರದಲ್ಲಿ ತೆಂಗು ವಿಶೇಷವಾಗಿ ಬೆಳೆಯುವುದು. ತೇಗ, ಗಂಧ, ಬೀಟೆ ಮರಗಳೂ ಹೆಚ್ಚಾಗಿ ಬೆಳೆಯುವುವು.

ಈ ಅಧಿಪತ್ಯದಲ್ಲಿ ಒಳ್ಳೆಯ ಕಬ್ಬಿಣ, ಮ್ಯಾಂಗನೀಸ್ ಲೋಹ, ಕಾಗೆಬಂಗಾರ ಮತ್ತು ಪ್ಕ್ಯಾಲುತುತ್ತ, ದೊರೆಯುವುವು. ಸಮುದ್ರತೀರದಲ್ಲಿ ನೀರನ್ನು ಅಟ್ಟಿಸಿ ಉಪ್ಪನ್ನು ಮಾಡುವರು.

ನೀಲಗಿರಿಯಲ್ಲಿ ತೋಡರೆಂಬ ಕಾಡುಜನರು ವಾಸಮಾಡುವರು.

೩. ರಾಜಮಹೇಂದ್ರ.—ಗೋದಾವರಿ ಜಿಲ್ಲೆಗೆ ಮುಖ್ಯಪಟ್ಟಣ. ಇದರ ಹತ್ತಿರವಿರುವ ಎಲ್ಲೂರು ರತ್ನಕಂಬಳಿಗಳಿಗೆ ಪ್ರಸಿದ್ಧವಾಗಿದೆ.

೪. ನೆಲ್ಲೂರು.—ದನಗಳಿಗೆ ಪ್ರಸಿದ್ಧವಾದ ಸ್ಥಳ. ಇಲ್ಲಿ ಬತ್ತದ ಬೆಳೆ ಹೆಚ್ಚು-ಅಕ್ಕಿ ತಯಾರಾಗಿ ಹೊರಕ್ಕೆ ಹೆಚ್ಚಾಗಿ ಸಾಗುವುದು.

೫. ತಿರುಪತಿ.—ಯಾತ್ರಾಸ್ಥಳ. ಪೂರ್ವಘಟ್ಟಗಳ ಶ್ರೇಣಿಗಳಿಗೆ ಸೇರಿದ ವೆಂಕಟಗಿರಿಯಮೇಲೆ ಶ್ರೀನಿವಾಸನ ದೇವಾಲಯವಿದೆ.



ತೋಡರು.

೬. ಚಿದಂಬರ.—ಯಾತ್ರಾಸ್ಥಳ.

೭. ತಂಜಾವೂರು.—ರೇಷ್ಮೆ ಬಟ್ಟೆಗಳೂ, ವೀಣೆಯತಂತಿಯೂ, ತಯಾರಾಗುತ್ತವೆ. ಇಲ್ಲಿ ಒಂದು ಶಿವಾಲಯವಿರುವುದು. ಇದು ಮರಾಟಿಯವರ ದಕ್ಷಿಣ ರಾಜಧಾನಿಯಾಗಿದ್ದಿತು.

೮. ಕುಂಭಕೋಣ.—ಯಾತ್ರಾಸ್ಥಳ. ತಾಮ್ರದ ಮತ್ತು ಕಂಚಿನ ಪಾತ್ರೆಗಳಿಗೆ ಪ್ರಸಿದ್ಧವಾದುದು.

೯. ಶ್ರೀರಂಗ.—ಕಾವೇರಿಯ ತೀರದಲ್ಲಿದೆ ; ಯಾತ್ರಾಸ್ಥಳ.

೧೦. ತಿರುಚನಾಪಲ್ಲಿ —ಇಲ್ಲಿ ಒಳ್ಳೇ ಒಡವೆಗಳು ತಯಾರಾಗುತ್ತವೆ. ಇದು ಚರಿತೆಯಲ್ಲಿ ಪ್ರಸಿದ್ಧವಾದ ಸ್ಥಳ. ಇಲ್ಲಿ ಒಂದು ಬಂಡೆಯಮೇಲೆ ಕಟ್ಟಿರುವ ಮಾತೃಭೂತೇಶ್ವರ ದೇವಸ್ಥಾನವು ಪ್ರಸಿದ್ಧವಾಗಿದೆ.

೧೧. ಮಧುರೆ.—ವ್ಯಾಪಾರಸ್ಥಳ ಇಲ್ಲಿ ಪ್ರಸಿದ್ಧವಾದ ಮೀನಾಕ್ಷಿ ದೇವಸ್ಥಾನವಿದೆ.

೧೨. ರಾಮೇಶ್ವರ.—ಪ್ರಸಿದ್ಧವಾದ ಯಾತ್ರಾಸ್ಥಳ.

೧೩. ಉದಕಮಂಡಲ.—ಇದು ನೀಲಗಿರಿಯಲ್ಲಿದೆ ; ಇದು ಭೂಮಟ್ಟಕ್ಕೆ ೭,೦೦೦ ಅಡಿಗಳ ಎತ್ತರದಮೇಲಿದೆ. ಗವರ್ನರೇ ಮುಂತಾದ ಅಧಿಕಾರಿಗಳೂ, ನಮ್ಮ ಮಹಾರಾಜರವರೂ ಬೇಸಿಗೆಯಲ್ಲಿ ಇಲ್ಲಿಗೆ ಹೋಗಿ ವಾಸಮಾಡುತ್ತಾರೆ. ಎತ್ತರವಾದ ಸ್ಥಳವಾದುದರಿಂದ ಬೇಸಿಗೆಯುದ್ವೇಗ ಕಡಿಮೆ ; ಚಳಿ ಹೆಚ್ಚು.

೧೪. ಮಂಗಳೂರು.—ದೊಡ್ಡ ವ್ಯಾಪಾರಸ್ಥಳ. ನೇಯ್ಗೆಯ ಕಾರ್ಖಾನೆಗಳೂ, ಅಚ್ಚುಕಾರ್ಖಾನೆಗಳೂ, ಇವೆ. ಸೊಗಸಾದ ಒಡವೆಗಳು ತಯಾರಾಗುತ್ತವೆ.


೧೫. ಉಡುಪಿ.—ಯಾತ್ರಾಸ್ಥಳ.

ಸೂಚನೆ.—ಈ ಪಟ್ಟಣಗಳು ಇರುವ ಸ್ಥಳಗಳನ್ನು ಭೂಪಟದ ಮೇಲೆ ತೋರಿಸಬೇಕು. ಸಾಮಾನ್ಯವಾಗಿ ಒಂದೆಡೆಯಿಂದ ಇನ್ನೊಂದೆಡೆಗೆ ಯಾವ ಪದಾರ್ಥವನ್ನು ಏಕೆ ಕಳುಹಿಸುತ್ತಾರೆ. ಯಾವ ಪದಾರ್ಥಗಳನ್ನು ತರಿಸಿಕೊಳ್ಳುತ್ತಾರ ಎಂಬ ವಿಷಯವನ್ನು ಚರ್ಚಿಸಿ, ಉದಾಹರಣೆ ಕೊಟ್ಟು, ಆಮದು, ರಫ್ತು, ಎಂಬ ಅರ್ಥವನ್ನು ವ್ಯಕ್ತಗೊಳಿಸುವುದು. ರಾಜ್ಯಭಾರಕ್ಕೆ ಅನುಕೂಲವಿದ್ದಂತೆ ರಾಜ್ಯವನ್ನು ಡಿಸ್ಟ್ರಿಕ್ಟುಗಳಾಗಿಯೂ, ಜಿಲ್ಲೆಗಳಾಗಿಯೂ, ವಿಭಾಗಿಸುವರು. ಸಾಮಾನ್ಯವಾಗಿ ಐದು ವರ್ಷಕ್ಕೊಂದಾವೃತ್ತಿ ಹೊಸ ಗೌರ್ನರವರನ್ನು ಬ್ರಿಟಿಷ್ ಸರ್ಕಾರದವರು ಕಳುಹಿಸುವರೆಂದು ತಿಳಿಸಿ, ಈ ಪಾಠಹೇಳುವ ಕಾಲದಲ್ಲಿ ಗೌರ್ನರು ಯಾರೆಂಬುದನ್ನು ತಿಳಿಸುವುದು.

---

## ೨೮. ಮದ್ರಾಸು ಆಧಿಪತ್ಯಕ್ಕೆ ಒಳಪಟ್ಟ ಆಶ್ರಿತ ಸಂಸ್ಥಾನಗಳು.

ಮದ್ರಾಸು ಆಧಿಪತ್ಯಕ್ಕೆ—೧. ತಿರುವಾಂಕೂರು, ೨. ಕೊಚ್ಚಿ, ೩. ಪುದುಕೋಟೆ ಎಂಬ ಮೂರು ಸಂಸ್ಥಾನಗಳು ಒಳಪಟ್ಟಿವೆ.



ಶ್ರೀರಂಗದಲ್ಲಿ ಕುದುರೆಕಂಭಸಾಲಿನ ಮಂಟಪ.



ತಿರುಚನಾಪಲ್ಲಿ — ಮಾತೃಭೂತೇಶ್ವರ ದೇವಸ್ಥಾನ.

## ೧. ತಿರುವಾಂಕೂರು.

ಇದು ಮದ್ರಾಸು ಅಧಿಪತ್ಯದ ನೈರುತ್ಯದಲ್ಲಿ ಪಶ್ಚಿಮಘಟ್ಟಗಳಿಗೂ, ಪಶ್ಚಿಮ ಸಮುದ್ರಕ್ಕೂ, ನಡುವೆ ಇದೆ. ಸುಮಾರು ೭,೦೯೧ ಚದರಮೈಲಿ ವಿಸ್ತಾರವುಳ್ಳುದಾಗಿದೆ. ಜನಸಂಖ್ಯೆಯು ೨,೯೫,೦೦೦.

ಘಟ್ಟದ ಉತ್ತರಭಾಗದಲ್ಲಿಯೂ, ದಕ್ಷಿಣಭಾಗದಲ್ಲಿಯೂ, ಬೆಟ್ಟಸಾಲುಗಳಿವೆ. ಆನೆಮುಡಿ ಎಂಬುದೇ ಅತ್ಯುನ್ನತವಾದ ಶಿಖರ. ಪೆರಿಯಾರ್ ಇಲ್ಲಿಯ ಮುಖ್ಯ ನದಿ. ಇಲ್ಲಿ ಎಲ್ಲಾಕಡೆಯೂ ಸಮೃದ್ಧಿಯಾಗಿ ಮಳೆಯಾಗುತ್ತದೆ. ಇಲ್ಲಿಯ ಕಾಡುಗಳಲ್ಲಿ ಒಳ್ಳೆಯ ತೊಲೆಗಳಾಗುವ ಮರಗಳು ಸಿಕ್ಕುತ್ತವೆ; ಕಾಡಾನೆಗಳೂ ಇವೆ. ಇವುಗಳ ದಂತದಿಂದ ಸರ್ಕಾರದವರಿಗೆ ಹುಟ್ಟುವಳಿಯಾಗುತ್ತದೆ.

ಈ ದೇಶದ ಜನರು ಮಾತನಾಡುವ ಭಾಷೆಗೆ ಮಲೆಯಾಳವೆಂದು ಹೆಸರು. ಇಲ್ಲಿ ಬತ್ತ, ತೆಂಗು, ಅಡಿಕೆ, ಮೆಣಸು, ಬಾಳೆ, ಇವು ಬೆಳೆಯಾಗುತ್ತವೆ. ಬೆಟ್ಟಗಳಲ್ಲಿ ಏಲಕ್ಕಿ ವಿಶೇಷವಾಗಿ ಬೆಳೆಯುತ್ತದೆ; ಕಾಫಿಯನ್ನು ಪೈರುಮಾಡುತ್ತಾರೆ.

ಈ ಸಂಸ್ಥಾನದಿಂದ ಇಂಗ್ಲೀಷು ಸರ್ಕಾರಕ್ಕೆ ಪಗದಿ ಸಲ್ಲುತ್ತಿದೆ. ಇಲ್ಲಿಯ ಮಹಾರಾಜರವರು ದಿವಾನರ ಮೂಲಕ ರಾಜ್ಯಭಾರ ಮಾಡುತ್ತಾರೆ.

ಮುಖ್ಯಪಟ್ಟಣಗಳು.—೧. ತಿರುವನಂತಪುರ (ಟ್ರಾವಂಕೂರು).—ರಾಜಧಾನಿ. ಇಲ್ಲಿ ಅನಂತಪದ್ಮನಾಭಸ್ವಾಮಿಯ ದೇವಾಲಯವು ಪ್ರಖ್ಯಾತವಾಗಿದೆ.

೨. ಕೊಲ್ಲಂ (ಕ್ವಿಲಾನ್).—ಪ್ರಸಿದ್ಧವಾದ ಬಂದರು. ಇಲ್ಲಿ ಒಂದು ಸೈನ್ಯವಿದೆ.

೩. ಅಲಪ್ಪಿ.—ಬಹಳವಾಗಿ ವ್ಯಾಪಾರ ನಡೆಯುವ ಬಂದರು.

ಸೂಚನೆ.—ಬಂದರು ಎಂದರೇನು? ಇಲ್ಲಿ ಹೆಚ್ಚಾಗಿ ವ್ಯಾಪಾರ ನಡೆಯುವುದಕ್ಕೆ ಕಾರಣವೇನು? ಇಲ್ಲಿ ಹಡಗು ನಿಲ್ಲಲು ಏನು ಅನುಕೂಲ್ಯವಿರುತ್ತದೆ? ಎಂಬುದನ್ನು ಉಪಾಧ್ಯಾಯರು ವಿವರಿಸಬೇಕು. ನೈರುತ್ಯದಿಕ್ಕು ಯಾವುದು ಎಂಬುದನ್ನೂ? ಹಾಗೆಯೇ ಇತರ ದಿಗ್ಭಾಗಗಳನ್ನೂ ಸ್ಪಷ್ಟವಾಗಿ ತಿಳಿಸುವುದು. ಸ್ವಭಾವವಾದ ಬಂದರಿಗೂ, ಕಟ್ಟಿದ ಬಂದರಿಗೂ ಇರುವ ವ್ಯತ್ಯಾಸವನ್ನು ವಿವರಿಸಬೇಕು.

## ೨. ಕೊಚ್ಚಿ.

ಈ ಚಿಕ್ಕ ಸಂಸ್ಥಾನವು ಪಶ್ಚಿಮ ತೀರದಲ್ಲಿ ತಿರುವಾಂಕೂರಿಗೂ, ಮಲಬಾರಿಗೂ, ನಡುವೆ ಇದೆ. ಇದರ ವಿಸ್ತೀರ್ಣ ಸುಮಾರು ೧,೩೬೨ ಚದರಮೈಲಿ. ಜನಸಂಖ್ಯೆ ೮,೧೨,೦೦೦ ಇಲ್ಲಿಯ ಜನರು ಮಲೆಯಾಳ ಭಾಷೆಯನ್ನಾಡುತ್ತಾರೆ.

ಇಲ್ಲಿಯು ರಾಜರು ದಿವಾನರ ಮೂಲಕ ರಾಜ್ಯಭಾರ ಮಾಡುತ್ತಾರೆ.

ಮುಖ್ಯಪಟ್ಟಣಗಳು.—೧. ಯರ್ನಾಕೂಳಂ.—ರಾಜಧಾನಿ. ಇಲ್ಲಿ ಒಂದು ಇಂಗ್ಲಿಷ್ ಪಾಠಶಾಲೆ ಇರುವುದು.

೨. ಕೊಚಿನ್.—ತೀರಪಟ್ಟಣ.

### ೩. ಪುದುಕೋಟೆ.

ಈ ಚಿಕ್ಕ ಸಂಸ್ಥಾನವು ತಿರುಚನಾಪಲ್ಲಿಗೆ ದಕ್ಷಿಣದಲ್ಲಿದೆ; ಇಲ್ಲಿಯ ರಾಜರಿಗೆ ತೊಂಡಮಾನ್' ಎಂದು ಬಿರದು. ಇಲ್ಲಿ ಅರವು ಮಾತನ್ನು ಆಡುತ್ತಾರೆ.

ಮುಖ್ಯಪಟ್ಟಣಗಳು.—೧. ಪುದುಕೋಟೆ.—ರಾಜಧಾನಿ. ಇಲ್ಲಿ ಒಳ್ಳೆಯ ಗಂಧದ ಬಿಲ್ಲೆಗಳು ತಯಾರಾಗುತ್ತದೆ.

೨. ಪಾಂಡಿಚರಿ ಅಥವಾ ಪುದುಚೇರಿ.—ಇದು ಫ್ರೆಂಚರಿಗೆ ಸೇರಿದ ವಸತಿಯಾಗಿದೆ.

ಸೂಚನೆ.—ಇಲ್ಲಿಗೆ ಫ್ರೆಂಚರು ಯಾವಾಗ ಬಂದರು ! ಏತಕ್ಕೆ ? ಎಂಬ ವಿಚಾರವನ್ನು ಬಾಲಕರಿಗೆ ತಿಳಿಸುವುದು.

---

## ೨೯. ಕೊಡಗು.

ಇದು ಮೈಸೂರು ದೇಶಕ್ಕೆ ನೈರುತ್ಯದಲ್ಲಿದೆ; ಇದು ಬೆಟ್ಟಗುಡ್ಡಗಳ ಸೀಮೆ; ಸುಮಾರು ೧,೫೮೦ ಚದರಮೈಲಿ ವಿಸ್ತಾರವಾಗಿದೆ. ಜನಸಂಖ್ಯೆ ೩,೮೦,೦೦೦. ಇಲ್ಲಿ ಕಾವೇರಿ ನದಿ ಹುಟ್ಟುತ್ತದೆ. ಇಲ್ಲಿ ಕಾಫಿಯೂ, ಏಲಕ್ಕಿಯೂ, ವಿಶೇಷವಾಗಿ ಬೆಳೆಯುತ್ತವೆ. ಇಲ್ಲಿನ ಕಿತ್ತಿಲೆಹಣ್ಣುಗಳು ಪ್ರಸಿದ್ಧವಾಗಿವೆ. ಇಲ್ಲಿ ಮಾತನಾಡುವ ಭಾಷೆ ಕೊಡಗು.

ಪೂರ್ವದಲ್ಲಿ ಇದು ಕೊಡಗು ರಾಜನಿಂದ ಆಳಲ್ಪಡುತ್ತಿದ್ದಿತು. ಕಡೆಗೆ ಬಂದ ರಾಜನು ಜನಗಳನ್ನು ಬಹುವಾಗಿ ಹಿಂಸೆಪಡಿಸಿದುದರಿಂದ ಜನರು ಬ್ರಿಟಿಷರಿಗೆ ಮೊರೆಯಿಟ್ಟರು. ಆಗ ಬ್ರಿಟಿಷರು ಕೊಡಗನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡರು. ಈಗ ಈ ಸೀಮೆಯು ಚೀಫ್ ಕಮಿಷನರ್ ಎಂಬ ಅಧಿಕಾರಿಯ ಕೈಕೆಳಗಿದೆ ಈ ಅಧಿಕಾರವನ್ನು ಮೈಸೂರು ದೇಶದ ಬ್ರಿಟಿಷ್ ರೆಸಿಡೆಂಟರಿಗೆ ವಹಿಸಿದ್ದಾರೆ.

ಮುಖ್ಯಪಟ್ಟಣಗಳು.—೧. ಮಡಕೇರಿ.—ಮುಖ್ಯಪಟ್ಟಣ.

೨. ವೀರರಾಜೇಂದ್ರಪೇಟೆ —ಇದೊಂದು ದೊಡ್ಡ ಊರು

ಸೂಚನೆ.—ಕೊಡಗಿನ ಉಡಿಗೆ ತೊಡಿಗೆಗಳನ್ನು ತಿಳಿಸುವುದು.

---

## ೩೦. ಹೈದರಾಬಾದು.

ಈ ಸಂಸ್ಥಾನದ ಪೂರ್ವ, ದಕ್ಷಿಣಗಳಲ್ಲಿ ಮದ್ರಾಸ್ ಅಧಿಪತ್ಯವೂ, ಪಶ್ಚಿಮದಲ್ಲಿ ಬೊಂಬಾಯಿ ಅಧಿಪತ್ಯವೂ, ಉತ್ತರದಲ್ಲಿ ಮಧ್ಯಪ್ರಾಂತ್ಯವೂ ಇವೆ. ಇದು ೮೨,೭೦೦ ಚದರಮೈಲಿ ವಿಸ್ತಾರವಾಗಿದೆ. ಇದರ ಜನಸಂಖ್ಯೆ ೧,೧೧,೫೦,೦೦೦.

ಈ ದೇಶವು ಎತ್ತರವಾದ ಭೂಪ್ರದೇಶ. ಸುಮಾರಾಗಿ ಸುತ್ತಲೂ ಬೆಟ್ಟಗಳಿಂದ ಆವೃತವಾಗಿರುವ ಕಾರಣ ಈ ಭೂಪ್ರದೇಶವು ಎತ್ತರವಾಗಿರುತ್ತದೆ. ಇದರಲ್ಲಿ ವೇಣುಗಂಗಾ, ವರದಾ, ಗೋದಾವರಿ, ತುಂಗಭದ್ರ, ಕೃಷ್ಣ, ಈ ನದಿಗಳು ಹರಿಯುತ್ತವೆ. ಇದು ಫಲವತ್ತಾದ ದೇಶ. ಇಲ್ಲಿಯ ವಾಯುಗುಣವು ಆರೋಗ್ಯವಾಗಿದೆ.

ಆಗ್ನೇಯದಲ್ಲಿ ತೆಲುಗೂ, ನೈರುತ್ಯದಲ್ಲಿ ಕನ್ನಡವೂ, ಪಶ್ಚಿಮೋತ್ತರಗಳಲ್ಲಿ ಮರಾಟಿಯೂ, ಪ್ರಚಾರದಲ್ಲಿವೆ. ಇಲ್ಲಿನ ರಾಜಭಾಷೆ ಪಾರ್ಸಿ. ಇಲ್ಲಿ ಹತ್ತಿ, ಹರಳು, ಬತ್ತ, ಗೋಧಿ, ಜೋಳ, ಮೊದಲಾದುವು ಬೆಳೆಯಾಗುತ್ತವೆ. ಸಿಂಗರೇಣಿ ಎಂಬ ಕಡೆಯಲ್ಲಿ ಕಲ್ಲಿದ್ದಲ ಗಣಿಗಳಿವೆ. ಚಿನ್ನದ ಅದಿರು ಈ ಸಂಸ್ಥಾನದಲ್ಲಿ ಸಿಕ್ಕುವಂತಿದೆ. ಇಲ್ಲಿ ಸ್ವಲ್ಪ ಭಾಗದಲ್ಲಿ ರೈಲುಹಾದಿ ಇದೆ.

ಇದು ಮುಸಲ್ಮಾನರ ಸಂಸ್ಥಾನ ; ಇಲ್ಲಿಯ ರಾಜರಿಗೆ ‘ ನಿಜಾಂ ’ ಎಂದು ಬಿರುದು. ಇದು ಒಂದು ಆಶ್ರಿತ ಸಂಸ್ಥಾನ. ಹಿಂದೆ ಇದು ಮೊಗಲಾಯಿ ಚಕ್ರಾಧಿಪತ್ಯಕ್ಕೆ ಸೇರಿತ್ತು. ಮೊಗಲಾಯಿ ಚಕ್ರವರ್ತಿಗಳ ಕಡೆಯವನಾದ (ನಿಜಾಂ) ಸುಬೇದಾರನಿಂದ ಆಳಲ್ಪಡುತ್ತಿದ್ದಿತು. ಈಗಲೂ ಆತನ ವಂಶೀಯರೇ ಆಳುತ್ತಿದ್ದಾರೆ.

ಮುಖ್ಯಸ್ಥಳಗಳು.—೧. ಹೈದರಾಬಾದ್.—ರಾಜಧಾನಿ. ಕೃಷ್ಣಾನದಿಗೆ ಉಪನದಿಯಾದ ಮ್ಯೂಸಾ ನದಿಯ ದಡದಲ್ಲಿದೆ

೨. ಸಿಕಂದರಾಬಾದ್.—ಇಲ್ಲಿ ಬ್ರಿಟಿಷರ ಸೇನೆ ಇದೆ.

೩. ವಾರಾಂಗಲ್ (ಓರಗಲ್ಲು).—ಹಿಂದೆ ತೆಲುಗಾಣ್ಯವೆಂದು ಪ್ರಸಿದ್ಧವಾದ ಹಿಂದೂ ರಾಜ್ಯದ ರಾಜಧಾನಿಯಾಗಿದ್ದಿತು.

೪. ಗೋಲ್ಕೊಂಡ.—ಇಲ್ಲಿ ಮಹಮ್ಮದೀಯರ ಶ್ರೀಮಂತರ ಅನೇಕ ಗೋರಿಗಳಿವೆ. ಇಲ್ಲಿ ಸಿಕ್ಕುವ ವಜ್ರಗಳು ಪ್ರಸಿದ್ಧವಾದುವು.


೫. ಗುಲ್ಬರ್ಗ (ಕಲ್ಬುರ್ಗಿ).—ಹಿಂದ ಬಹಮನಿ ರಾಜರ ರಾಜಧಾನಿಯಾಗಿದ್ದಿತು.

ಸೂಚನೆ.—ಬಹಮನಿ ಅರಸರಿಗೂ, ವಿಜಯನಗರದವರಿಗೂ ನಡೆಯುತ್ತಿದ್ದ ಹೋರಾಟದ ವಿಚಾರವನ್ನು ಇಲ್ಲಿ ಸಂಕ್ಷೇಪವಾಗಿ ಬಾಲಕರಿಗೆ ತಿಳಿಸುವುದು.

೬. ಔರಂಗಾಬಾದ್.—ಇಲ್ಲಿ ಔರಂಗಜೇಬನ ಅರಮನೆ ಇದೆ.

೭. ಎಲ್ಲೋರ, ಅಜಂಟ.—ಇಲ್ಲಿ ಗುಹೆಗಳೊಳಗೆ ಮಾಡಿದ ದೇವಾಲಯಗಳಿವೆ.

ಸೂಚನೆ.—ಹೈದರಾಬಾದು ಸಂಸ್ಥಾನದ ಉಡಿಗೆ ತೊಡಿಗೆಗಳನ್ನು ತೋರಿಸುವ ಚಿತ್ರಗಳನ್ನೂ, ನಾಣ್ಯಗಳನ್ನೂ, ಪ್ರದರ್ಶಿಸುವುದು. ಸಂಸ್ಥಾನದ ಭೂಪಟವನ್ನು ಬರೆಯಿಸುವುದು.




ಕಾವೇರಿಯ ಜಲಾನಯನ ಭೂಮಿ.